ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

06 ಆಗಸ್ಟ್ 2014 ಪುಟ 20 ರೂ. 15/-

ಅನುರಣನ
ವಿಜ್ಞಾನ ಕುರಿತ ಅಂಕಣ



ರೇಪ್ ಪಾಲಿಟಿಕ್ಸ್

ಚಿತ್ರದುರ್ಗ: 'ಕೈ' ಸುಟ್ಟ ಕಾಂಗ್ರೆಸ್ಸಿಗರು




ಮೈಸೂರು
ಪರಶು ವಿರುದ್ಧ ಪೊಲೀಸ್-ಪಿಂಪ್



ಮಂಗಳೂರು
ಚೆಡ್ಡಿ ಸಾಬಿಯ ಮಹಿಳಾ ಸಾಗಾಣಿಕೆ

ಬುಲೆಟ್ ಟ್ರೈನ್‌ಗಳು ಮತ್ತು ಪವಿತ್ರ ಗೋವುಗಳು

ಅಂಚಿನಿಂದ....



ಡಾ.ವಾಸು ಎಚ್.ವಿ.

ಬೇಕೇ ಬೇಕು! 'ನಕಲಿ' ವೈದ್ಯರು ಬೇಕು!

ಪ್ರಸಕ್ತ ವಿಧಾನಸಭಾ ಅಧಿವೇಶನ (14ನೇ ವಿಧಾನಸಭೆಯ 4ನೇ ಅಧಿವೇಶನ) ಒಂದು ಮಹತ್ವವನ್ನು ಹೊಂದಿದೆ. ಸುಮಾರು 15 ವರ್ಷಗಳ ನಂತರ ಇಲ್ಲಿ ಇಲಾಖಾವಾರು ಚರ್ಚೆಗಳು ನಡೆಯುತ್ತಿವೆ. ಇಲಾಖಾವಾರು ಪ್ರಶ್ನೆಗಳು ಮತ್ತು ಸಮಸ್ಯೆಗಳನ್ನು ಒಟ್ಟಿಗೇ ತೆಗೆದುಕೊಂಡು ಅವನ್ನು ಪ್ರತ್ಯೇಕವಾಗಿ ಚರ್ಚಿಸಲಾಗುತ್ತಿದೆ. ಇದರಿಂದ ಅಂತಹ ದೊಡ್ಡ ಸಾಧನೆ ಏನಾಗುತ್ತದೆ? ಕೆಲವರ ಪ್ರಕಾರ ಅಧಿಕಾರಿಗಳನ್ನು ಇದು ಎಚ್ಚರದಲ್ಲಿಡುತ್ತದೆ. ಇದ್ದುದರಲ್ಲಿ ಸಮಗ್ರ ಚರ್ಚೆಗೆ ಅವಕಾಶ ದೊರೆತು, ಆಯಾ ಇಲಾಖೆಗಳ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವುದು ಸಾಧ್ಯವಾಗುತ್ತದೆ. ಹೊಸ ಸಚಿವರು ಮತ್ತು ಶಾಸಕರು (ಅವರಿಗೆ ಬೇಕಿದ್ದಲ್ಲಿ) ಆಡಳಿತವನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಈ ರೀತಿ ಹೇಳುವವರ ಪ್ರಕಾರ ಈ ಸಾರಿಯ ಇಂತಹ ಚರ್ಚೆಗೆ ಕಾರಣರಾದ ಸ್ಪೀಕರ್ ಕಾಗೋಡು ತಿಮ್ಮಪ್ಪ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಂಸೆಗೆ ಅರ್ಹರು.

ನಿಜವಾಗಲೂ ಇದರಿಂದ ಆಗುವ ಉಪಯೋಗದ ಸಂಗತಿಯನ್ನು ನಾವು ಕಾದು ನೋಡೋಣ. ಅಂತಹ ಒಳ್ಳೆಯದ್ದೇನಾದರೂ ನಿಜಕ್ಕೂ ಸಂಭವಿಸಿದರೆ ಅಭಿನಂದನೆಯನ್ನೂ ಹೇಳೋಣ. ಆದರೆ ಹಿಂದಿನ ಕೆಲವು ಸರ್ಕಾರಗಳು ಇಂತಹ ಚರ್ಚೆಗೆ ಸಿದ್ಧರಿರಲಿಲ್ಲವೆಂಬುದನ್ನೂ, 'ದೇಶದ ಸಕಲ ಸಮಸ್ಯೆಗಳಿಗೆ ಏಕಮಾತ್ರ ಪರಿಹಾರ'ವಾದ ಮೋದಿ ಮಹಾಶಯರು ಗುಜರಾತ್‌ನ ಮುಖ್ಯಮಂತ್ರಿಯಾಗಿದ್ದಾಗ ಅಲ್ಲಿನ ವಿಧಾನಸಭೆಯಲ್ಲಿ ಯಾವ ಚರ್ಚೆಗಳೂ ನಡೆಯುತ್ತಿರಲಿಲ್ಲವೆಂಬುದನ್ನೂ ಗಮನಿಸೋಣ. ಗುಜರಾತ್‌ನ ಈ ಮಾದರಿಯ ಕುರಿತು ಹಿಂದೊಮ್ಮೆ ನಮ್ಮ ಸಂಪಾದಕರು ತಮ್ಮ ಅಂಕಣದಲ್ಲಿ ಬರೆದಿದ್ದರಿಂದ ಅದನ್ನು ವಿಸ್ತರಿಸಲು ಹೋಗುವುದಿಲ್ಲ.

ಕರ್ನಾಟಕದ ವಿಧಾನಸಭೆಯಲ್ಲಿ ಇಲಾಖಾವಾರು ಚರ್ಚೆ ನಡೆದದ್ದರಿಂದ ಆರೋಗ್ಯ ಇಲಾಖೆಗೆ ಸಂಬಂಧಿಸಿದ ಒಂದು ಸಂಗತಿ ಗಮನ ಸೆಳೆಯಿತು. ವೈದ್ಯರುಗಳಿಗೆ ಅತ್ಯಂತ ಹೆಚ್ಚಿನ ಸಂಬಳ ನೀಡಬೇಕೆಂದೂ, ಸರ್ಕಾರೀ ಸೌಲಭ್ಯ ಪಡೆದ ವೈದ್ಯ ಪದವೀಧರರಿಗೆ ಕಡ್ಡಾಯ ಗ್ರಾಮೀಣ ಸೇವೆ ಮಾಡಿಸಬೇಕೆಂದೂ, ನಕಲೀ ವೈದ್ಯರನ್ನು ತಡೆಗಟ್ಟಬೇಕೆಂದೂ ಆ ಚರ್ಚೆಯಲ್ಲಿ ಪ್ರಸ್ತಾಪವಾಗಿದೆ. ಯಾವ ಪತ್ರಿಕೆಯೂ ಇದರ ಬಗ್ಗೆ ವಿಸ್ತೃತವಾಗಿ ಚರ್ಚಿಸಲು ಹೋಗಲಿಲ್ಲವಾದ್ದರಿಂದ, ಯಾವ ಟಿವಿ ಚಾನೆಲ್ಲೂ ಪ್ಯಾನೆಲ್ ಚರ್ಚೆಯನ್ನು ಅದರ ಬಗ್ಗೆ ಏರ್ಪಡಿಸದೇ ಇದ್ದುದರಿಂದ ಮತ್ತು ಸ್ವತಃ ಒಬ್ಬ ವೈದ್ಯಕೀಯ ಪದವೀಧರನೂ ಆಗಿರುವುದರಿಂದ ಇದರ ಬಗ್ಗೆ ನಾಲ್ಕು ಮಾತನ್ನು ಇಲ್ಲಿ ಬರೆಯದೇ ಇರುವುದು ಅಪಚಾರವಾಗಬಹುದೆಂಬ ಕಾರಣದಿಂದ ನಿಮ್ಮೊಂದಿಗೆ ಈ ಅಪದ್ಧವನ್ನು ಆಡಲೇಬೇಕಿದೆ. ಬೇಕೇ ಬೇಕು! ನಕಲಿ ವೈದ್ಯರು ಬೇಕು!! ಅಸಲೀ ವೈದ್ಯರು ಎನ್ನುವಲ್ಲಿ ಪ್ರೂಫ್ ತಪ್ಪು ಆಗಿದೆ ಎಂದು ಭಾವಿಸಬೇಡಿ. ನಕಲಿ ವೈದ್ಯರು ಬೇಕೆಂದೇ ಈ ಘೋಷಣೆ.


ಹೌದು, ವಿಧಾನಸಭೆಯಲ್ಲಿ ಚರ್ಚೆ ನಡೆದದ್ದು ನಕಲೀ ವೈದ್ಯರ ವಿರುದ್ಧ. ನಮ್ಮ ಜನಪ್ರತಿನಿಧಿಗಳೇ ನಕಲೀ ವೈದ್ಯರ ವಿರುದ್ಧ ಅಷ್ಟು ಖಚಿತವಾಗಿ ಮಾತುಗಳನ್ನಾಡಿದ ಮೇಲೆ ನಾವು ಅವರನ್ನು ಸಮರ್ಥಿಸುವುದು ಸರಿಯೇ ಎಂಬ ನಿಮ್ಮ ಗುಮಾನಿ ಅಸಲೀನೇ ಎಂಬುದು ಗ್ಯಾರಂಟಿ. ಆದರೆ ಅದರ ಬಗ್ಗೆ ಯಾವುದಾದರೂ ಅಭಿಪ್ರಾಯಕ್ಕೆ ಬರುವ ಮುಂಚೆ ದಯವಿಟ್ಟು ಕೆಲವು ಸಂಗತಿಗಳನ್ನು ಗಮನಿಸೋಣ.

ಜುಲೈ 14, 2013: ವೈದ್ಯಕೀಯ ಪದವಿ ಪಡೆದ ವಿದ್ಯಾರ್ಥಿಗಳಿಗೆ ಒಂದು ವರ್ಷ ಗ್ರಾಮೀಣ ಸೇವೆಯನ್ನು ಕಡ್ಡಾಯ ಮಾಡುವ ಕಾಯ್ದೆಯನ್ನು ರಾಜ್ಯದ ವಿಧಾನ ಮಂಡಲದ ಎರಡೂ ಸದನಗಳು ಒಪ್ಪಿವೆ. ರಾಷ್ಟ್ರಪತಿಗಳ ಅಂಕಿತ ಬಾಕಿ ಉಳಿದಿದೆ. ಅದಕ್ಕಾಗಿ ನಾವು ಒತ್ತಾಯಿಸುತ್ತಿದ್ದೇವೆ. ಒಪ್ಪಿದ ನಂತರ, ಗ್ರಾಮೀಣ ಭಾಗಕ್ಕೆ ಹೆಚ್ಚು ವೈದ್ಯರು ದೊರೆಯುತ್ತಾರೆ - ಯು.ಟಿ.ಖಾದರ್, ಆರೋಗ್ಯ ಸಚಿವರು ಕರ್ನಾಟಕ ಸರ್ಕಾರ, ಮಂಗಳೂರಿನಲ್ಲಿ ಹೇಳಿದ್ದು.

ಜುಲೈ 20, 2014: ವೈದ್ಯಕೀಯ ಪದವಿ ಪಡೆದ ವಿದ್ಯಾರ್ಥಿಗಳಿಗೆ ಒಂದು ವರ್ಷ ಗ್ರಾಮೀಣ ಸೇವೆಯನ್ನು ಕಡ್ಡಾಯ ಮಾಡುವ ಕಾಯ್ದೆಗೆ ರಾಷ್ಟ್ರಪತಿಗಳ ಅಂಕಿತ ಬಾಕಿ ಉಳಿದಿದೆ. ಅದು ಆದರೆ, ಗ್ರಾಮೀಣ ಭಾಗಕ್ಕೆ ಹೆಚ್ಚು ವೈದ್ಯರು ದೊರೆಯುತ್ತಾರೆ - ಯು.ಟಿ.ಖಾದರ್, ಆರೋಗ್ಯ ಸಚಿವರು ಕರ್ನಾಟಕ ಸರ್ಕಾರ, ವಿಧಾನಮಂಡಲದಲ್ಲಿ (ಒಂದು ವರ್ಷದ ನಂತರ).


ಜುಲೈ 14, 2013: ಆರೋಗ್ಯ ಇಲಾಖೆಯಲ್ಲಿ 350 ಎಂಬಿಬಿಎಸ್ ವೈದ್ಯರ ಹುದ್ದೆಗಳು ಮತ್ತು 1,400 ಸ್ನಾತಕೋತ್ತರ ವೈದ್ಯರ ಹುದ್ದೆಗಳು ಖಾಲಿ ಉಳಿದಿವೆ. ಅದರಲ್ಲಿ ಕೆಲಸ ಮಾಡಲು ನಾವು ವೈದ್ಯರನ್ನು ಆಹ್ವಾನಿಸಿದ್ದೇವೆ. ಕ್ರಮವಾಗಿ 30,000 ರೂ ಮತ್ತು 65,000 ರೂ ಸಂಬಳ ನೀಡುತ್ತೇವೆ. ಬಂದರೆ, ಕೂಡಲೇ ನೇಮಕಾತಿ ಆದೇಶವನ್ನು ನೀಡುತ್ತೇವೆ. ಅದರ ಜೊತೆಗೆ ಆರೋಗ್ಯ ಇಲಾಖೆಯಲ್ಲಿ ಒಟ್ಟು 5,110 ಹುದ್ದೆಗಳು ಖಾಲಿ ಇವೆ. ಎಲ್ಲವನ್ನೂ ಸದ್ಯದಲ್ಲೇ ತುಂಬಲಾಗುವುದು.

ಜುಲೈ 15, 2013: ವಿಧಾನಸಭೆಯಲ್ಲಿ ಬಿಜೆಪಿಯ ಕೆ.ಗೋವಿಂದರಾಜು ಅವರು ಕೇಳಿದ ಪ್ರಶ್ನೆಗೆ ಯು.ಟಿ.ಖಾದರ್ ಅವರ ಉತ್ತರ: ಸರ್ಕಾರೀ ಸೌಲಭ್ಯ ಪಡೆದುಕೊಂಡು ಎಂಬಿಬಿಎಸ್ ಮಾಡಿದ ವೈದ್ಯರುಗಳು ಗ್ರಾಮೀಣ ಸೇವೆ ಸಲ್ಲಿಸದೇ ಇದ್ದರೆ, ಅವರಿಗೆ 10 ಲಕ್ಷ ರೂ. ದಂಡ ವಿಧಿಸುವ ಬಗ್ಗೆ ಯೋಚಿಸುತ್ತಿದ್ದೇವೆ. ಹಾಲಿ ಅದು ಒಂದು ಲಕ್ಷ ರೂ. ಇದ್ದು, 900 ಜನ ವೈದ್ಯರುಗಳು ಹಳ್ಳಿಗಳಿಗೆ ಹೋಗುವ ಬದಲಿಗೆ ಹಣ ಕಟ್ಟಲು ಮುಂದಾಗಿದ್ದಾರೆ. ಸ್ನಾತಕೋತ್ತರ ಡಿಪ್ಲೊಮಾ ಮಾಡಿದವರಿಗೆ 25 ಲಕ್ಷ ರೂ. ದಂಡ ವಿಧಿಸುವ ಯೋಚನೆಯಿದೆ. ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 600 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಉದ್ದೇಶಿಸಿತ್ತು. ಅದಕ್ಕೆ 252 ವೈದ್ಯರು ಮಾತ್ರ ಅರ್ಜಿ ಹಾಕಿದರು. ಕೌನ್ಸೆಲಿಂಗ್‌ಗೆ 137 ಜನರು ಮಾತ್ರ ಬಂದರು. ಅವರಲ್ಲಿ 75 ಜನರು ಮಾತ್ರ ಸೇವೆಗೆ ಹಾಜರಾಗಿದ್ದಾರೆ. ಆಯುಷ್ ವೈದ್ಯರುಗಳಿಗೆ ಒಂದು ವರ್ಷದ ಅಲೋಪತಿ ತರಬೇತಿ ನೀಡಿ, ಅವರನ್ನೇ ಗ್ರಾಮೀಣ ಭಾಗಗಳಿಗೆ ನಿಯೋಜಿಸುವ ಕುರಿತು ಸರ್ಕಾರ ಚಿಂತಿಸುತ್ತಿದೆ.



ಜುಲೈ 20, 2013: ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ (ಕಲಂ 371-ಜೆ) ನೀಡುವ ವಿಚಾರ ಅಂತಿಮಗೊಂಡ ಕೂಡಲೇ ನೇಮಕಾತಿ ಆದೇಶವನ್ನು ನೀಡಲಾಗುವುದು. ಅದೇ ರೀತಿ ಗ್ರಾಮೀಣ ಸೇವೆ ಕಡ್ಡಾಯಗೊಳಿಸುವ ಕಾಯ್ದೆಗೆ ಅಂಕಿತವಾದರೆ ಸರ್ಕಾರೀ ಆಸ್ಪತ್ರೆಗಳ ಸ್ಥಿತಿ ಸುಧಾರಿಸುವುದು - ವಿಧಾನಸಭೆಯಲ್ಲಿ ಕೆಜೆಪಿಯ ಯು.ಬಿ.ಬಣಕಾರ ಕೇಳಿದ ಪ್ರಶ್ನೆಗೆ, ಆರೋಗ್ಯ ಸಚಿವ ಯು.ಟಿ.ಖಾದರ್ ಅವರ ಉತ್ತರ.

ಜನವರಿ 28, 2014: ವಿಧಾನ ಮಂಡಲದಲ್ಲಿ ಬಿಜೆಪಿಯ ಭಾರತಿ ಶೆಟ್ಟಿಯವರಿಗೆ ಉತ್ತರ ನೀಡುತ್ತಾ ಯು.ಟಿ.ಖಾದರ್: ಸರ್ಕಾರೀ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ವಿಪರೀತವಿರುವುದರಿಂದ, ಖಾಸಗಿ ವೈದ್ಯರನ್ನು ಬಾಡಿಗೆಗೆ ತೆಗೆದುಕೊಳ್ಳುವ ಕುರಿತು ಯೋಜಿಸಲಾಗುತ್ತಿದೆ. ಅವರು ವಾರಕ್ಕೆ 2 ದಿನ ಬಂದರೂ ಸಾಕು. ಗಂಟೆಗಳ ಲೆಕ್ಕದಲ್ಲಿ ಅಥವಾ ಪ್ರತಿ ರೋಗಿಗೆ ಇಷ್ಟು ಎಂಬ ಲೆಕ್ಕದಲ್ಲಿ ಹಣ ನೀಡಲು ಸರ್ಕಾರ ಸಿದ್ಧವಿದೆ.



ಜೂನ್ 4, 2014: ಮಂಗಳೂರಿನಲ್ಲಿ ಯು.ಟಿ.ಖಾದರ್: ರಾಜ್ಯದಲ್ಲಿ 1,980 ನಕಲಿ ವೈದ್ಯರನ್ನು ಪತ್ತೆ ಹಚ್ಚಲಾಗಿದೆ.

ಜುಲೈ 16, 2014: ವಿಧಾನ ಮಂಡಲದಲ್ಲಿ ಯು.ಟಿ.ಖಾದರ್ : ರಾಜ್ಯದಲ್ಲಿ 2683 ನಕಲಿ ವೈದ್ಯರನ್ನು ಗುರುತಿಸಲಾಗಿದೆ. ಹಾಲಿ ಇರುವ ದಂಡದ ಪ್ರಮಾಣ ಬಹಳ ಕಡಿಮೆ ಇರುವುದರಿಂದ (ಮೊದಲ ಬಾರಿಗೆ ಸಿಕ್ಕಿ ಹಾಕಿಕೊಂಡರೆ 100 ರೂ., ಎರಡನೇ ಬಾರಿಗೆ 500 ರೂ., ಮೂರನೇ ಬಾರಿಗೆ 1000 ರೂ. ದಂಡ ಮತ್ತು 2 ವರ್ಷ ಶಿಕ್ಷೆ) ಅದನ್ನು ಹೆಚ್ಚಿಸಲು 'ಕರ್ನಾಟಕ ಆಯುರ್ವೇದ, ನ್ಯಾಚುರೋಪತಿ, ಸಿದ್ಧ, ಯುನಾನಿ ಮತ್ತು ಯೋಗ ಪ್ರಾಕ್ಟೀಷನರ್ಸ್ ರಿಜಿಸ್ಟ್ರೇಷನ್ ಮತ್ತು ಮೆಡಿಕಲ್ ಪ್ರಾಕ್ಟೀಷನರ್ಸ್ ಇತರೆ ಕಾಯ್ದೆ 1961'ಕ್ಕೆ ತಿದ್ದುಪಡಿ ತಂದು ಅದನ್ನು 25 ಸಾವಿರ, 50 ಸಾವಿರ ಮತ್ತು 2 ವರ್ಷಗಳ ಶಿಕ್ಷೆಯೊಂದಿಗೆ 5 ಲಕ್ಷ ರೂ. ದಂಡವನ್ನು ವಿಧಿಸುವ ಕುರಿತು ಯೋಜಿಸಿದೆ.

ಕರ್ನಾಟಕ ಸರ್ಕಾರದಲ್ಲಿ 'ಚೆನ್ನಾಗಿ ಕೆಲಸ ಮಾಡುತ್ತಾರೆ' ಎಂಬ ಹೆಸರಿರುವ (ಕಳೆದ ವರ್ಷ ಟಿವಿ ವಾಹಿನಿಯೊಂದರ ಪ್ರಕಾರ ಕಾರ್ಯದಕ್ಷತೆಯಲ್ಲಿ ನಂ.1 ಎಂಬ ಕೀರ್ತಿ ಪಡೆದುಕೊಂಡಿರುವ) ಯು.ಟಿ.ಖಾದರ್ ಅವರು ತಮ್ಮ ಇಲಾಖೆಗೆ ಸಂಬಂಧಿಸಿದ ಒಂದೇ ಸಂಗತಿಯ ಕುರಿತು ಒಂದು ವರ್ಷದ ಅವಧಿಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ನೀಡಿರುವ ಹೇಳಿಕೆಗಳು ಮೇಲೆ ಇವೆ. ಒಂದು ಆಸ್ಪತ್ರೆಯಲ್ಲಿ ವೈದ್ಯರ ಪಾತ್ರ ಬಹಳ ಪ್ರಮುಖ ಎಂಬುದನ್ನು ಒಪ್ಪದಿರುವವರು ಯಾರೂ ಇಲ್ಲ, ಆದರೆ ಸರ್ಕಾರೀ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ವೈದ್ಯರು ಬರುತ್ತಿಲ್ಲ, ಒಂದು ವೇಳೆ ಬಂದರೂ, ಉಳಿಯುವುದಿಲ್ಲ, ಉಳಿದರೂ ಅವರು ಸರ್ಕಾರೀ ಆಸ್ಪತ್ರೆಗಳಲ್ಲಿ ಕೆಲಸ ಮಾಡುವುದಕ್ಕಿಂತ ತಮ್ಮ ಖಾಸಗಿ ಪ್ರಾಕ್ಟೀಸ್‌ಗೆ ಹೆಚ್ಚಿನ ಗಮನ ನೀಡುತ್ತಾರೆ. ಹೀಗಾಗಿ ಇದು ಸರ್ಕಾರಕ್ಕೆ ದೊಡ್ಡ ಸವಾಲಾಗಿದೆ. ಅದಕ್ಕಾಗಿ ಅವರ ಸಂಬಳ ಹೆಚ್ಚು ಮಾಡಲಾಗಿದೆ; ಆಸ್ಪತ್ರೆಗಳಲ್ಲಿ ನೆಟ್ಟಗೆ ಕೆಲಸ ಮಾಡದಿದ್ದರೂ ಕ್ರಮ ತೆಗೆದುಕೊಳ್ಳುವುದಿಲ್ಲ, ಖಾಸಗಿ ವೈದ್ಯರು ಬಂದು ಇಲ್ಲಿ ಕೆಲವು ಗಂಟೆಗಳು ಕೆಲಸ ಮಾಡಿ, ಆ ಮೂಲಕ ತಮ್ಮ ಖಾಸಗಿ ಪ್ರಾಕ್ಟೀಸಿಗೆ ಇಲ್ಲಿಂದಲೂ ರೋಗಿಗಳನ್ನು ಕೊಂಡೊಯ್ಯುವ ಅವಕಾಶ ಮಾಡಿಕೊಡಲು ಸರ್ಕಾರ ಮುಂದಾ ಇಷ್ಟಾಗಿದ್ದರೂ, ಸರ್ಕಾರದ ಸಮಸ್ಯೆ ಬಗೆಹರಿಯುತ್ತಿ

ಅದನ್ನೇ ವಿಧಾನಮಂಡಲದಲ್ಲೂ ಚರ್ಚಿಸಲಾಗಿದೆ. ಬಂದಿರುವ ಸಲಹೆ ಏನೆಂದರೆ ವೈದ್ಯರ ಸಂಬಳವನ್ನು ಹೆಚ್ಚಿಸಿ ಎಂದು. ಮಾಜಿ ಆರೋಗ್ಯ ಸ ಚೆಲುವರಾಯಸ್ವಾಮಿ 'ಇವರು ಜೀವ ಉಳಿಸುತ್ತಾರೆ, ಮಿಕ್ಕೆಲ್ಲರಿಗಿಂತ ಹೆಚ್ಚು ಸಂಬಳ ಕೊಟ್ಟರೆ ಏನು ತ ಎಂತಲೂ ಕೇಳಿದ್ದಾರೆ. ಸರಿ, ಇನ್ನೂ ಹೆಚ್ಚು ಸಂಬಳ ಕೊ ಈ ಅಲೋಪತಿ ವೈದ್ಯರುಗಳು ಬಂದು ಗ್ರಾಮೀ ಪ್ರದೇಶದಲ್ಲಿ ಕೆಲಸ ಮಾಡುತ್ತಾರೆಯೇ? ಒಂದು ಬಂದರೂ, ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದ ಗೃಹದಲ್ಲಿ ವಾಸಿಸಿ ಜನರಿಗೆ ಸೇವೆ ಸಲ್ಲಿಸುತ್ತಾರೆ ಖಂಡಿತಾ ಇಲ್ಲ.

ಏಕೆ? ಈ ಸಮಸ್ಯೆಯ ಮೂಲ ನಮ್ಮ ವೈದ್ಯಕೀಯ ವ್ಯವಸ್ಥೆ ಕಟ್ಟಿರುವ ಕ್ರಮದಲ್ಲೇ ಇದೆ. ಇದು ಡಾಕ್ಟರ್ ಆಧಾರಿತ ವೈದ್ಯಕೀಯ ಮತ್ತು ದಿನೇದಿನೇ ಹೆಚ್ಚೆಚ್ಚು ವಾಣಿಜ್ಯೀಕರಣಗೊಳ್ಳುತ್ತಿರು ಕಾರ್ಪೋರೇಟೀಕರಣಗೊಳ್ಳುತ್ತಿರುವ, ಅಮಾನವೀಯವೂ, ಕ್ರೂರವೂ ಆಗು ವೈದ್ಯಕೀಯ ವ್ಯವಸ್ಥೆ. ಹಾಗಾಗಿ ಒಂದೇ ಆಸ್ಪತ್ರೆಯಲ್ಲಿ ದಿನಕ್ಕೆ 2 ಲಕ್ಷ ರೂ. ಸಂಪಾದಿಸುವ ವೈದ್ಯರೂ, ತಿಂಗಳಿಗೆ 5 ಸಾವಿರ ಸಂಬಳವನ್ನೂ ಪಡೆ ಇತರೆ ಸಿಬ್ಬಂದಿಯೂ ಇರುವ ವ್ಯವಸ್ಥೆ ನಮ್ಮಲ್ಲಿದೆ. ತಿಂಗಳಿಗೆ 100 300ರಷ್ಟು ಆಪರೇಷನ್‌ಗಳನ್ನು ಮಾಡಲೇಬೇಕು ಎಂಬ ಟಾರ್ಗೆಟ್ ಕೊ ವಾರ್ಷಿಕ ಕೆಲವು ಕೋಟಿಗಳ ಸಂಪಾದನೆಯನ್ನು ವೈದ್ಯರಿಗೆ ಖಾತರಿಪಡಿ ಆಸ್ಪತ್ರೆಗಳು ಬೆಂಗಳೂರಿನಲ್ಲಿ ಹೆಚ್ಚಾಗುತ್ತಿವೆ. ಅಂತಹ ದೊಡ್ಡ ಆಸ್ಪತ್ರೆ ಮರಣ ಪ್ರಮಾಣ ಶೇ.7ರಿಂದ 8ರಷ್ಟಿದೆ. (ಸಾಮಾನ್ಯವಾಗಿ ಇತರ ಆಸ್ಪತ್ರೆ ಮರಣ ಪ್ರಮಾಣ ಶೇ.2ರಿಂದ 3 ಇದೆ). ಅಂದರೆ ವೈದ್ಯ ತಿಜೋರಿಯನ್ನೂ, ಆಸ್ಪತ್ರೆಯ ಮಾಲೀಕ ಕಾರ್ಪೋರೇಟ್‌ಗಳ ತಿಜೋರಿ ಭದ್ರಪಡಿಸಲು ಕ್ರೂರ ಯೋಜನೆಗಳಿಗೆ ಮುಂದಾಗುವ ಪರಿಸ್ಥಿತಿ

ಇಂತಹ ಪರಿಸ್ಥಿತಿಯನ್ನು ಬೆಳೆಯಗೊಟ್ಟು, ಅಲ್ಲಿ ವೈದ್ಯರು ತಿಂಗಳಿಗೆ 2 ಲಕ್ಷ ಸಂಪಾದಿಸುವುದು ಮಾಮೂಲಿ ಎಂಬಂತಾ ಅದಕ್ಕಿಂತ ಕಡಿಮೆ ಸಂಬಳ ಸಿಗುವ ಸರ್ಕಾರೀ ವ್ಯವಸ್ಥೆಗೆ ವೈ ಬರುವುದು ಸಾಧ್ಯವೇ? ತಿಂಗಳಿಗೆ ಕನಿಷ್ಠ 10 ಲಕ್ಷ ಸಂಪಾದಿಸು ಇಂದಿನ ವೈದ್ಯಕೀಯ ವಿದ್ಯಾರ್ಥಿಗಳ ಮುಂದಿನ ಗುರಿಯಾಗಿರ ಅಷ್ಟನ್ನು ಸರ್ಕಾರ ಕೊಡಲು ಸಿದ್ಧವಾಗಬೇಕೇ? ಸರ್ಕಾರೀ ವ್ಯ ವಿಚಾರವನ್ನು ಪಕ್ಕಕ್ಕಿಡೋಣ. ಈ ರೀತಿ ವೈದ್ಯರನ್ನು ತಲೆಗಿಂತ ಕೂರಿಸಿಕೊಂಡಿರುವ (Top heavy) ವ್ಯವಸ್ಥೆ ಅಮಾನವೀಯವಾದುದು ಮತ್ತು ಅಂತಹ ಒಂದು ವ್ಯವಸ್ಥೆಯು ಯಾ ಪ್ರಜಾಪ್ರಭುತ್ವದಲ್ಲಿ ಇರಬಾರದು ಅಲ್ಲವೇ? ಇದನ್ನೇ ಬದಲಾಯಿ ಅದನ್ನು ಒಂದೇ ಸಮನೆ ಬೆಳೆಯಗೊಡುತ್ತಾ, ಸರ್ಕಾರೀ ಆಸ್ಪ ಅದರಲ್ಲೂ ಗ್ರಾಮೀಣ ಪ್ರದೇಶಗಳಿಗೆ ವೈದ್ಯರು ಬಂದು ಸೇವೆ ಸಲ್ಲಿ ಎಂದು ಬಯಸುವುದು ಮೂರ್ಖತನವಾದೀತು.

ವಾಸ್ತವದಲ್ಲಿ ಎಲ್ಲಾ ಸರ್ಕಾರೀ ಮೆಡಿಕಲ್ ಕಾಲೇಜುಗಳಲ್ಲಿ ಮಾತ್ರ ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳು ಸರ ಬೊಕ್ಕಸದಿಂದ ಅನುಕೂಲ ಪಡೆದುಕೊಂಡಿರುತ್ತಾರೆ. ಅವರ್‍ಯಾರನ್ನೂ ಕ ಸರ್ಕಾರೀ ಸೇವೆಗೆ ಕಟ್ಟಿ ಹಾಕುವ ಇಚ್ಛಾಶಕ್ತಿ ಸರ್ಕಾರಕ್ಕಿಲ್ಲ. ತಿಂಗಳಿಗೆ 5 ಲಕ್ಷ ಸಂಪಾದಿಸುವ ಬಯಕೆ ಮತ್ತು ಸಾಧ್ಯತೆ ಹೊಂದಿರುವ ಸ್ನಾತಕೋತ್ತರ ಪದವೀಧರರು 25 ಲಕ್ಷ ದಂಡ ಕಟ್ಟಿಬಿಟ್ಟು, ತಮ್ಮ ವಿದ್ಯೆಯನ್ನು ವೈದ್ಯಕೀಯ ಉದ್ದಿಮೆಯಲ್ಲಿ ಮ ಮಾಡಿಕೊಂಡು ಕುಬೇರರಾಗಲು ಹೊರಡುತ್ತಾರೆ.

ಹಾಗಾಗಿಯೇ ಇಂದು ನಮ್ಮ ಗ್ರಾಮೀಣ ಭಾಗಗಳಲ್ಲಿ 'ನಕಲಿ' ವೈದ ಹೇಳಲಾಗುತ್ತಿರುವವರೇ ಜನರಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಅವರು ವೈದ ಪದವೀಧರರಲ್ಲ, ಒಂದು ಅಧ್ಯಯನದ ಪ್ರಕಾರ ಗ್ರಾಮೀಣ ಪ್ರದೇ ಕೆಲಸ ನಿರ್ವಹಿಸುತ್ತಿರುವ ವೈದ್ಯರುಗಳಲ್ಲಿ ಶೇ.67ರಷ್ಟು ಜನ ಅಗತ್ಯ ವೈದ್ಯಕೀಯ ಪದವಿಯನ್ನು ಹೊಂದಿಲ್ಲ. ಅವರು ಕಳಪೆ ಚಿಕಿತ್ಸೆ ನೀಡುತ್ತಿರುವುದೂ ಹೌದು. ಆದರೆ ನಮ್ಮ ಸರ್ಕಾರೀ ಹಾಗೂ ಆಸ್ಪತ್ರೆಗಳಲ್ಲಿ ಸಿಗುತ್ತಿರುವ ಚಿಕಿತ್ಸೆ ಅತ್ಯುತ್ತಮ ಗುಣಮಟ್ಟ ಎಂದು ಮಾನದಂಡಗಳನ್ನೇ ನಾವು ಪ್ರಶ್ನಿಸುವ ಅಗತ್ಯವಿದೆ. ಅಲ್ಲಿ ಪರಿಣಿತರಿಲ್ಲ ಆದರೆ ವಾಣಿಜ್ಯೀಕರಣಗೊಂಡಿರುವ ವ್ಯವಸ್ಥೆಯಲ್ಲಿ ಅತ್ಯುತ್ತಮ ಗು ಇರುತ್ತದೆ ಎಂದೇನೂ ಹೇಳಲಾಗದು. ಆ ಅರ್ಥದಲ್ಲಿ ಗ್ರಾಮೀಣ ಭ ಅಲೋಪತಿ ಪದವಿಯನ್ನು ಪಡೆಯದ, ಆಯುಷ್ ಪದ್ಧತಿಯ ಯಾವುದ ಒಂದು ಪದವಿಯನ್ನು ಪಡೆದಿರುವ ಅಥವಾ ಅಂತಹ ಪದವಿಯನ್ನೂ ಹೊ ನಕಲಿ ವೈದ್ಯರೇ ಅಲೋಪತಿ ಚಿಕಿತ್ಸೆಯನ್ನೂ ನೀಡುತ್ತಿದ್ದರೆ, ಅದನ್ನು ಪ್ರ ನೈತಿಕತೆ ಸರ್ಕಾರಕ್ಕಾಗಲೀ ಅಲೋಪತಿ ವೈದ್ಯಕೀಯ ವ್ಯವಸ್ಥೆಗಾಗಲೀ

ವೈದ್ಯರೇ ಪ್ರಧಾನವಾಗಿರುವ ವೈದ್ಯಕೀಯ ವ್ಯವಸ್ಥೆಯನ್ನೇ ಬದಲಾಯಿ ವೈದ್ಯರು ದೇವಲೋಕದಿಂದ ಇಳಿದು ಬಂದಿಲ್ಲ, ದೈವಸದೃಶ ಕೆಲ ಮಾಡುತ್ತಿಲ್ಲ, ಅವರೂ ಮಿಕ್ಕ ದುಡಿವ ಜನರಷ್ಟೇ ಸಂಬಳವನ್ನು ಸ ಬದುಕಿದರೆ ಏನೂ ತಪ್ಪಿಲ್ಲ, ಅದನ್ನು ಮಾಡದೇ ಈ ಸಮಸ್ಯೆಗೆ ಪರಿಹ ಇದು ಕೇವಲ ಸರ್ಕಾರೀ ವ್ಯವಸ್ಥೆಗೆ ಮತ್ತು ಗ್ರಾಮೀಣ ಭಾಗಗಳಿಗೆ ವೈ ಪೂರೈಸಿಕೊಳ್ಳಲು ಬೇಕಿರುವ ತಂತ್ರವಲ್ಲ, ಬದಲಿಗೆ ಮಾನವೀಯ ಪ್ರಜಾತಾಂತ್ರಿಕ ಸಮಾಜವನ್ನು ಕಟ್ಟಿಕೊಳ್ಳಲು ಬೇಕಾದ ಅನಿವಾರ್ಯ ಇಲ್ಲವಾದರೆ ಇಂದಿಗೂ ಬಡವರಿಗೆ, ಹಳ್ಳಿಯ ಜನರಿಗೆ ಸೇವೆ ಸಲ್ಲಿ 'ನಕಲಿ' ವೈದ್ಯರುಗಳೇ ಆಪತ್ಬಾಂಧವರಾಗಿರುತ್ತಾರೆ.

...ತ್ಯಾಚಾರದ ಬೇರು ಇರುವುದೇ ದೃಷ್ಟಿಕೋನದಲ್ಲಿ...



...ಮೊನ್ನೆ ಆಫೀಸಿಗೆ ಬಂದಿದ್ದ ಕಿರಿಯ ಗೆಳತಿ ...ಮತಳ ಹೆಚ್ಚಾಗುತ್ತಿರುವ ಅತ್ಯಾಚಾರಗಳ ಬಗ್ಗೆ ಬೇಸರ ಮಾಡಿಕೊಂಡಿದ್ದಳು. "ಚಿಕ್ಕಚಿಕ್ಕ ...ಳು ವಿಕೃತ ಕಾಮಿಗಳು ಬಲಿ ...ಗುತ್ತಿರುವುದನ್ನು ನೋಡಿದರೆ ಗಾಬರಿ ಆಗುತ್ತದೆ. ...ಕ್ಕನ ಮಗಳೊಬ್ಬಳಿದ್ದಾಳೆ. ಅವಳಿಗೆ ಸಂಗೀತ, ...ಕ್ರೀಡೆಗಳೆಂದರೆ ಇಷ್ಟ. ಆದರೆ ಅವಳನ್ನು ... ಕಳುಹಿಸುತ್ತಿಲ್ಲ, ಯಾಕೆಂದರೆ ಆಕೆಯನ್ನು ...ಕೊಂಡು ಹೋಗುವವರು ಯಾರೂ ಇಲ್ಲ, ...ಅಣ್ಣತಮ್ಮಂದಿರೂ ಶಾಲೆಯಲ್ಲಿದ್ದು ಅವರಿಗೆ ...ೇ ಆದ ಆಸಕ್ತಿ, ಹವ್ಯಾಸಗಳು ಇವೆ. ...ಜೊಂದಿಗೆ ಹೋಗಲು ಅವರು ತಯಾರಿಲ್ಲ. ...ನ್ನು ಏಕಾಂಗಿಯಾಗಿ ಎಲ್ಲಿಗೇ ಕಳುಹಿಸಲೂ ...ಯಾವಾಗ ಯಾರು ಏನು ಮಾಡಿಯಾರು ...ಆತಂಕ. ಪರಿಸ್ಥಿತಿ ಹೇಗಿದೆ ಎಂದರೆ ಹಿಂದಿನ ...ಂತೆ ಆ ಹುಡುಗಿಯ ರಕ್ಷಣೆಗಾಗಿ ಆಕೆಯನ್ನು ...ಗೋಡೆಗಳ ಮಧ್ಯೆ ಬಂಧಿಸುವಂತೆ ಆತಂಕ ...ದೆ. ನಮ್ಮ ಸಮಾಜ ಎತ್ತ ಸಾಗುತ್ತಿದೆ ಎಂದು ...ಚಿಸುವಂತಾಗಿದೆ" ಎಂದಳು ಗೌರಿ.

...ೌರಿ ತನ್ನ ಆತಂಕವನ್ನು ತೋಡಿಕೊಳ್ಳುತ್ತಿದ್ದಾಗ ...ಯಾರ್ ಶಾಲೆಯಲ್ಲಿ ಆರು ವರ್ಷ ವಯಸ್ಸಿನ ...ಯ ಮೇಲಾದ ಅತ್ಯಾಚಾರದ ವಿರುದ್ಧ ದೊಡ್ಡ ...ಟನೆ ನಡೆಯುತ್ತಿತ್ತು, ಫೇಸ್‌ಬುಕ್ ತರಹದ ...ಜಿಕ ಜಾಲತಾಣಗಳಲ್ಲಿ 'ಅತ್ಯಾಚಾರಿಗಳಿಗೆ ಗಲ್ಲು ...ವಿಧಿಸಿದರೆ ಇಂತಹ ಪ್ರಕರಣಗಳು ...ಯಾಗುತ್ತವೆ' ಎಂದೆಲ್ಲ ಹಲವರು ...ಸುತ್ತಿದ್ದರು. ವಿಬ್‌ಗಯಾರ್ ಶಾಲಾ ಬಾಲಕಿ ... ಅತ್ಯಾಚಾರ ಎಸಗಿದವನು ಓರ್ವ ಮುಸಲ್ಮಾನ್ ... ಗೊತ್ತಾಗಿದ್ದೆ ತಡ ಚೆಡ್ಡಿ ಪಡೆ ...ಮಯ್ಯನವರ ಸರ್ಕಾರವನ್ನು ತರಾಟೆಗೆ ...ಕೊಳ್ಳಲಾರಂಭಿಸಿತು (ಇದೇ ಕೇಸರಿ ಪಡೆ ...ಳ ರೇಪ್ ಮತ್ತು ಕೊಲೆ ಆದಾಗ ತೆಪ್ಪಗಿತ್ತು. ... ಯಾಕೆ, ಸ್ವತಃ ಬಿಜೆಪಿ ಶಾಸಕ ಜೀವರಾಜ್ ವಿರುದ್ಧ ಅತ್ಯಾಚಾರ ಎಸಗಿದ ಆರೋಪ ಕೇಳಿಬಂದಾಗಲೂ ಜಾಣ ಮೌನ ತಾಳಿತ್ತು ಎಂಬುದು ಬೇರೆ ಮಾತು.)



ಆದರೆ ಕಠಿಣ ಶಿಕ್ಷೆಯನ್ನು ಜಾರಿಗೆ ತಂದರೆ ಅತ್ಯಾಚಾರಗಳು ಕಡಿಮೆ ಆಗುತ್ತವೆಯೇ? ಅದು ಒಂದು ಮುಖ್ಯ ಪ್ರಶ್ನೆ. ಜಗತ್ತಿನಾದ್ಯಂತ ಭಯೋತ್ಪಾದಕರಿಗೆ ಕಠಿಣ ಶಿಕ್ಷೆಯನ್ನು ಹಲವಾರು ರಾಷ್ಟ್ರಗಳು ಜಾರಿಗೆ ತಂದಿದ್ದರೂ ಭಯೋತ್ಪಾದಕ ಕೃತ್ಯಗಳು ಕಡಿಮೆ ಆಗಿಲ್ಲ. ತಾನು ನಂಬಿರುವ ಭಯೋತ್ಪಾದಕ ಸಿದ್ಧಾಂತಕ್ಕಾಗಿ ತನ್ನ ಪ್ರಾಣವನ್ನೇ ಕೊಡಲು ತಯಾರಿರುವವನು ಅದು ಹೇಗೆ ಮರಣದಂಡನೆಗೆ ಹೆದರುತ್ತಾನೆ? ಹಾಗೆಯೇ ಕೊಲೆ ತರಹದ ಅಪರಾಧಗಳಿಗೂ ಗಲ್ಲುಶಿಕ್ಷೆಯನ್ನು ಹಲವಾರು ದೇಶಗಳು ವಿಧಿಸಿದ್ದರೂ ಅದು ಕೊಲೆಗಳನ್ನು ನಿಲ್ಲಿಸುವುದಿರಲಿ, ಕೊಂಚಮಟ್ಟಿಗೂ ತಡೆದಿಲ್ಲ.

ದ್ವೇಷ, ಕ್ರೋಧ ಮತ್ತು ಕಾಮ - ಇಂತಹ ಉಗ್ರ ಭಾವನೆಗಳಿಗೆ ತುತ್ತಾಗಿರುವ ವ್ಯಕ್ತಿ ತನ್ನ ಕೃತ್ಯದಿಂದಾಗುವ ಪರಿಣಾಮಗಳ ಬಗ್ಗೆ ಯೋಚಿಸುವ ಸೂಕ್ಷ್ಮತೆಯನ್ನೇ ಕಳೆದುಕೊಂಡಿರುವಾಗ ಕಠಿಣ ಕಾನೂನಿನ ಬಗ್ಗೆ ಯೋಚಿಸಿ ಕೃತ್ಯದಿಂದ ಹಿಂದೆ ಸರಿಯುತ್ತಾನೆ ಎಂಬುದೇ ತಪ್ಪು ಕಲ್ಪನೆ. ಅಂದಮಾತ್ರಕ್ಕೇ ಕೊಲೆ, ಅತ್ಯಾಚಾರ, ಭಯೋತ್ಪಾದನೆ ತರಹದ ಕೃತ್ಯಗಳಿಗೆ ಕಠಿಣ ಕಾನೂನು ಇರಬಾರದೆಂದಲ್ಲ, ಅಗತ್ಯವಾಗಿಯೂ ಇರಲೇಬೇಕು. ಆದರೆ ಅದರಿಂದ ಮಾತ್ರ ಇಂತಹ ಅಪರಾಧಗಳನ್ನು ತಡೆಯಲಾಗುವುದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಹಾಗಾದರೆ ಪರಿಹಾರ ಕಂಡುಕೊಳ್ಳುವುದು ಹೇಗೆ?

ಶಿವಸುಂದರ್ ಅವರು ಇತ್ತೀಚಿಗೆ ಮಂಡ್ಯದಲ್ಲಾದ ಒಂದು ಪ್ರಕರಣದ ಬಗ್ಗೆ ಹೇಳಿದ್ದು ನೆನಪಾಯಿತು. "ಮಂಡ್ಯ ಜಿಲ್ಲೆಯ ಒಂದು ಹಳ್ಳಿಯಲ್ಲಿ ಒಬ್ಬ ಯುವಕ ಮೂರು ವರ್ಷ ವಯಸ್ಸಿನ ಪುಟಾಣಿಯ ಮೇಲೆ ಅತ್ಯಾಚಾರ ಎಸಗಿ ಸಿಕ್ಕಿಹಾಕಿಕೊಂಡ. ಅವನ ಮೊಬೈಲ್‌ನಲ್ಲಿ ಬರೀ ಬ್ಲೂ ಫಿಲಂಗಳಿದ್ದವು. ಹಗಲೂ ರಾತ್ರಿ ಅಂತಹ ದೃಶ್ಯಗಳನ್ನು ನೋಡುತ್ತಿದ್ದ ಆ ಯುವಕನಿಗೆ ಆ ಚಿಕ್ಕ ಹುಡುಗಿಯೂ ತನ್ನ ಕಾಮತೃಷೆಯನ್ನು ತೀರಿಸಿಕೊಳ್ಳುವ ಮಾರ್ಗವಾಗಿ ಕಂಡಿದ್ದು ಅಚ್ಚರಿ ಇಲ್ಲ. ಇವತ್ತು ಹತ್ತು ರೂಪಾಯಿಗೆ ಮೂರು ಗಂಟೆಗಳ ಬ್ಲೂ ಫಿಲಂಅನ್ನು ಯುವಕರ ಮೊಬೈಲ್‌ಗಳಿಗೆ ಅಪ್ ಲೋಡ್ ಮಾಡುವ ಕೇಂದ್ರಗಳು ಬಿ ಮತ್ತು ಸಿ ಸ್ತರದ ಊರುಗಳಲ್ಲೂ ತಲೆ ಎತ್ತಿವೆ. ಪೋರ್ನೋಗ್ರಫಿ ಇವತ್ತು ಒಂದು ದೊಡ್ಡ ಉದ್ಯಮವಾಗಿ ಬೆಳೆದಿದೆ. ಮೊಬೈಲ್‌ಗಳ ತಂತ್ರಜ್ಞಾನ ಹೆಚ್ಚಾದಂತೆ ಇವೂ ಹೆಚ್ಚಾಗುತ್ತಿವೆ. ಈಗ ರಾಜ್ಯದ ಚಿಕ್ಕಚಿಕ್ಕ ಊರುಗಳಲ್ಲೂ ಕಂಡಕಂಡಲ್ಲಿ ಬಾರ್‌ಗಳು ಸಿಗುತ್ತವೆ. ಹೆಂಡದ ಜೊತೆಗೆ ಬ್ಲೂ ಫಿಲಂಗಳೂ ಸೇರಿದವೆಂದರೆ ಅತ್ಯಾಚಾರಗಳು ಹೆಚ್ಚುತ್ತವೆ" ಎಂದರು ಶಿವಸುಂದರ್.

ಮಿತ್ರ ವಾಸು ಕೂಡ ಒಂದಿಷ್ಟು ಮಾಹಿತಿ ಹಂಚಿಕೊಂಡರು. "ಕಬ್ಬಿನ ಬೆಳೆ ಹೆಚ್ಚಾಗಿರುವುದರಿಂದ ಇವತ್ತು ಮಂಡ್ಯ ಯುವಕರ ಕೈಯಲ್ಲಿ ಹಣ ಹರಿದಾಡುತ್ತಿದೆ. ಹೊಲಗಳಲ್ಲಿ ಕೆಲಸ ಮಾಡುವ ಬದಲು ಇಸ್ಪೀಟ್ ಆಡುತ್ತಿರುತ್ತಾರೆ. ಕೆಲವು ಕಡೆ ಮುದ್ದೆ ಹೋಟೆಲ್‌ಗಳು ಸಿಗದಿದ್ದರೂ ಪಬ್‌ಗಳು ಖಂಡಿತವಾಗಿಯೂ ಸಿಗುತ್ತವೆ. ಇನ್ನು ಮಹಿಳೆಯರ ಬಗ್ಗೆ ನಮ್ಮ ಸಮಾಜದಲ್ಲಿ ಇರುವ ಧೋರಣೆಯಿಂದಾಗಿ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ."

ಇದು ಮಂಡ್ಯ ಜಿಲ್ಲೆಗೆ ಅಥವಾ ನಮ್ಮ ರಾಜ್ಯಕ್ಕೆ ಸೀಮಿತವಾಗಿರುವ ವಿದ್ಯಮಾನವಲ್ಲ, ಬದಲಾಗಿ ಎಲ್ಲ ಕಡೆ ಪ್ರತಿನಿತ್ಯ ಘಟಿಸುತ್ತಿರುವಂತಹದ್ದು. ಇದನ್ನು ಬರೆಯುತ್ತಿರುವಾಗಲೇ ಒಂದು ಟಿವಿ ಚಾನೆಲ್‌ನಲ್ಲಿ '18 ವರ್ಷ ವಯಸ್ಸಿನ ಮೊಮ್ಮಗಳ ಮೇಲೆ ತಾತನಿಂದಲೇ ಅತ್ಯಾಚಾರ' ಎಂಬ ಬ್ರೇಕಿಂಗ್ ನ್ಯೂಸ್ ಬಿತ್ತರಗೊಳ್ಳುತ್ತಿದೆ. ಇನ್ನೊಂದು ಚಾನೆಲ್‌ನಲ್ಲಿ ವಿದ್ಯಾರ್ಥಿನಿಯರೊಂದಿಗೆ ಅಸಭ್ಯವಾಗಿ ವರ್ತಿಸಿದ್ದಕ್ಕೆ ಶಿಕ್ಷಕನೊಬ್ಬ ಧರ್ಮದೇಟು ತಿನ್ನುತ್ತಿದ್ದಾನೆ. ಮತ್ತೊಂದು ಚಾನೆಲ್‌ನಲ್ಲಿ ಎರಡು ವರ್ಷಗಳ ಹಿಂದೆ ಧರ್ಮಸ್ಥಳದಲ್ಲಿ ಗ್ಯಾಂಗ್ ರೇಪಿಗೆ ತುತ್ತಾಗಿ ನಿಗೂಢವಾಗಿ ಕೊಲೆಯಾದ ಸೌಜನ್ಯ ಎಂಬ ಯುವತಿಯ ತಾಯಿ ನ್ಯಾಯ ಕೋರಿ ಕಣ್ಣೀರಿಡುತ್ತಿದ್ದಾರೆ...



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕಾನೂನನ್ನು ಕಠಿಣಗೊಳಿಸಿ ರಾಜ್ಯದ ಪ್ರತಿ ರಸ್ತೆಗೂ ಒಬ್ಬ ಪೊಲೀಸನ್ನು ನೇಮಿಸಿದರೂ ಅತ್ಯಾಚಾರ ಪ್ರಕರಣಗಳನ್ನು ಕೊಂಚ ಮಟ್ಟಿಗೆ ನಿಯಂತ್ರಿಸಬಹುದೇ ಹೊರತು ಅದನ್ನು ಸಂಪೂರ್ಣವಾಗಿ ತಡೆಯಲಾಗುವುದಿಲ್ಲ. ನಾವು ಮಹಿಳೆಯರ ಅತ್ಯಾಚಾರವನ್ನು ತಡೆಯಬೇಕಿದ್ದರೆ ಅದು ಜನರ ದೃಷ್ಟಿಕೋನವನ್ನೇ ಬದಲಾಯಿಸುವ ಮೂಲಕ ಮಾತ್ರ ಸಾಧ್ಯ.

ಆದರೆ ಎಲ್ಲಿಯವರೆಗೆ ನಮ್ಮ ಪುರಾಣಗಳಲ್ಲಿ ಮಹಿಳೆ ಅಬಲೆಯಾಗಿರುತ್ತಾಳೋ, ಎಲ್ಲಿಯವರೆಗೆ ನಮ್ಮ ಮಾಧ್ಯಮಗಳಲ್ಲಿ ಪುರುಷನ ಕಾಮಕ್ಕೆ ಮಹಿಳೆ ಪರಿಹಾರದಂತೆ ಬಿಂಬಿತಳಾಗುತ್ತಾಳೋ, ಎಲ್ಲಿಯವರೆಗೆ ನಮ್ಮ ಶಾಲಾಮಕ್ಕಳಲ್ಲಿ ಮೌಢ್ಯವನ್ನು ಬಿತ್ತುತ್ತೇವೋ, ಎಲ್ಲಿಯವರೆಗೆ ನಮ್ಮೆಲ್ಲರ ಮನಸ್ಸಿನಲ್ಲಿ ಪುರುಷನಿಗಿಂತ ಮಹಿಳೆ ಅಶಕ್ತೆಯಾಗಿರುತ್ತಾಳೋ, ಅಲ್ಲಿಯವರೆಗೆ ಅತ್ಯಾಚಾರದಂತಹ ಪೀಡೆಯನ್ನು ನಮ್ಮ ಸಮಾಜದಿಂದ ತೊಡೆದುಹಾಕಲಾಗುವುದಿಲ್ಲ...

ಅತ್ಯಾಚಾರದಂತಹ ಅಪರಾಧದ ಬೇರು ಇರುವುದೇ ಮಹಿಳೆ ಬಗೆಗಿನ ನಮ್ಮ ಸಮಾಜದ ಹೀನದೃಷ್ಟಿಕೋನದಲ್ಲಿ, ಅದನ್ನು ಹೇಗೆ ಬದಲಾಯಿಸಬಹುದು ಎಂಬುದರತ್ತ ಎಲ್ಲರೂ ಚಿಂತಿಸಬೇಕಿದೆ. ■

...ನಿಯಾ ಪಾಕ್ ಸೊಸೆ ಆದ್ರೆ ಸೋನಿಯಾ ಇಟಾಲಿಯನ್!

...ಟೆನ್ನಿಸ್ ತಾರೆ ಸಾನಿಯಾ ಮಿರ್ಜಾಳನ್ನು ತೆಲಂಗಾಣ ರಾಜ್ಯದ ಬ್ರಾಂಡ್ ...ಸಿಡರ್ ಆಗಿ ಮುಖ್ಯಮಂತ್ರಿ ಚಂದ್ರಶೇಖರ್ ರಾವ್ ಆಯ್ಕೆ ...ರುವುದನ್ನು ಬಿಜೆಪಿ ಟೀಕಿಸಿದೆ. ತೆಲಂಗಾಣದ ವಿಧಾನಸಭೆಯಲ್ಲಿ ವಿರೋಧ ...ನಾಯಕನಾಗಿರುವ ಲಕ್ಷ್ಮಣ್ ಎಂಬಾತ "ಆಕೆಯ ತಂದೆ ಮಹಾರಾಷ್ಟ್ರದಿಂದ ...ಬಾರಿಗೆ ವಲಸೆ ಬಂದವರು. ಅಷ್ಟೇ ಅಲ್ಲದೆ ಆಕೆ ಈಗ ಪಾಕಿಸ್ತಾನಿ ... ಶೋಯಬ್ ಮಲಿಕ್‌ನನ್ನು ಮದುವೆ ಆಗಿರುವುದರಿಂದ ಆಕೆ ಈಗ ...ನದ ಸೊಸೆ. ಅಂತಹವಳನ್ನು ಯಾಕೆ ರಾಜ್ಯದ ಬ್ರಾಂಡ್ ಅಂಬಾಸಿಡರ್ ...ಯ್ಕೆ ಮಾಡಿದ್ದೀರಿ" ಎಂದು ಕೆಂಡಕಾರಿದ್ದಾನೆ.

...ಹಿಳೆಯರಿಗೆ ಭಾರಿ ಗೌರವ ಕೊಡುತ್ತೇವೆ ಎಂದು ಬೊಗಳುವ ಬಿಜೆಪಿ ... ಅದರ ನಾಯಕರಲ್ಲಿ ಒಬ್ಬನಾದ ಲಕ್ಷ್ಮಣ್ ನಿಜವಾಗಲೂ ಮಹಿಳೆಯರ ...ಂತಹ ಧೋರಣೆ ಹೊಂದಿದ್ದಾರೆ ಎಂಬುದಕ್ಕೆ ಇದೊಂದು ಉದಾಹರಣೆ ... ಮಹಿಳೆಯೊಬ್ಬಳು ತಂದೆ, ಗಂಡ ಮತ್ತು ಮಗನ ಆಶ್ರಯದಲ್ಲೇ ...ಕೆಂದೂ, ಆಕೆಗೆ ತನ್ನದೇ ಆತ ವ್ಯಕ್ತಿತ್ವ ಇದೆ ಎಂಬುದನ್ನೂ ನಿರಾಕರಿಸುವ ...ವಾದಿಗಳಾದ ಚೆಡ್ಡಿಗಳು ಈ ಯುಗದಲ್ಲೂ ಸಾನಿಯಾ ಮಿರ್ಜಾದಂತಹ ... ಮಹಿಳೆಯನ್ನು ಆಕೆಯ ಗಂಡನ ಪೌರತ್ವದ ಮೂಲಕ ಅಳೆಯುತ್ತಿರುವುದು ... ಪರಿಸ್ಥಿತಿಗೆ ಕನ್ನಡಿಯಾಗಿದೆ.

...ಂದಹಾಗೆ, ಪಾಕಿಸ್ತಾನದ ಪ್ರಜೆಯನ್ನು ಮದುವೆಯಾಗಿರುವ ಮಾತ್ರಕ್ಕೆ ...ಯಾ ಮಿರ್ಜಾಳನ್ನು 'ಪಾಕಿಸ್ತಾನದ ಸೊಸೆ' ಎನ್ನುವ ಚೆಡ್ಡಿಗಳು ಅದೇ ...ವ್ ಗಾಂಧಿಯನ್ನು ಮದುವೆಯಾಗಿ, ಭಾರತದ ಪೌರತ್ವವನ್ನು ಪಡೆದು, ... ದಶಕಗಳಿಂದ ವಾಸಿಸುತ್ತಿರುವ ಸೋನಿಯಾ ಗಾಂಧಿಯವರನ್ನು ಮಾತ್ರ ಈಗಲೂ ಭಾರತದ ಸೊಸೆ ಎಂದು ಸ್ವೀಕರಿಸುವುದಿಲ್ಲ, 'ಇಟಾಲಿಯನ್' ಎಂದು ಮೂದಲಿಸುವುದನ್ನು ನಿಲ್ಲಿಸುವುದಿಲ್ಲ! ಅಷ್ಟಕ್ಕೂ ಮಲಿಕ್‌ನನ್ನ ಮದುವೆಯಾದ ನಂತರ ಸಾನಿಯಾ ಭಾರತದ ಪೌರತ್ವವನ್ನು ತ್ಯಜಿಸಿಲ್ಲ, ಪಾಕಿಸ್ತಾನದ ಪ್ರಜೆಯಾಗಿಲ್ಲ, ಬದಲಾಗಿ ಆಕೆ ಈಗಲೂ ಭಾರತದ ಪ್ರತಿನಿಧಿಯಾಗಿಯೇ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾಳೆ. ಇತ್ತೀಚಿಗೂ ಭಾರತಕ್ಕೆ ಹಲವು ಪದಕಗಳನ್ನು ಗೆದ್ದು ಕೊಟ್ಟಿದ್ದಾಳೆ.




ಅದೆಲ್ಲ ಇರಲಿ, ಸಾನಿಯಾ ಮಿರ್ಜಾ ಭಾರತ ಕಂಡಿರುವ ಶ್ರೇಷ್ಠ ಕ್ರೀಡಾಪಟುಗಳಲ್ಲಿ ಒಬ್ಬಳು. ಅಂತರರಾಷ್ಟ್ರೀಯ ಮಟ್ಟದಲ್ಲಿ ಆಕೆ ಹತ್ತಾರು ಪ್ರಶಸ್ತಿಗಳನ್ನು ಗೆದ್ದಿದ್ದಾಳೆ. ಪಿ.ಟಿ.ಉಷಾ ಮತ್ತು ಮೇರಿ ಕೋಮ್ ತರಹದ ಉತ್ತಮ ಮಹಿಳಾ ಕ್ರೀಡಾಪಟುಗಳ ಸಾಲಿನಲ್ಲಿ ಸಾನಿಯಾ ಕೂಡ ಸ್ಥಾನ ಪಡೆಯುತ್ತಾಳೆ. ಆಕೆಯ ತಂದೆ ಮೂಲತಃ ಮಹಾರಾಷ್ಟ್ರದವರಾದರೂ ಸಾನಿಯಾ ಬೆಳೆದದ್ದು ಮತ್ತು ಟೆನ್ನಿಸ್ ಆಟಗಾರ್ತಿಯಾಗಿ ರೂಪಗೊಂಡಿದ್ದು ಹೈದರಾಬಾದಿನಲ್ಲಿ. ಈಗಲೂ ಆಕೆ ತನ್ನನ್ನು ಗುರುತಿಸಿಕೊಳ್ಳುವುದು ಭಾರತೀಯಳೆಂದು; ತನ್ನ ತವರು ಹೈದರಾಬಾದ್ ಎಂದು. ಟೆನ್ನಿಸ್ ಆಟಗಾರ್ತಿಯಾಗಿ ಆಕೆ ತೊಡುವ ಸ್ಕರ್ಟ್ ಒಮ್ಮೆ ಮೂಲಭೂತ ಮುಸಲ್ಮಾನರನ್ನು ಕೆರಳಿಸಿತ್ತು. ಆದರೆ ಅದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಸಾನಿಯಾ ತನ್ನ ಪಾಡಿಗೆ ತನ್ನ ಆಟದಲ್ಲಿ ಮಗ್ನಳಾಗಿದ್ದಳು.

ಈಗಲೂ ಅಷ್ಟೇ, "ನಾನು ಸಾಯುವವರೆಗೂ ಭಾರತೀಯಳಾಗಿರುತ್ತೇನೆ" ಎಂದಷ್ಟೇ ಚೆಡ್ಡಿಗಳಿಗೆ ಉತ್ತರ ನೀಡಿದ್ದಾಳೆ.

ಅಮಿತಾಭ್ ಬಚ್ಚನ್‌ಗೂ ಗುಜರಾತ್ ರಾಜ್ಯಕ್ಕೂ ಸಂಬಂಧವೇ ಇಲ್ಲ. ಆದರೂ ಆತನನ್ನು ತನ್ನ ರಾಜ್ಯದ ಬ್ರಾಂಡ್ ಅಂಬಾಸಿಡರ್ ಆಗಿ ನರೇಂದ್ರ ಮೋದಿ ಆಯ್ಕೆ ಮಾಡಿದಾಗ ಯಾರೂ ಚಕಾರವೆತ್ತಲಿಲ್ಲ. ಆದರೆ ಈಗ ಹೈದರಾಬಾದಿನಲ್ಲೇ ಬೆಳೆದ, ರೂಪಗೊಂಡ, ಆ ನಗರದ ಕಾಸ್ಮೋಪಾಲಿಟನ್ ಸಂಸ್ಕೃತಿಯ ಪ್ರತೀಕದಂತಿರುವ ಸಾನಿಯಾ ಮಿರ್ಜಾ ಎಂಬ ಮುಸಲ್ಮಾನ ಯುವತಿಯನ್ನು ತನ್ನ ಬ್ರಾಂಡ್ ಅಂಬಾಸಿಡರ್ ಆಗಿ ತೆಲಂಗಾಣ ಆಯ್ಕೆ ಮಾಡಿಕೊಂಡರೆ ಚೆಡ್ಡಿಗಳ ಕಣ್ಣು ಕೆಂಪಾಗುತ್ತವೆ.

ಇವತ್ತು ಕರ್ನಾಟಕದಲ್ಲಿ ಮಹಿಳೆಯರ ರಕ್ಷಕರಂತೆ ಪೋಸು ಕೊಡುತ್ತಾ ಗಂಟಲು ಹರಿಯುವಂತೆ ಚೀರುತ್ತಿರುವ ಚೆಡ್ಡಿಗಳು ಅದೆಷ್ಟು ಮಹಿಳಾ ವೈರಿಗಳು ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ■

ಚೆಡ್ಡಿ ಸಾಬಿ ಮಾಣಿಪ್ಪಾಡಿಯ ಮಹಿಳಾ ಕಳ್ಳ ಸಾಗಾಣಿಕೆ ಮಹಾತ್ಮೆ!!



ಬಿಜೆಪಿಯ ಮಹಾ ದೇಶಭಕ್ತ ಸಂಭಾವಿತರ ಸರಣಿ ಕೀಚಕ ವೃತ್ತಾಂತಕ್ಕೆ ಮತ್ತೊಂದು ಭರ್ಜರಿ ಎಂಟ್ರಿ ಹೊಡೆದಿದೆ! ಖಾಕಿ ಚೆಡ್ಡಿ ಹಾಕಿಕೊಂಡು ಗಣವೇಷಧಾರಿಯಾಗಿ ಕಂಗೊಳಿಸುವ 'ಕಾಫಿರ್' ಸಾಬಿ ಅನ್ವರ್ ಮಾಣಿಪ್ಪಾಡಿ ಮಹಿಳಾ ಕಳ್ಳ ಸಾಗಾಣಿಕೆ 'ದಂಧೆ' ನಡೆಸಿದ್ದು ಈಗ ಸಾಕ್ಷ್ಯಾಧಾರ ಸಮೇತ ಸಾಬೀತಾಗಿದೆ. ರಾಜ್ಯದಲ್ಲಿ ಬಿಜೆಪಿಯ ದುರಾಡಳಿತ ಅಬ್ಬರಿಸುತ್ತಿದ್ದಾಗ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷನಾಗಿದ್ದ ಮಂಗಳೂರಿನ ಈ ಚಪಲ ಚೆನ್ನಿಗರಾಯ ಮಹಿಳೆಯೊಬ್ಬರ ನಿಗೂಢ ಸಾವು ಹಾಗು ಮತ್ತೊಬ್ಬಾಕೆಯ ಕಣ್ಮರೆ ಪ್ರಕರಣದ ಪ್ರಮುಖ ಸೂತ್ರಧಾರ ಎಂಬುದನ್ನು ಸರ್ಕಾರಿ ತನಿಖೆಯೇ ನಿಸ್ಸಂಶಯವಾಗಿ ಖಾತ್ರಿಪಡಿಸಿಬಿಟ್ಟಿದೆ.

ಮಾಣಿಪ್ಪಾಡಿ ಜಾತಕ

ಅಸಹಾಯಕ ಹೆಂಗಸರನ್ನು ತನಗೆ ಬೇಕಾದವರಿಗೆ ಸರಬರಾಜು ಮಾಡಿ, ತಾನೂ ಬಳಸಿ ತೊಗಲೋದ್ಯಮದ ಕಿಂಗ್‌ಪಿನ್ ಎಂಬ ಅಖಂಡ ಅಭಿದಾನಕ್ಕೆ ಪಾತ್ರನಾಗಿರುವ ಕಾಸರಗೋಡು ಮೂಲದ ಮಾಣಿಪ್ಪಾಡಿ ದೊಡ್ಡ ಜಮೀನ್ದಾರಿ ಕುಟುಂಬದ ದಾರಿ ತಪ್ಪಿದ ಸಂತಾನ. ಈತನ ತಂದೆ ಐಪಿಎಸ್ ಅಧಿಕಾರಿ ಆಗಿದ್ದರು. ಅದ್ಹೇಗೆ ಈತ ಮಂಗಳೂರಲ್ಲಿ ಅಡರಿಕೊಂಡನೆಂಬುದು ಯಾರಿಗೂ ಗೊತ್ತಿಲ್ಲ. ಮಂಗಳೂರಲ್ಲಿ ಈತನ ಕುಟುಂಬಕ್ಕೆ ಸೇರಿದ ಎರಡು ಬೃಹತ್ ಪ್ಲಾಟ್‌ಗಳು ಇದ್ದವು. ಅವುಗಳ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮಾಣಿಪ್ಪಾಡಿ! 'ಫೊರ್ ವಿಂಗ್ಸ್' ಎಂಬ ಜಾಹೀರಾತು ಸಂಸ್ಥೆ ಒಂದನ್ನು ಸ್ಥಾಪಿಸಿದ್ದ. ಆ ಆ್ಯಡ್ಸ್ ಜಾಲದಿಂದ ರಾಜಕಾರಣಿಗಳು-ಅಧಿಕಾರಿಗಳು-ಹಣವಂತರ ಸಖ್ಯ ಕುದುರಿಸಿಕೊಂಡ ಮಾಣಿಪ್ಪಾಡಿ ಅಂದು ಸಿಎಂ ಆಗಿದ್ದ ವೀರಪ್ಪ ಮೊಯ್ಲಿಯ ಒಳ ವೃತ್ತ ಸೇರಿಕೊಂಡುಬಿಟ್ಟ. ದಕ್ಷಿಣ ಕನ್ನಡ ಕಾಂಗ್ರೆಸ್‌ನ ಮುಸ್ಲಿಮ್ ಮುಖಂಡನ ಗೆಟಪ್‌ನಿಂದ ಓಡಾಡಲಾರಂಭಿಸಿದ.

ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿದ್ದಾಗಲೇ ಮಾಣಿಪ್ಪಾಡಿಯ ಬುರ್ನಾಸ್ ಬುದ್ಧಿ ಕುಖ್ಯಾತವಾಗಿತ್ತು. ಕಾಂಗ್ರೆಸ್ ಕಚೇರಿಯಲ್ಲೇ ವಿಪ್ರೋತ್ತಮೆ ಒಬ್ಬಳಿಗೆ ಲೈಂಗಿಕ ಕಿರುಕುಳ ಕೊಟ್ಟು ಛೀ... ಥೂ... ಎನಿಸಿಕೊಂಡಿದ್ದ. ಆಗ ಮಾಣಿಪ್ಪಾಡಿಯ ಕೀರ್ತಿ ದಶದಿಕ್ಕಿಗೆ ಹರಡಿದ್ದೂ ಇವತ್ತಿಗೂ ಹಾಗೇ ಅಬಾಧಿತವಾಗಿ ಮುಂದುವರಿದಿದೆ. ಕಾನ್ವೆಂಟ್ ಇಂಗ್ಲಿಷ್ ಪಟಪಟನೆ ಉದುರಿಸುವ ಈ ಗೋಲ್‌ಮಾಲ್ ಗಿರಾಕಿಯ 'ಲೈಂಗಿಕ

ಧನಂಜಯ್‌ಕುಮಾರ್ ದಂಡು ಸೇರಿಕೊಂಡಿದ್ದ ಮಾಣಿಪ್ಪಾಡಿ. ಹಾಗೆ ನೋಡಿದರೆ ಧನಂಜಯ್ ಮತ್ತು ಮಾಣಿಪ್ಪಾಡಿ ಸಮಾನ ಆಸಕ್ತರು; ಒಂದೇ ಟೇಸ್ಟಿನವರು. ಬಿಜೆಪಿ ಸೇರುವಾಗ ಧನಂಜಯ್ ಆಸರೆಯಾದರೂ ಆನಂತರ ಮಾಣಿಪ್ಪಾಡಿಗೆ ಆತನ ಸರಬರಾಜು ಸಂಸ್ಕೃತಿಯಿಂದಾಗಿ ಸಂಘ ಪರಿವಾರದ 'ಡಾನ್'ಗಳೇ ಪೋಷಿಸಿಕೊಂಡು ಬಂದರು. ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತಲೇ ಈ ಚೆಡ್ಡಿ ಮುಸಲ್ಮಾನನಿಗೆ ಅಲ್ಪಸಂಖ್ಯಾತ ಆಯೋಗದ ಗೂಟದ ಕಾರನ್ನು ಇನಾಮಾಗಿ ಕಲ್ಲಡ್ಕ ಭಟ್, ಸಂತೋಷ್‌ಜಿ, ಮೈಚ ವಗೈರೆಗಳು ಕೊಟ್ಟು 'ಸುಖ' ಕಂಡರು. ಆರೆಸ್ಸೆಸ್‌ನ ಮುಸ್ಲಿಮ್ ಪ್ರೇಮಕ್ಕೆ ಸರ್ವಕಾಲಿಕ ಸಾಕ್ಷಿಯಾಗಿ ಹೋದ ದಗಲುಬಾಜಿ ಮಾಣಿಪ್ಪಾಡಿ!

ತೊಗಲೋದ್ಯಮ ದಲ್ಲಾಳಿ!

ಮಾಣಿಪ್ಪಾಡಿ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷನಾಗಿದ್ದಾಗ ಮತೀಯ ಅಲ್ಪಸಂಖ್ಯಾತರಿಗೆ ಬಿಲ್ಲಿ ಪ್ರಯೋಜನವೂ ಆಗಲಿಲ್ಲ. ತನ್ನ 'ಕರ್ಮ ಕ್ಷೇತ್ರ' ಮಂಗಳೂರಲ್ಲೇ ಮಸೀದಿ-ಚರ್ಚ್‌ಗಳ ಮೇಲೆ ದಾಳಿಯಾದಾಗ ಅಥವಾ ಅನೈತಿಕ ಪೊಲೀಸರು ಅಲ್ಪಸಂಖ್ಯಾತ ಹುಡುಗಿಯರ ಮಾನ-ಪ್ರಾಣಕ್ಕೆ ಕೈ ಹಾಕಿದಾಗ ಈ ನಾಲಾಯಕ್‌ನಿಂದ ಸಣ್ಣ ಸಾಂತ್ವನದ


ಬಹಿರಂಗವಾಗೇ ಜರಿದುಬಿಟ್ಟ. ಇಷ್ಟು ದೊಡ್ಡ 'ಸಾ... ಮಾಡಿದ ಮಾಣಿಪ್ಪಾಡಿಗೆ ಒಬ್ಬೇ ಒಬ್ಬ ಮುಸ್ಲಿಮ್ ಶಹಬ್ಬಾ... ಎನ್ನಲಿಲ್ಲ. ಕಾರಣ- ಮಾಣಿಪ್ಪಾಡಿಯ ಅನುಮಾನಾ... ವ್ಯಕ್ತಿತ್ವ, ರಂಗೀಲಾ ರಗಳೆ, ಕೊಳಕು ರಾಜಕೀಯ!

ಜಾಫರ್ ಷರೀಫ್, ರೋಷನ್ ಬೇಗ್‌ರಂಥ ಬಿ... ಶಾಟ್‌ಗಳ ಮೇಲೆ ಮುಗಿಬಿದ್ದು ಶೂರಾಧಿಶೂರನಂತೆ ಪೋ... ಕೊಡಹತ್ತಿದ್ದ ಮಾಣಿಪ್ಪಾಡಿ ಅಲ್ಪಸಂಖ್ಯಾತ ಆಯೋಗ... ಅಧಿಕಾರ ಬಳಸಿ ಮಹಿಳೆಯರನ್ನು 'ದೊಡ್ಡವರ' ಸುಪರ್ದಿ... ಒಪ್ಪಿಸುವ ಕಳ್ಳ ಸಾಗಾಣಿಕೆಗೆ ಇಳಿದಿದ್ದ! ರಾಜ್ಯ ಸರ್ಕಾರ... ಮಹಿಳಾ ನಿಲಯ (ಸ್ಟೇಟ್ ಹೋಮ್)ನ ಅಸಹಾಯ... ಅಮಾಯಕ ಹೆಂಗಸರನ್ನು ತನ್ನ ದೊರೆಗಳ-ದೋಸ್ತರ ಸೇ... ಕಳಿಸುವ ಪಾತಕಕ್ಕೆ ಕೈಹಾಕಿದ್ದ! 'ನ್ಯೂ ರಿಹ್ಯಾಬಿಲಿಟೇಷ... ಟ್ರಸ್ಟ್' ಎಂಬ ಹೆಂಗಸರಿಗೆ ದಾರಿ ತಪ್ಪಿಸುವ ಕೌಶ... ಕಲಿಸುವ ಸಂಸ್ಥೆಯ ಒಡತಿ ರುಕ್ಸಾನ್ ಹಸನ್ ಎಂ... ಘರ್‌ವಾಲಿಯ ಸಾಥ್ ಮಾಣಿಪ್ಪಾಡಿ ಕುದುರಿಸಿಕೊಂಡಿ...


ರುಕ್ಸಾನಾ ಅಂಗಡಿ

ಬೆಂಗಳೂರಲ್ಲಿ ರುಕ್ಸಾನ ಹಸನ್ ಎಂಬ ಪ್ರಳಯಾಂ... ನ್ಯೂ ರಿಹ್ಯಾಬಿಲಿಟೇಷನ್ ಹೆಸರಿನ ಒಂದು ಚಾರಿಟೇಬ... ಟ್ರಸ್ಟ್ ನಡೆಸುತ್ತಿದ್ದಾಳೆ. ಇದು ಎನ್‌ಜಿಓನೋ ಅಥ... ಧರ್ಮಾರ್ಥ ಸಂಸ್ಥೆಯೋ ಎಂಬುದು ರುಕ್ಸಾನಾ ಮೇಡಮ್... ಗೊತ್ತಿಲ್ಲ. ಆದರೆ ಈ ಸಂಸ್ಥೆಯ ಉದ್ದೇಶಗಳು ಮ... 'ಉದಾತ್ತ'ವಾಗಿವೆ. ಅಸಹಾಯಕ ಹೆಂಗಸರಿಗೆ ಕೌಶ... ಆಧಾರಿತ ತರಬೇತಿ ನೀಡಿ ಸ್ವಾವಲಂಬಿಗಳಾಗಿಸುವ ಸ್ಲೋಗ... ರುಕ್ಸಾನ್ ಹಾಕುತ್ತಿದ್ದಾರೆ. ಈಕೆ ಆಗಾಗ ರಾಜ್ಯ ಮಹಿ... ನಿಲಯದ ಹೆಂಗಸರ ತಂಡಗಳನ್ನು ತನ್ನ ಸಂಸ್ಥೆಗೆ ತಂ... 'ತರಬೇತಿ' ನೀಡುತ್ತಾರೆ. ಇವರಿಗೆಲ್ಲ ಮೂರು, ಆರು ವ... ಅವಧಿಯ ತರಬೇತಿ ನೀಡುವ ಒಪ್ಪಂದ ಆಕೆ ಸರ್ಕಾ... ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೊಂ... ಮಾಡಿಕೊಳ್ಳುತ್ತಾರೆ. ಇದಕ್ಕವರಿಗೆ ಸರ್ಕಾರದಿಂದ ದೊ... ಮೊತ್ತದ ಅನುದಾನವೂ ದಕ್ಕುತ್ತದೆ.


ಈ ರುಕ್ಸಾನಾ ಬಾಯಿ ಅಂಗಡಿಗೆ ತರಬೇತಿಗೆಂ... ಬರುವ ಹೆಂಗಸರಿಗೆ ಮರ್ಯಾದೆಯಿಂದ ಬದುಕು ಕಟ್ಟಿಕೊಳ್ಳ... ದಾರಿ ಹೇಳಿಕೊಡುವ ಬದಲಿಗೆ ಅಡ್ಡದಾರಿ ತೋರಿಸುವ... ಹೆಚ್ಚು! ಜೀವನಾಧಾರಿತ ಕೌಶಲ್ಯ ತರಬೇತಿ ಕೊಡ... ಒಡಂಬಡಿಕೆಯಿಂದ ಕರೆತರುವ ಹೆಂಗಸರನ್ನು ರುಕ್ಸಾ... ಕೊಳಕು ಕೆಲಸ, ಬಲಾಢ್ಯರ ಚಾಕರಿಗೆ ಹಚ್ಚುತ್ತಾರೆ... ಆರೋಪ ತುಂಬ ಹಳೆಯದು. ಇಲ್ಲಿ ಅಕ್ರಮ ಚಟುವ...




ವೀರಪ್ಪ ಮೊಯ್ಲಿ




ಧನಂಜಯ ಕುಮಾರ್



ಕಲ್ಲಡ್ಕ ಪ್ರಭಾಕರ್ ಭಟ್



ಸಂತೋಷ್‌ಜೀ



ಮೈ.ಚ.ಜಯದೇವ್

ಮಾಣಿಪ್ಪಾಡಿ ಸಕಲ ಕಲಾವಲ್ಲಭ. ಅಲ್ಪಸಂಖ್ಯಾತ ಆಯೋಗದ ಅಧಿಕಾರ ಮತ್ತು ಬಿಜೆಪಿ ಆಡಳಿತಗಾರರ ರಾಜ್ಯಾಶ್ರಯ ಬಲದಿಂದ ರಾಜ್ಯ ಮಹಿಳಾ ನಿಲಯದ ಅನಾಥ ಮಹಿಳೆಯರ ದೇಹಗಳನ್ನು ದುಡಿಸಿಕೊಂಡಿದ್ದು ಎಷ್ಟು ಹೇಯವೋ ಅಷ್ಟೇ ಅಕ್ಷಮ್ಯ ಕ್ರಿಮಿನಲ್ ಅಪರಾಧ. ಈತನ ಪೂರ್ವಾಶ್ರಮದ ಲೈಂಗಿಕ ಕುಚೋದ್ಯದ ಹಲವು ಕತೆಗಳು ಈಗಲೂ ಕರಾವಳಿಯಲ್ಲಿ ಹರಿದಾಡುತ್ತಲೇ ಇದೆ. ತಮಾಷೆಯೆಂದರೆ, ಜನಿವಾರಧಾರಿ ಹಿಂದೂತ್ವವಾದಿಯೂ ನಾಚುವಂತೆ ಕೇಶವ ಕೃಪಾಕ್ಕೆ ಎಡತಾಕಿ 'ಗುರು ಕಾಣಿಕೆ' ಅರ್ಪಿಸಿ ಹಿಂದೂತ್ವದ ದೀಕ್ಷೆ ಈ ಮಲಬಾರಿ ಸಾಬಣ್ಣ ಪಡೆದಿದ್ದಾನೆ.

ಸಂಘ ಪರಿವಾರದ ಪಕ್ಕಾ ಬ್ರಹ್ಮಚಾರಿಗಳೆಲ್ಲ ಮಾಣಿಪ್ಪಾಡಿಗೆ ಗಳಸ್ಯಕಂಠಸ್ಯ. ಆ ಅತೃಪ್ತ ಆತ್ಮಗಳ ಆಸೆ ಈಡೇರಿಸುವ ಕುಕಲೆ ಈತನಿಗೆ ಕರತಲಾಮಲಕ. ಆರೆಸ್ಸೆಸ್‌ನ ಸೂತ್ರಧಾರರಾದ ಮೈ.ಚ.ಜಯದೇವ್, ಸಂತೋಷ್ ಜೀ, ಕಲ್ಲಡ್ಕ ಭಟ್ ವಗೈರೆಗಳ ಒಡನಾಟ ಮಾಣಿಪ್ಪಾಡಿ ಸಾಧಿಸಿಕೊಂಡಿದ್ದಾನೆ. ಈ ಸಂಘ ಪರಿವಾರದ ಸರದಾರರ ಬೇಕು-ಬೇಡಗಳ ನಾಡಿಮಿಡಿತ ಹಿಡಿದಿರುವ ಮಾಣಿಪ್ಪಾಡಿ ಅವರೆಲ್ಲರನ್ನು ವಶೀಕರಿಸಿಕೊಂಡಿದ್ದಾನೆ. ತಾನೊಬ್ಬ ಪ್ರಶ್ನಾತೀತ ಹಿಂದೂವಾದಿ ಎಂದು ಎದೆಯುಬ್ಬಿಸಿ ನಖರಾ ಮಾಡುವ ಈತನನ್ನು ಅತ್ತ ಸಾಬಿಗಳೂ ನಂಬುವುದಿಲ್ಲ, ಇತ್ತ ಹಿಂದೂಗಳೂ ಹತ್ತಿರ ಸೇರಿಸಿಕೊಳ್ಳುತ್ತಿಲ್ಲ. ಇಂಥ ಮುಸ್ಲಿಮ್ ಮುಖ ಸಂಘ ಪರಿವಾರಕ್ಕೆ-ಬಿಜೆಪಿ ಭೂಪರಿಗೆ ಆಕರ್ಷಕವಾಗಿದ್ದು ಸಹಜವಾಗೇ ಇದೆ, ಅಲ್ಲವಾ?

ಕೋಮು ಸೌಹಾರ್ದ' ಲೋಕ ಪ್ರಸಿದ್ಧ! ಹಿಂದೂ-ಮುಸ್ಲಿಮ್ ಮತ್ತು ಕ್ರಿಶ್ಚಿಯನ್ ಧರ್ಮೀಯರ ರಾಕ್ಷಸೀ ವಿವಾಹ ಮಾಡಿಕೊಂಡಿರುವ ಈತ ಯಾರೊಂದಿಗೂ ನೆಟ್ಟಗೆ ಸಂಸಾರವೇ ಮಾಡಿಲ್ಲ; ಮದುವೆ ಆಗಿರುವ ಮಗಳಿದ್ದರೂ ಹಗ್ಗ ಕಡಿಯುವುದು ಮಾತ್ರ ನಿಲ್ಲಿಸಿಲ್ಲ. ಹೀಗಾಗಿ ಸಂಸಾರ ತಾಳಿಕೆ-ಬಾಳಿಕೆ ಕಾಣಲಿಲ್ಲ.

ಮೊಯ್ಲಿ ಮಹಾತ್ಮ ಮಂಗಳೂರಲ್ಲಿ ಎಂಪಿ ಎಲೆಕ್ಷನ್‌ಗೆ ನಿಂತಾಗ ತನ್ನ ಜಾಹಿರಾತು ಸಂಸ್ಥೆಗೆ ಆ್ಯಡ್ ಕೊಡಲಿಲ್ಲವೆಂದು ಮುನಿಸಿಕೊಂಡು ಆತನ ಎದುರಾಳಿಯಾಗಿದ್ದ ಬಿಜೆಪಿಯ

ಮಾತೂ ಬರಲಿಲ್ಲ. ಬದಲಿಗೆ ಅನೈತಿಕ ಪೊಲೀಸ್‌ಗಿರಿಗೆ ಈ ಕುಮ್ಮಕ್ಕು ಕೊಡುತ್ತ ಹಿಂದೂ ಬಾಸ್‌ಗಳ ಸಂಪ್ರೀತಗೊಳಿಸುವ ದುರಾಚಾರ ನಡೆಸಿದ್ದ. ಅಲ್ಪಸಂಖ್ಯಾತರ ನೆಮ್ಮದಿ-ಅಭಿವೃದ್ಧಿ ಬಗ್ಗೆ ತಲೆ ಕೆಡಿಸಿಕೊಳ್ಳದ ಈತ ಬಿಜೆಪಿಗೆ ಅನುಕೂಲವಾಗುವಂತೆ ಬೇರೆ ಪಕ್ಷದ ಮುಸ್ಲಿಮ್ ಲೀಡರ್‌ಗಳ ತೇಜೋವಧೆಗೆ ಕಿತಾಪತಿ ಶುರು ಹಚ್ಚಿಕೊಂಡಿದ್ದ. ಎರಡು ಲಕ್ಷ ಕೋಟಿ ಅವ್ಯವಹಾರ-ಕಬಳಿಕೆ ವಕ್ಫ್ ಮಂಡಳಿಯಲ್ಲಾಗಿದೆ ಎಂದು 'ತನಿಖಾ ವರದಿ' ತಯಾರಿಸಿದ ಮಾಣಿಪ್ಪಾಡಿ ರೋಶನ್ ಬೇಗ್, ಜಾಫರ್ ಷರೀಫ್ ಕಳ್ಳರೆಂದು

ಮೆಡಿಕಲ್ ಬಿಲ್‌ಗಾಗಿ ಮಸಲತ್ತು!

ಎರಡು ವರ್ಷದ ಹಿಂದಿನ ಕತೆಯಿದು. ಆಗಿನ್ನೂ ಮಾಣಿಪ್ಪಾಡಿ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಗದ್ದುಗೆಯಲ್ಲಿದ್ದ. ಆಗ ಇದ್ದಕ್ಕಿದ್ದಂತೆ ಒಂದು ದಿನ ಹಾರ್ಟ್‌ಅಟ್ಯಾಕ್ ಎಂದು ಮಂಗಳೂರಿನ ಒಮೆಗಾ ಆಸ್ಪತ್ರೆಯಲ್ಲಿ ಮಲಗುತ್ತಾನೆ. ಅಲ್ಲಿಯ ವೈದ್ಯ ಡಾ. ಮುಕುಂದ್ ಮಾಣಿಪ್ಪಾಡಿಯ ಚೆಡ್ಡಿ ದೋಸ್ತ್, ಈತ ಗೆಳೆಯನಿಗೆ ಎಂಜಿಯೋಪ್ಲಾಸ್ಟ್ ಚಿಕಿತ್ಸೆ ಕೊಟ್ಟಿದ್ದಾರೆಂಬ ಗುಲ್ಲೂ ಊರೆಲ್ಲ ಏಳುತ್ತದೆ.

ಆದರೆ ವಾಸ್ತವವೇ ಬೇರೆ. ಹುಡುಗಿಯೊಬ್ಬಳ ಕಿಡ್‌ನ್ಯಾಪ್ ಮಾಡಿಕೊಂಡು ಮದುವೆಯಾಗಿದ್ದಕ್ಕೆ 25-30 ವರ್ಷದ ಹಿಂದೆಯೇ ಕ್ರಿಮಿನಲ್ ಕೇಸ್ ಹಾಕಿಸಿಕೊಂಡಿದ್ದ ಈ ಪ್ರಚಂಡ ಸರ್ಕಾರದ ಹಣಕ್ಕಾಗಿ ಹೃದಯಾಘಾತದ ನಾಟಕ ನಡೆಸಿದ್ದಾನೆ. ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಖಾತೆಯಿಂದ ಮೆಡಿಕಲ್ ಬಿಲ್ ಕ್ಲೇಮ್ ಮಾಡಿಕೊಂಡಿದ್ದಾನೆ. ಇದು 5-7 ಲಕ್ಷ ಎಂಬುದು ಆತನ ಬಿಜೆಪಿ ಹಿತಶತ್ರುಗಳ ಕುಹಕ.

ಏನೇ ಇರಲಿ. ಒಮೆಗಾದಿಂದ ಡಿಸ್‌ಚಾರ್ಜ್ ಆದಾಕ್ಷಣ ಸ್ವಂತ ಡ್ರೈವಿಂಗ್ ಮಾಡಿಕೊಂಡು ಬೆಂಗಳೂರಿಗೆ ಹೋದ ಮಾಣಿಪ್ಪಾಡಿಯ ಕಂಡವರು ಇವನೆಂಥ ದಗಾಕೋರನೆಂದು ಮುಸಿ-ಮುಸಿ ನಕ್ಕಿದ್ದಂತೂ ಖರೆ ಮಾರಾಯ್ರೆ!!

ನಡೆಯುತ್ತದೆಂದು ಹಲವು ಬಾರಿ ಪೊಲೀಸರು ರ... ಮಾಡಿದ್ದಾರೆ; ಮಹಿಳಾ ಸಂಘಟನೆಗಳು ಬೀದಿಗಿ... ರುಕ್ಸಾನಾ ರೆಜಿಮೆಂಟ್ ವಿರುದ್ಧ ಪ್ರತಿಭಟಿಸಿದ್ದೂ ...

ಮಹಿಳಾ ನಿಲಯದಿಂದ ಕೌಶಲ್ಯ ಅಭಿ... ತರಬೇತಿಗೆಂದು ಬಂದ ಹೆಂಗಸರನ್ನು ಈಕೆ ಅಲ್ಪಸಂಖ್ಯಾ... ಆಯೋಗದ ಅಧ್ಯಕ್ಷನಾಗಿದ್ದ ಸರಬರಾಜು ಚತುರ ಅ... ಮಾಣಿಪ್ಪಾಡಿಯ ಆಪ್ತರ ಮನೆಗೆ 'ಬೇರೆ-ಬೇರೆ' ಕೆಲಸಕ... ಕಳಿಸುತ್ತಿದ್ದರು. ಹೀಗಾಗಿ 'ಮಾಣಿಪ್ಪಾಡಿ-ರುಕ್ಸಾನಾ ನ... ಆಕ್ಷೇಪಾರ್ಹ ವ್ಯವಹಾರ ನಡೆಯುತ್ತ ಬಂದಿತ್ತು. ... ಬಿಜೆಪಿಯ ಕೆಲವು ಮಂತ್ರಿ ಮಹಾಂಡಲಿ... ಕೃಪಾಶೀರ್ವಾದವೂ ಇತ್ತು. ಹೀಗಾಗಿ ರುಕ್ಸಾನಾ-ಮಾಣಿ... ಮಹಿಳಾ ಕಳ್ಳ ಸಾಗಾಣಿಕೆ ನಿರಂತರ-ನಿರಾತಂಕ... ನಡೆಸಿಕೊಂಡಿದ್ದರು. ತನ್ನ ಮನದಿಚ್ಛೆ ಪೂರೈಸುತ್ತಿದ್ದ ರುಕ್ಸಾ... ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆಯಿಂದ ಭರ... ಸೌಲಭ್ಯ-ಸೌಲತ್ತು- ಅನುದಾನ ಸಿಗುವಂತೆ ಮಾಣಿ... ತಂತ್ರಗಾರಿಕೆ ಮಾಡುತ್ತಿದ್ದ. ಅಷ್ಟೇ ಅಲ್ಲ, ಈ ಕ... ಹೆಂಗಸಿಗೆ 'ರಾಣಿ ಚನ್ನಮ್ಮ' ಪ್ರಶಸ್ತಿ ಕೊಡಿಸಲೂ ಕ... ನಡೆಸಿದ್ದ.

ರುಕ್ಸಾನಾ ಸಂಸ್ಥೆಗೆ ಹಲವು ಕಪ್ಪುಚುಕ್ಕೆ... ಅಂಟಿಕೊಂಡಿವೆ. ಈಕೆಯ ಟ್ರಸ್ಟ್ ಮದ್ಯವರ್ಜನ ... ಕುಡುಕರಿಗೆ ಚಿಕಿತ್ಸೆಯ ಸಹ ಸಂಸ್ಥೆಯೂ ಸ್ಥಾಪಿಸಿದೆ. ಇಲ್ಲಿ ದಾಖಲಾಗಿದ್ದ 32 ಜನ ಕುಡುಕರಲ್ಲಿ 28 ... ನಿಗದಿತ ಸ್ಥಳದಲ್ಲಿ ಇರಲೇ ಇಲ್ಲ. ಜಿಲ್ಲಾಧಿಕಾರಿಗಳ ...

ದಿಲ್ಲಿಯಲ್ಲಿ ಮಾಣಿಪ್ಪಾಡಿ ಮಾಡುತ್ತಿರುವುದೇನು?

ಅಧಿಕಾರ-ಧನ ಮತ್ತು ದೇಹದ ತ್ರಿವಿಧ ದಾಹ ತೀರಿಕೆಗೆ ಬಿಜೆಪಿಯ ...ಮ್ ಮುಖಂಡ ಅನ್ವರ್ ಮಾಣಿಪ್ಪಾಡಿ ಏನು ಮಾಡಲಿಕ್ಕೂ ಹೇಸದ ... ಆತನಿಗೆ ಗೊತ್ತು ಬಿಜೆಪಿಯಲ್ಲಿ ಪುರೋಹಿತಶಾಹಿ ಹಿಂದೂಗಳದೇ ...ಮಾನಿಕೆ ಎಂದು. ಹಾಗಾಗಿ ಆತ ಪಾಲಿಟಿಕಲ್ ಶ್ರೀ ಪೇಜಾವರರಿಂದ ... ರಾಘವೇಶ್ವರರ ತನಕದ ಕಾವಿ ಜೀವಿಗಳಿಗೆಲ್ಲ ಉದ್ದಂಡ ಬೀಳುತ್ತಿದ್ದಾನೆ. ...ಬದೆಡೆ ಆರೆಸ್ಸೆಸ್‌ನ ವಿಪ್ರರಿಂದ ಬಿಜೆಪಿಯ ಬ್ರಾಹ್ಮಣರವರೆಗಿನ ಪುಢಾರಿಗಳ ... ಸೇವೆ ಮಾಡುತ್ತಿದ್ದಾನೆ. ಈಗಾತನ ಗುರಿ ನ್ಯಾಷನಲ್ ಮೈನಾರಿಟಿ ...ಷನ್‌ನ ಗೂಟದ ಕಾರು!!

...ಗಾಗಿ ಆತ ಮೋದಿ ಗದ್ದುಗೆ ಏರುತ್ತಿದ್ದಂತೆಯೇ ದಿಲ್ಲಿಯಲ್ಲಿ ಡೇರೆ ...ದ್ದಾನೆ. ರಾಜ್ಯದಲ್ಲಿ ಬಿಜೆಪಿ ನೆಲ ಕಚ್ಚಿದಾಗ ಕಾಣೆಯಾಗಿದ್ದ ಮಾಣಿಪ್ಪಾಡಿ ...ಲ್ಲಿ ಪ್ರತ್ಯಕ್ಷನಾಗಿದ್ದಾನೆ. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷತೆಗಾಗಿ ...ದಿಲ್ಲಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡು ತಿಪ್ಪರಲಾಗ ಹಾಕುತ್ತಿದ್ದಾನೆ.

ಮೋದಿ ಗಮನ ಸೆಳೆಯಲು ಮಾಣಿಪ್ಪಾಡಿ ಹಾಕಿರುವ ಸ್ಕೆಚ್ ಬೊಂಬಾಟಾಗಿದೆ. ಸರಿಯಾಗಿ ಒಂದು ಸಾಲು ಬರೆಯಲು ಬಾರದ ಈ ಪ್ರಭೃತಿ ಮೋದಿ ಹೊಗಳಿ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಪುಸ್ತಕ ಬರೆದಿದ್ದಾನಂತೆ. ಅದನ್ನು ಮೋದಿಯ ಆಪ್ತ ವಲಯದಲ್ಲಿರುವ ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಅಮೃತಹಸ್ತದಿಂದ 'ಲೋಕಾರ್ಪಣೆ' ಮಾಡಿಸಿದ್ದಾನೆ.

ತಮಾಷೆ ಗೊತ್ತಾ? ಈ ಪುಸ್ತಕ ಬರೆದಿದ್ದು ಆತನ ಹಿಂದಿನ 'ಫ್ಲೋರ್‌ವಿಂಗ್' ಆ್ಯಡ್ ಕಂಪನಿಯ ಜಾಣ ಸಿಬ್ಬಂದಿಗಳು. ಯಾರೋ ಬರೆದ ಪುಸ್ತಕಕ್ಕೆ ಲೇಖಕ ತಾನೆಂದು ಹೆಸರು ಅಚ್ಚಿಸಿಕೊಂಡು ಮೋದಿ ಪದತಲದಲ್ಲಿಟ್ಟು ಕೃತಾರ್ಥನಾಗಿದ್ದಾನೆ. ಇಂಥದೇ ಬೋಗಸ್ ಬುಕ್ ಒಂದನ್ನು ಆತ 'ಗೋ ಸಂಪತ್ತು-ದೇಶ ಸಂಪತ್ತು' ಎಂಬ ಹೆಸರಲ್ಲಿ ರಚಿಸಿದ್ದಾನೆ. ಯಥಾಪ್ರಕಾರ ಇದರ ಹಿಂದಿನ ಕೈಗಳೂ ಪ್ರತಿಭಾನ್ವಿತ ಫ್ಲೋರ್‌ವಿಂಗ್‌ನ ನೌಕರರೇ.

ರಾಮಚಂದ್ರಾಪುರ ಮಠದ ಸ್ವಾಮಿ ರಾಘವನ ಅಚ್ಚುಮೆಚ್ಚಿನ ಈ ಮುಸ್ಲಿಮ್ ಶಿಷ್ಯನ ಬಾರಾಭಾನ್ಗಡಿಗಳು-ಚಿಲ್ಲಿ ಹರಕತ್ತು-ಸಪ್ಲಾಯರ್ ಗುಣಧರ್ಮ ಕಾವಿರಂಗದಲ್ಲೂ ಬಹು ಚರ್ಚಿತ ಸಂಗತಿಯಾಗಿದೆ. ಒಬ್ಬನ ಸ್ವಭಾವ ಅರಿಯಬೇಕೆಂದರೆ ಆತನ ಗುರು ಅಥವಾ ಗೆಳೆಯರ ನಡೆ-ನುಡಿ ಅವಲೋಕಿಸಿದರೆ ಸಾಕಂತೆ. ರಾಘವ ಸ್ವಾಮಿ ನೋಡಿದರೆ ಮಾಣಿಪ್ಪಾಡಿ ಎಂಥವನೆಂದು ತಿಳಿಯುತ್ತದೆ; ಮಾಣಿಪ್ಪಾಡಿ ಪರೀಕ್ಷಿಸಿದರೆ ರಾಘವನ ಕಾವಿಯೊಳಗಿನ ಕಾಮುಕ ಅರ್ಥವಾಗುತ್ತದೆ. ಮಾಣಿಪ್ಪಾಡಿಯ 'ಗೋ-ಸಂಪತ್ತು' ಹೊತ್ತಿಗೆ ಕೌಬಾಯ್ ರಾಘವನ ಮಂತ್ರಾಕ್ಷತೆಗಾಗೇ ರಚಿಸಿರುವಂಥದ್ದು.

ಬಿಜೆಪಿಯ ಹಿಂದೂ ಡಾನ್‌ಗಳ ಕೃಪಾಕಟಾಕ್ಷಕ್ಕಾಗಿ ದೇಶಪ್ರೇಮಿ ಟಿಪ್ಪು ಸುಲ್ತಾನ್ ಬಗ್ಗೆಗೂ ಈ ಅಧಿಕಪ್ರಸಂಗಿ ಅಪದ್ಧ ಬೊಗಳಿದ್ದಾನೆ. ಆರೆಸ್ಸೆಸ್‌ನ ಬ್ರಹ್ಮಚಾರಿ-ಸನ್ಯಾಸಿಗಳ ದೌರ್ಬಲ್ಯ ಬಳಸಿ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಪೀಠವೇರಲು ಮಾಣಿಪ್ಪಾಡಿ ಮಸಲತ್ತು ನಡೆಸಿರುವುದು ಬಿಜೆಪಿಯೊಳಗಿನ ಹಿಂದೂವಾದಿ ಜನಿವಾರಿಗಳನ್ನು ಕೆರಳಿಸಿದೆ. ಮಾಣಿಪ್ಪಾಡಿಯ ವಿಕೆಟ್ ಕೆಡವಲು ತಯಾರಿ ನಡೆದಿದೆ. ದಿಲ್ಲಿಯಲ್ಲಿ ಮಾಣಿಪ್ಪಾಡಿ ಕಸರತ್ತು ಮಾಡುತ್ತಿದ್ದರೆ, ಇತ್ತ ಬೆಂಗಳೂರಲ್ಲಿ ಆತನ ಬ್ಲ್ಯಾಕ್‌ಮೇಲ್‌ಗೆ ಒಳಗಾಗಿರುವ ಸಂಭಾವಿತರು ಮದ್ದರೆಯುತ್ತಿದ್ದಾರೆ!

...ಮಾಡಿ ಪರಿಶೀಲಿಸಿದಾಗ ಈ 28 ಜನ ರುಕ್ಸಾನಾ ...ಮ್‌ರಿಗೆ ಬೇಕಾದ ಡಾ. ನದೀವಲ್ ಎಂಬ ಪಶು ...ಯ ಕಾಲೇಜಿನ ಉಪನ್ಯಾಸಕನ ಮನೆಗೆಲಸಕ್ಕೆ ...ದ್ದರು!! ಈ ಸಂಬಂಧ ರುಕ್ಸಾನಾಗೆ 2011ರ ... 15ರಂದು ನೋಟಿಸ್ ನೀಡಲಾಗಿತ್ತು. ಇಂಥವಳಿಗೆ ... ಗುಣಧರ್ಮದ ಅನ್ವರ್ ಮಾಣಿಪ್ಪಾಡಿ ಎಂಬ ...ಭೂಪ ಬೆಂಬಲವಾಗಿ ನಿಂತಿದ್ದು ಅನೇಕ ಅನುಮಾನ ...ರಿಸುವಂತಿದೆ.

ರೇಷ್ಮಾ ಸಾವಿನ ಸುತ್ತ!

...ಜ್ಯ ಮಹಿಳಾ ನಿಲಯದಲ್ಲಿದ್ದ 16 ಜನ ಅಲ್ಪಸಂಖ್ಯಾತ ...ಯರನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ...ರ ರಿಹ್ಯಾಬಿಲಿಟೇಷನ್ ಸಂಸ್ಥೆಗೆ ಕೌಶಲ್ಯಾಧಾರಿತ ...ತಿಗೆಂದು ಕಳಿಸಲಾಗುತ್ತದೆ. ಈ ಆರು ತಿಂಗಳು ...ತಿಗೆಂದು 2010ರ ನವೆಂಬರ್ 4ರಂದು ಸದ್ರಿ ...ರನ್ನು ಬಿಡುಗಡೆಗೊಳಿಸಲಾಗುತ್ತದೆ. ತರಬೇತಿ ...ಯಲ್ಲಿ ಎಲ್ಲ 16 ಹೆಂಗಸರ ಯೋಗಕ್ಷೇಮ, ಆಹಾರ, ... ರಿಹ್ಯಾಬಿಲಿಟೇಷನ್ ಟ್ರಸ್ಟ್ ನೋಡಿಕೊಳ್ಳಬೇಕೆಂಬ ... ಹಾಕಲಾಗಿರುತ್ತದೆ. ಅಲ್ಲದೆ ಈ ಆರು ತಿಂಗಳ ... ತರಬೇತಿ ಮುಗಿಸಿ ಮಹಿಳೆಯರು ವಾಪಸ್ ಸ್ಟೇಟ್ ...ಮ್‌ಗೆ ಬರುವತನಕ ರುಕ್ಸಾನರ ಸಂಪರ್ಕದಲ್ಲಿರುವಂತೆ ...ಳಾ ನಿಲಯದ ಅಧೀಕ್ಷರಿಗೆ ಸರ್ಕಾರ ಕಟ್ಟುನಿಟ್ಟಿನ ...ಸೆ ನೀಡುತ್ತದೆ.

...ಕ್ಸಾನಾರ ಕೈವಶನಾಗಿದ್ದ ಹೆಂಗಸರನ್ನು ಆಕೆ ಯಾವ್ಯಾವ ...ಸಕ್ಕೆ, ಕೆಲಸಕ್ಕೆ, ಸೇವೆಗೆ ಬಳಸಿಕೊಂಡಳೋ ಆ ಅಲ್ಲಾಗೇ ...! ಆದರೆ ಇವರಲ್ಲಿ ರೇಷ್ಮಾ ಎಂಬ ಮಹಿಳೆಯನ್ನು ... ರುಕ್ಸಾನಾ ಮೇಡಮ್ ತನ್ನ ಆತ್ಮೀಯರಾದ ...ಸೂಫ್ ಪರೋಡಿ ಎಂಬ ನಿವೃತ್ತ ಅರಣ್ಯಾಧಿಕಾರಿ ...ಯ ಚಾಕರಿಗೆ ಬಲವಂತವಾಗಿ ದಬ್ಬುತ್ತಾಳೆ. ಇದು ...ನುಬಾಹಿರ ಅಪರಾಧ ಮಾತ್ರವಲ್ಲ ಮಹಿಳಾ ಕಳ್ಳ ...ಣಿಕೆಯ ಘನಘೋರ ಪಾತಕವೂ ಹೌದು. ಮಹಿಳಾ-... ಕಲ್ಯಾಣ ಇಲಾಖೆಯ ನಿಬಂಧನೆಗಳನ್ನು ಬುದ್ಧಿ...ರ್ವಕವಾಗೇ ಉಲ್ಲಂಘಿಸಿ ರೇಷ್ಮಾಳನ್ನು ಪರೋಡಿ ಮನೆಗೆ ...ದ್ದ ರುಕ್ಸಾನಾ 'ಲಾಭ' ಪಡೆದಿದ್ದರು.

...ಷ್ಟೇ ಅಲ್ಲ, ಪರೋಡಿ ಮನೆಯಿಂದ ರುಕ್ಸಾನಾರ ... ರೇಷ್ಮಾ ಕೆಲ ತಿಂಗಳಲ್ಲಿ ವಾಪಸ್ ಬರುತ್ತಾಳೆ. ... ಆಕೆ ರೀಹ್ಯಾಬಿಲಿಟೇಷನ್ ಅಡ್ಡೆಗೆ ಬಂದ ಎರಡನೇ ... ನಿಗೂಢವಾಗಿ ಸಾವಿಗೀಡಾಗುತ್ತಾಳೆ. ಪರೋಡಿ ... ರುಕ್ಸಾನರ ಅಕ್ರಮ ಆಟದಿಂದಲೇ ಆಕೆಯ ಸಾವು ...ಸಿರುತ್ತದೆ. ಹಾಗಂತ ಸ್ಟೇಟ್ ಹೋಮ್‌ನ ಕಂಬ-...ವೂ ಪಿಸುಗುಟ್ಟುತ್ತಿದೆ ಈಗಲೂ!

ತನಿಖೆ ತರಲೆ

ಮೇಡಮ್ ರುಕ್ಸಾನಾ ತನ್ನ ಅನೈತಿಕ-ಅನಾಹುತಕಾರಿ ...ಕಾರ್ಯದ ಅಸಲಿಯತ್ತು ಬಹಿರಂಗವಾಗುತ್ತದೆಂದು ...ಳನ್ನು ಮುಗಿಸಿದ್ದಾರೆಂಬ ಆರೋಪ ಮಹಿಳಾ ಮತ್ತು ... ಕಲ್ಯಾಣ ಇಲಾಖೆಗೆ ಅಪ್ಪಳಿಸತೊಡಗಿತು. ಮಹಿಳಾ ... ಮಕ್ಕಳ ಇಲಾಖೆಯ ನಿರ್ದೇಶನಾಲಯಕ್ಕೆ 2011 ...ನಲ್ಲಿ ಉರ್ದುವಿನಲ್ಲಿ ಬರೆದ ಒಂದ ಪತ್ರ ಬರುತ್ತದೆ. ...ಲ್ಲಿ ರೇಷ್ಮಾಳ ನಿಗೂಢ ಸಾವಿನ ಬಗ್ಗೆ ಅನೇಕ ...ಮಾನ-ಆರೋಪಗಳಿರುತ್ತವೆ. ಅನಿವಾರ್ಯವಾಗಿ ... ಆಂತರಿಕ ರಹಸ್ಯ ತನಿಖೆ ಶುರುಹಚ್ಚಿಕೊಳ್ಳಲೇ ...ಗುತ್ತದೆ.

ಈ ಹುಡಿಗೆ ಬೋಗಸ್ ರೀಹ್ಯಾಬಿಲಿಟೇಷನ್ ಸಂಸ್ಥೆಯ ...ನೆ ರುಕ್ಸಾನಾ ಹಸನ್ ಕ್ಯಾರೇ ಮಾಡುವುದಿಲ್ಲ, ...ಧಿಕಾರಿಗಳ ಯಾವ ಪ್ರಶ್ನೆಗೂ ಸಮರ್ಪಕ ಉತ್ತರ ...ದೆ ಉಡಾಫೆಯಿಂದ ಹಾರಾಡುತ್ತಾರೆ. ಅಲ್ಪಸಂಖ್ಯಾತ ...ಯೋಗದ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ, ಬ್ಯಾರಿ ಮುಸ್ಲಿಮ್ ...ದ ಇದಿನಬ್ಬ ಮತ್ತು ಮಹಿಳಾ-ಮಕ್ಕಳ ಕಲ್ಯಾಣ ...ಯ ಆಯಕಟ್ಟಿನ ಅಧಿಕಾರಿ ಇಬ್ರಾಹಿಂ ಗೂನಡ್ಕರಂಥ ...ಬೂತ ಅಧಿಕಾರಸ್ಥರ ಬೆಂಗಾವಲಿರುವಾಗ ತನಿಖಾಧಿ...ಕಾರಿ ಯಾವ ಲೆಕ್ಕ ಎಂಬ ಸೊಕ್ಕು ರುಕ್ಸಾನಾ ಮೇಡಮ್‌ದಾಗಿತ್ತು!

ತನಿಖೆ ನಿಲ್ಲಿಸುವಂತೆ ಮಾಣಿಪ್ಪಾಡಿ ಸಾಹೇಬರು ಮಹಿಳಾ ಮಕ್ಕಳ ಇಲಾಖೆ ಮೇಲೆ ಒತ್ತಡ ತರುತ್ತಾರೆ. ಸರ್ಕಾರದ ಮಂತ್ರಿಗಳೂ ಮಾಣಿಪ್ಪಾಡಿಗೆ ನೆರವಾಗುತ್ತಾರೆ. ಆ ಮಹಿಳಾ-ಮಕ್ಕಳ ಇಲಾಖೆಯ ಅಧಿಕಾರಿ ಇಬ್ರಾಹಿಂ ಗೂನಡ್ಕ ರೇಷ್ಮಾ ಸಾವಿನ ರಹಸ್ಯ ಬೇಧಿಸದಂತೆ ಕಟ್ಟುನಿಟ್ಟಿನ ತಾಕೀತು ತನಿಖಾಧಿಕಾರಿಗೆ ಮಾಡುತ್ತಾರೆ. ಆದರೆ ದಕ್ಷ-ಕಾನೂನು ನಿಷ್ಠ ತನಿಖಾಧಿಕಾರಿ ತಂಡ ಈ ಯಾವ ಬೆದರಿಕೆಗೂ ಜಗ್ಗದೆ ರುಕ್ಸಾನಾ-ಮಾಣಿಪ್ಪಾಡಿಗಳ ಅಸಹಕಾರದ ನಡುವೆಯೇ ಸತ್ಯಾನ್ವೇಷಣೆ ನಡೆಸುತ್ತದೆ. ರುಕ್ಸಾನ-ಮಾಣಿಪ್ಪಾಡಿ ಜೋಡಿಗೆ ಕಠಿಣ ಪ್ರಶ್ನೆಗಳನ್ನಿಟ್ಟು ಪ್ರಾಮಾಣಿಕ ತನಿಖೆ ನಡೆಸುತ್ತದೆ. ಈ ದೊಡ್ಡವರ ಕಳ್ಳಾಟ, ಪಾಪ ಪ್ರಜ್ಞೆಯ ಮಾತುಗಾರಿಕೆಗಳೇ ರೇಷ್ಮಾ ಸಾವಿನಲ್ಲಿ ಇವರೆಲ್ಲರ ಪಾತ್ರವೇನೆಂಬುದನ್ನು ವಿವರಿಸುವಂತಿರುತ್ತದೆ.

ಸಲ್ಮಾ ನಾಪತ್ತೆ

ಮಾಣಿಪ್ಪಾಡಿ-ರುಕ್ಸಾನ್-ಗೂನಡ್ಕ ಮತ್ತು ಬಿಜೆಪಿಯ ಮಂತ್ರಿಗಳು ಅದೇನೇ ಅಸಹಕಾರ ತೋರಿಸಿದರೂ ಇಲಾಖಾ ತನಿಖೆ ಮಾತ್ರ ನಿಲ್ಲಲಿಲ್ಲ. ತನಿಖೆ ನಡೆದಂತೆಲ್ಲ ಆಘಾತಕಾರಿ ಅಕ್ರಮ-ಅನ್ಯಾಯ-ಅವ್ಯವಹಾರಗಳು ಒಂದೊಂದಾಗಿ ತನಿಖಾಧಿಕಾರಿ ಟೀಮಿನ ಕಣ್ಣಿಗೆ ಕಂಡಿದೆ; ಮಹಿಳಾ ನಿಲಯದಿಂದ ರುಕ್ಸಾನರ 'ತರಬೇತಿ' ಸಂಸ್ಥೆಗೆ ಹೋಗಿದ್ದ 16 ಜನ ಹೆಂಗಸರಲ್ಲಿದ್ದ ಸಲ್ಮಾಳ ನಾಪತ್ತೆ ತನಿಖಾ ತಂಡ ಕಂಡು ಹಿಡಿಯುತ್ತದೆ. ಈ ಸಲ್ಮಾಳನ್ನು ಅಲ್ಪಸಂಖ್ಯಾತ ಆಯೋಗದ ದೊರೆ ಅನ್ವರ್ ಮಾಣಿಪ್ಪಾಡಿಯ ಮಂಗಳೂರು ಅರಮನೆಯ ಕೆಲಸಕ್ಕೆಂದು ರುಕ್ಸಾನಾ ಬಾಯಿ ಬಲವಂತದಿಂದ ಕಳುಹಿಸಿದ್ದ ದೌರ್ಜನ್ಯ ಎಳೆಎಳೆಯಾಗಿ ತನಿಖಾ ತಂಡದ ಮುಂದೆ ಬಿಚ್ಚಿಕೊಳ್ಳುತ್ತದೆ. ಈ ಬಗ್ಗೆ ತನಿಖಾ ಅಧಿಕಾರಿ ರುಕ್ಸಾನಾ ಮತ್ತು ಮಾಣಿಪ್ಪಾಡಿಗೆ ವಿವರಣೆ ಕೇಳುತ್ತಾರೆ. ಆದರೆ ಸಮರ್ಪಕ ಉತ್ತರ ಬರುವುದಿಲ್ಲ, ಬದಲಿಗೆ ತನಿಖೆ ನಿಲ್ಲಿಸುವಂತೆ ಬೆದರಿಕೆಯ ಧ್ವನಿ ಬರುತ್ತದೆ.

ತರಬೇತಿಗೆಂದು ಹೋಗಿದ್ದವರಲ್ಲಿ ಮರಳಿ ಬಂದವರು 14 ಮಂದಿಯಷ್ಟೇ. ಒಬ್ಬಳು ಸತ್ತು ಹೋದರೆ, ಮತ್ತೊಬ್ಬಳು ಇವತ್ತಿಗೂ ಕಣ್ಮರೆಯಾಗಿದ್ದಾಳೆ. ರೇಷ್ಮಾಳ ಮರಣೋತ್ತರ ಪರೀಕ್ಷೆಯ ವರದಿಯೂ ಸರಿಯಾದ ದಾಖಲೆ ಒದಗಿಸುತ್ತಿಲ್ಲ. ಒಟ್ಟಿನಲ್ಲಿ ಅಧಿಕಾರಸ್ಥರು ಎರಡೂ ಪ್ರಕರಣ ಮುಚ್ಚಿಹಾಕಲು ಮಾಡಬಾರದ್ದೆಲ್ಲ ಮಾಡಿ ಬಚಾವಾಗಿದ್ದಾರೆ.

ತನಿಖಾ ವರದಿಯಲ್ಲೇನಿದೆ?

ಮಹಿಳೆಯರನ್ನು ಮಾತೆಯರೆಂದು ಬಿಂಬಿಸಿ ಓಟ್‌ಬ್ಯಾಂಕ್-ಧರ್ಮಕಾರಣ ಮಾಡುವ ಸಂಘ ಪರಿವಾರದ ಸುಬಗರೆಲ್ಲ ಸೇರಿ ರೇಷ್ಮಾ ಸಾವು ಮತ್ತು ಸಲ್ಮಾ ನಾಪತ್ತೆ ಪ್ರಕರಣ ಶ್ರೀರಾಮನ ಪಾದ ಸೇರುವಂತೆ ಮಾಡಿರುವುದು ತನಿಖಾ ವರದಿಯಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಬಿಜೆಪಿ ಸರ್ಕಾರದಲ್ಲಿ ಅಲ್ಪಸಂಖ್ಯಾತ ಆಯೋಗದ ವಜನಿನ ಸ್ಥಾನದಲ್ಲಿದ್ದ ಅನ್ವರ್ ಮಾಣಿಪ್ಪಾಡಿ ರೇಷ್ಮಾ ಮತ್ತು ಸಲ್ಮಾ ಪ್ರಕರಣ ಸಮಾಧಿ ಮಾಡಲು ತನ್ನೆಲ್ಲ ಅಧಿಕಾರ ಬಲ ಬಳಸಿದ್ದಾರೆಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಮಾಣಿಪ್ಪಾಡಿ ಮಾಡಿರುವ ಕುಕೃತ್ಯ ಮಹಿಳಾ ಕಳ್ಳ ಸಾಗಾಣಿಕೆ ಕಾನೂನಿಗಿಂತ ಗಂಭೀರ ಅಪರಾಧವೆಂದು ಮಹಿಳಾ-ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿ ತನ್ನ ರಹಸ್ಯ ತನಿಖಾ ವರದಿಯಲ್ಲಿ ಹೇಳಿದ್ದಾರೆ.


ಒಪ್ಪಂದದಂತೆ ತರಬೇತಿಗೆಂದು ಮಹಿಳಾ ನಿಲಯದ ಹೆಂಗಸರನ್ನು ಕರೆದೊಯ್ದಿದ್ದ ನ್ಯೂ ರಿಹ್ಯಾಬಿಲಿಟೇಷನ್ ತರಬೇತಿ ಸಂಸ್ಥೆಯ ಅಧ್ಯಕ್ಷೆ ರುಕ್ಸಾನಾ ಹಸನ್ ತನಿಖೆಗೆ ಬುದ್ಧಿಪೂರ್ವಕವಾಗೇ ಅಸಹಕಾರ-ಅಸಡ್ಡೆ-ನಿರ್ಲಕ್ಷ್ಯ ತೋರಿಸಿದ್ದಾರೆ. ಹೀಗಾಗಿ ಮಹಿಳಾ ಕಳ್ಳ ಸಾಗಾಣಿಕೆಯಲ್ಲಿ ರುಕ್ಸಾನಾ ಮತ್ತು ಮಾಣಿಪ್ಪಾಡಿ ತೊಡಗಿರುವುದು ಸಾಬೀತಾದಂತಾಗಿದೆ. ರೇಷ್ಮಾಳ ಸಾವು ಮತ್ತು ಸಲ್ಮಾಳ ನಾಪತ್ತೆ ಪ್ರಕರಣದಲ್ಲಿ ರುಕ್ಸಾನಾ ಪ್ರಥಮ ಆರೋಪಿಯಾದರೆ, ಎರಡನೇ ಆರೋಪಿ ಜಹನಹಾಬ್ ಮಾಣಿಪ್ಪಾಡಿ ಸಾಹೇಬರು. ಮೂರನೇ ಆರೋಪಿ ರೇಷ್ಮಾಳನ್ನು ಮನೆಗೆಲಸಕ್ಕೆಂದು ಇಟ್ಟುಕೊಂಡಿದ್ದ ನಿವೃತ್ತ ಅರಣ್ಯಾಧಿಕಾರಿ ಯೂಸೂಫ್ ಪರೋಡಿ ಎಂದು ತನಿಖಾ ತಂಡ ಹೇಳಿದೆ. ಇವರೆಲ್ಲರ ಮೇಲೆ ಕ್ರಿಮಿನಲ್ ಕೇಸ್ ಜಡಿಯುವಂತೆಯೂ ವರದಿಯಲ್ಲಿ ಶಿಫಾರಸು ಮಾಡಲಾಗಿದೆ!

ಈ ಪಾಪಿಷ್ಠರಿಗೆ ಮಹಿಳಾ ನಿಲಯದ ಅಧೀಕ್ಷಕರು ಮತ್ತು ಸಿಬ್ಬಂದಿ ಸಹಕರಿಸಿದ್ದಾರೆ. ಒಪ್ಪಂದದಂತೆ ರಾಜ್ಯ ಮಹಿಳಾ ನಿಲಯದ ಅಧೀಕ್ಷಕರು-ಸಿಬ್ಬಂದಿ ಕರ್ತವ್ಯಲೋಪ ಮಾಡಿದ್ದಾರೆ. ಕಾಲಕಾಲಕ್ಕೆ ರಿಹ್ಯಾಬಿಲಿಟೇಷನ್ ಸಂಸ್ಥೆಗೆ ಭೇಟಿ ನೀಡಿ ಮಹಿಳೆಯರ ಕಲಿಕೆ-ಸುರಕ್ಷತೆ ಬಗ್ಗೆ ನಿಗಾ ವಹಿಸಲು ಮಹಿಳಾ ನಿಲಯದವರು ವಿಫಲರಾಗಿದ್ದಾರೆ. ಇವರ ಮೇಲೂ ಇಲಾಖಾಕ್ರಮ ಜರುಗಿಸಬೇಕೆಂದು ತನಿಖಾ ವರದಿಯಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಇಷ್ಟೆಲ್ಲ ಗಂಭೀರ ಅಂಶಗಳನ್ನು ಎತ್ತಿ ಹೇಳಿದರೂ ತಪ್ಪಿತಸ್ಥರ ಮೇಲೆ ಅಂದಿನ ಬಿಜೆಪಿ ಸರ್ಕಾರ ಪ್ರಜ್ಞಾಪೂರ್ವಕವಾಗೇ ಕೇಸ್ ಬುಕ್ ಮಾಡಿಲ್ಲ.

ಈ ಪ್ರಕರಣದ ನಿಷ್ಠೂರ ತನಿಖೆಯಾದರೆ ರುಕ್ಸಾನ್-ಮಾಣಿಪ್ಪಾಡಿಗಳಷ್ಟೇ ಅಲ್ಲ, ಈ ಹರಾಮಿಗಳ ಹಿಂದಿರುವ ಸಂಘ ಪರಿವಾರದ ಸಂಭಾವಿತರ ಬಣ್ಣವೂ ಬಯಲಾಗುವುದು ಗ್ಯಾರಂಟಿ. ಮಾಣಿಪ್ಪಾಡಿ-ರುಕ್ಸಾನಾ ತಮ್ಮ ಮಹತ್ವಾಕಾಂಕ್ಷೆಗೆ ಅಸಹಾಯಕ-ಅಮಾಯಕ ಹೆಂಗಸರನ್ನು ಆಶ್ರಯದಾತರ ಸಂತೃಪ್ತಿಗೆ ಬಳಸಿರುವ ಅನುಮಾನಗಳಿದ್ದಿದೆ. ಮಹಿಳಾ ಕಲ್ಯಾಣ ಮಂತ್ರಿಣಿ ಉಮಾಶ್ರೀಗೆ ಈ ಮಹಿಳಾ ಕಳ್ಳ ಸಾಗಾಣಿಕೆ ಪ್ರಕರಣದ ಅರಿವಿದೆಯಾ? ಆಕೆ ಎಚ್ಚೆತ್ತುಕೊಂಡು ಕಳ್ಳ ಬೆಕ್ಕುಗಳಿಗೆ ಗಂಟೆ ಕಟ್ಟುವರಾ? ಅನ್ಯಾಯ-ಶೋಷಣೆಗೆ ತುತ್ತಾದ ಮುಗ್ಧ-ದುರ್ಬಲ ಹೆಂಗಸರಿಗೆ ನ್ಯಾಯ ಕೊಡಿಸುವರಾ?

■ ಶುದ್ದೋಧನ

ಪ್ರೇತಗಳು ಸಾರ್ ಪ್ರೇತಗಳು?!!




ಮೂಢನಂಬಿಕೆಗಳ ವಿರುದ್ಧ ಜನಜಾಗೃತಿಗಾಗಿ ಜೀವವನ್ನೇ ಬಲಿದಾನ ಮಾಡಿದ ಮಹಾರಾಷ್ಟ್ರದ ನರೇಂದ್ರ ಧಾಬೋಲ್ಕರ್ ಅವರ ಹಂತಕರನ್ನು ಇದುವರೆಗೂ ಪತ್ತೆಹಚ್ಚಲಾಗಲಿಲ್ಲವಂತೆ. ಇದಕ್ಕಿರುವ ಕಾರಣ ಬೇರೆಯೇ (ಧಾಬೋಲ್ಕರ್ ಅವರ ಬೆಂಬಲಿಗ ಸಮೂಹ ಅತ್ಯಂತ ಸಣ್ಣದು. ಆ ಬಗ್ಗೆ ಒಂದು ಸಣ್ಣ ಜಾಥಾ ನಡೆಸುವುದನ್ನು ಬಿಟ್ಟು, ದೊಂಬಿ, ಗಲಾಟೆ, ಚಳವಳಿ ಮಾಡುವ ಶಕ್ತಿ ಅದಕ್ಕಿಲ್ಲ. ಆದರೆ ಗೋಡ್ಸೆ ಸಂಪ್ರದಾಯಗಳಿಗೆ ಸಂಬಂಧಿಸಿದ ವ್ಯಕ್ತಿಗಳ ಪರವಾಗಿ ಇಡೀ ದೇಶವೇ ಹೊತ್ತಿ ಉರಿಯುವಂತೆ ಮಾಡುವ ಅವರ ನೇರ ಹಾಗು ಅದೃಶ್ಯ ಬೆಂಬಲಿಗ ಪಡೆ ಬಲು ದೊಡ್ಡದು) ಇದ್ದರೂ ಧಾಬೋಲ್ಕರ್ ಹತ್ಯೆಯ ಕಾಲದಲ್ಲಿ ಪುಣೆಯ ಪೊಲೀಸ್ ಆಯುಕ್ತರಾಗಿದ್ದ ಗುಲಾಬ್ ರಾವ್ ಎಂಬಾತ ಧಾಬೋಲ್ಕರ್ ಹಂತಕರನ್ನು ಪತ್ತೆ ಹಚ್ಚಲು ಪ್ರೇತಾತ್ಮಗಳ ಮೊರೆಹೋಗಿದ್ದನಂತೆ.

ಇಂಥಾದ್ದರ ವಿರುದ್ಧ ಜನರನ್ನು ಎಚ್ಚರಿಸಲು ಇಡೀ ಬದುಕನ್ನೇ ತೇಯ್ದ ಧಾಬೋಲ್ಕರ್ ಅವರನ್ನು ಅವಮಾನಿಸಲೇ ಈ ರೀತಿ ಮಾಡಿರಬಹುದು ಅಥವಾ ಇಂತಹ ಸುದ್ದಿಯನ್ನು ಹರಿಬಿಟ್ಟಿರಬಹುದು. ಧಾಬೋಲ್ಕರ್ ಹತ್ಯೆಯಾದ ಬಳಿಕ ಈ ಕುರಿತು ಧರ್ಮಾಂಧನೊಬ್ಬ "ಎಲ್ಲರಿಗೂ ಇಂಥಾ ಸಾವು ಬರದು" ಎಂಬಂತಹ ಕುಹಕದ ಮಾತಾಡಿದ್ದ. ಮನು ತರಹದ ಮಾನವ ದ್ವೇಷಿ ವ್ಯಕ್ತಿಯ ಸಿದ್ಧಾಂತದ ವಿರುದ್ಧ ಅಂಬೇಡ್ಕರ್ ಜೀವ ಸವೆಸಿದ್ದರೆ ಕುಹಕಿಗಳು ಅವರನ್ನೇ "ಆಧುನಿಕ ಮನು" ಎಂದು ಕರೆದು ಮನುವನ್ನೇ ಮಾದರಿ ಎಂಬಂತೆ ಪ್ರಚಾರ ಮಾಡಿದ್ದಂತೆ ಇದು. ಈ ಗುಲಾಬ್ ರಾವ್ ಮನಸ್ಸು ಮಾಡಿದ್ದರೆ, ಧಾಬೋಲ್ಕರ್ ಅವರಿಗೆ ಬರುತ್ತಿದ್ದ ಬೆದರಿಕೆಗಳ ಹಿನ್ನೆಲೆ ಇತ್ಯಾದಿಗಳನ್ನೆಲ್ಲ ಪ್ರಾಮಾಣಿಕವಾಗಿ ಕೆದಕಿರುತ್ತಿದ್ದರೆ ಕೇಡಿಗಳು ಖಂಡಿತಾ ಸಿಕ್ಕಿರುತ್ತಿದ್ದರು. ಅದರ ಬದಲು ಆತ ತಂತ್ರಿಗಳ ಮೂಲಕ ಪ್ರೇತಾತ್ಮದ ಮೊರೆ ಹೋಗಿದ್ದನಂತೆ.

ನಾಲ್ಕು ತಿಂಗಳ ಹಿಂದೆ ಮಲೇಷಿಯಾ ಏರ್ ಲೈನ್ಸ್ ವಿಮಾನವೊಂದು ಕಾಣೆಯಾಗಿ ಅದರಲ್ಲಿದ್ದ ಪ್ರಯಾಣಿಕರೆಲ್ಲ ನಿಗೂಢವಾಗಿ ಕಣ್ಮರೆಯಾಗಿದ್ದರು. ಇದು ವಿಶ್ವದಾದ್ಯಂತ ಸುದ್ದಿಯಾಗಿತ್ತು. ಎಂತೆಂಥ ತಾಂತ್ರಿಕತೆಗಳಿಂದಲೂ ಅದನ್ನು ಹುಡುಕಲಾಗಲಿಲ್ಲ. ಆ ಸಮಯದಲ್ಲಿ ಸುವರ್ಣ ನ್ಯೂಸ್ ಛಾನಲ್‌ನಲ್ಲಿ ಇಂಥಾದ್ದೇ ಪ್ರೇತಾತ್ಮದ ಮೂಲಕ ಅದನ್ನು ಪತ್ತೆ ಹಚ್ಚುವ ನೇರ ಕಾರ್ಯಕ್ರಮ ಪ್ರಸಾರವಾಗಿತ್ತು. ಇಬ್ಬರ ಮೂಲಕ ಪ್ರೇತಾತ್ಮಗಳನ್ನು ಆಹ್ವಾನಿಸಿಕೊಂಡು ಕಾಣೆಯಾದ ವಿಮಾನವನ್ನು ಪತ್ತೆ ಹಚ್ಚಿ ಅದರ ಪೂರ್ವಾಪರಗಳನ್ನೆಲ್ಲ ಎಳೆ ಎಳೆಯಾಗಿ ಬಿಚ್ಚಿಡಲಾಯಿತು. ಈ ಲೈವ್ ಕಾರ್ಯಕ್ರಮ ನಡೆದ ಒಂದು ವಾರದಲ್ಲಿ ವಿಮಾನ ಸಿಗುತ್ತದೆ ಎನ್ನುವ ಸ್ಪಷ್ಟ ಸೂಚನೆ ಕೂಡಾ ಈ ಪ್ರೇತಾತ್ಮದಿಂದ ಸಿಕ್ಕಿತ್ತು. ಆದರೆ ಆ ಪ್ರೇತಾತ್ಮ ಹೇಳಿದ ಒಂದು ವಾರ ಇನ್ನೂ ಕೂಡ ಬಂದ ಹಾಗೆ ಇಲ್ಲ. ಅದು ಯಾವ ಕ್ಯಾಲೆಂಡರ್‌ನ ವಾರವೋ ಪ್ರೇತಗಳಿಗೇ ಗೊತ್ತು.

■ ಶಶಿ ಪುತ್ತೂರು, ದಕ





ಬುಲೆಟ್ ಟ್ರೈನ್‌ಗಳು ಮತ್ತು ಪವಿತ್ರ ಗೋವುಗಳು

ಭಾರತೀಯ ಜನತಾ ಪಕ್ಷದ ಪ್ರಥಮ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅಣು ಬಾಂಬ್‌ಗಳ ತಯಾರಿಕೆಯ ಬಗ್ಗೆ ವ್ಯಾಮೋಹಿತರಾಗಿದ್ದರೆ, ಎರಡನೆಯ ಪ್ರಧಾನಿ ನರೇಂದ್ರ ಮೋದಿ ಬುಲೆಟ್ ಟ್ರೈನ್‌ಗಳ ಬಗ್ಗೆ ವ್ಯಾಮೋಹಿತರಾಗಿರುವಂತೆ ಕಾಣುತ್ತಿದೆ. ಅಮೆರಿಕ ಇವರಿಗೆ ವೀಸಾ ನಿರಾಕರಿಸಿದಾಗಿನಿಂದ ಜಪಾನ್ ಮತ್ತು ಚೀನಾಗಳನ್ನು ಪ್ರೀತಿಸಲು ಶುರು ಮಾಡಿದ್ದರು. ಬುಲೆಟ್ ಟ್ರೈನ್‌ನ ಆಲೋಚನೆಯ ಹಿಂದಿನ ಕಾರಣ ಬಹುಶಃ ಇದೇ ಇರಬೇಕು.

ಆದರೆ ಆ ದೇಶಗಳಲ್ಲಿ, ನಿರ್ದಿಷ್ಟವಾಗಿ ಜಪಾನಿನಲ್ಲಿ ರೈಲು ಹಳಿಗಳ ಆಸುಪಾಸಿನಲ್ಲಿ ದನಗಳು ಮೇಯುತ್ತಿರುವ ದೃಶ್ಯ ಕಂಡುಬರುವುದಿಲ್ಲ, ಚೀನಾದ ಕೆಲ ಪ್ರಾಂತ್ಯಗಳಲ್ಲಿ ಮಾತ್ರ ಹೀಗೆ ಮೇಯುವ ದನಗಳನ್ನು ಕಾಣಬಹುದು. ಮತ್ತೊಂದು ಸಂಗತಿಯೆಂದರೆ ಈ ಎರಡೂ ದೇಶಗಳಲ್ಲಿ ಹಸು ಪವಿತ್ರ ಪ್ರಾಣಿ ಎನಿಸಿಕೊಂಡಿಲ್ಲ, ಮಾಂಸ ಮತ್ತು ಹಾಲನ್ನು ಒದಗಿಸುವ ಉಪಯುಕ್ತ ಪ್ರಾಣಿ ಎಂದು ಪರಿಗಣಿಸಲ್ಪಟ್ಟಿದೆ.

ಭಾರತ ಕಂಡ ಅತ್ಯಂತ ದಕ್ಷ ರೈಲ್ವೆ ಮಂತ್ರಿ ಎನಿಸಿಕೊಂಡಿರುವ ಲಾಲೂಪ್ರಸಾದ್ ಯಾದವ್ ಕೂಡ ಈ ಸಮಸ್ಯೆಯ ಬಗ್ಗೆ ಹಿಂದೊಮ್ಮೆ ಆತಂಕ ವ್ಯಕ್ತಪಡಿಸಿದ್ದರು. ಅದೇನೆಂದರೆ ಸಾಮಾನ್ಯ ರೈಲುಗಳಿಗಿಂತ ಬುಲೆಟ್ ರೈಲುಗಳು ಅತಿಹೆಚ್ಚು ದನಗಳನ್ನು ಕೊಲ್ಲುತ್ತವೆ ಎಂಬುದು. ಸಮಕಾಲೀನ ಭಾರತದಲ್ಲಿ ಗೋವಿನ ಪಾವಿತ್ರ್ಯ ಅತಿ ಹೆಚ್ಚಾಗಿರುವುದರಿಂದ ಇದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ. ಸ್ವಾತಂತ್ರೋತ್ತರ ಭಾರತದಲ್ಲಿ ಈ ಪ್ರಾಣಿಯ ಸಾವು ಹಲವು ಕೋಮು ಗಲಭೆಗಳಿಗೆ ಕಾರಣವಾಗಿದೆ. ರೈಲು ಹಳಿಗಳ ಮೇಲೆ ಕಂಡುಬಂದ ಸತ್ತ ದನಗಳು ಕೂಡ ಕೋಮು ದಳ್ಳುರಿಯ ಕಿಡಿ ಹೊತ್ತಿಸಿದ್ದುಂಟು.

ನಮ್ಮ ಪ್ರಾಣಿಗಳನ್ನು ಬುಲೆಟ್ ರೈಲುಗಳಿಂದ ರಕ್ಷಿಸಬೇಕೆಂದರೆ ನಮ್ಮ ಐಶ್ವರ್ಯ ದೇವತೆಗಳಾಗಿರುವ ಆಧುನಿಕ ಕುಬೇರರು ಮಾಡಬೇಕಾದುದಿಷ್ಟೆ: ರೈಲು ಹಳಿಗಳ ಎರಡೂ ಬದಿಗಳಲ್ಲಿ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸಬೇಕು. ಇಲ್ಲಿ ಮತ್ತೊಂದು ಸಮಸ್ಯೆ ಎದುರಾಗುತ್ತದೆ. ಭಾರತದ ರೈಲು ಹಳಿಗಳು ಮತ್ತೊಂದು ಸೌಲಭ್ಯವನ್ನು ಒದಗಿಸುತ್ತಿರುವುದನ್ನು ಯಾವುದೇ ಕಾರಣಕ್ಕೂ ಕಡೆಗಣಿಸಲಾಗದು. ರೈಲು ಹಳಿಗಳು ಆಸುಪಾಸಿನಲ್ಲಿ ವಾಸಿಸುತ್ತಿರುವ ಪ್ರಜೆಗಳಿಗೆ ಮುಕ್ತ ಶೌಚಾಲಯಗಳಾಗಿವೆ. ಆದರೆ ಚೀನಾ ಮತ್ತು ಜಪಾನ್‌ಗಳ ರೈಲು ಹಳಿಗಳು ಹೀಗೆ ಶೌಚಾಲಯ ಸೌಲಭ್ಯ ಒದಗಿಸುವ ಹೆಚ್ಚುವರಿ ಜವಾಬ್ದಾರಿ ಹೊತ್ತುಕೊಂಡಿಲ್ಲ.

ಹೀಗಿರುವಾಗ ಹಳಿಗಳ ಬದಿಯಲ್ಲಿ ಗೋಡೆ ನಿರ್ಮಿಸಿದರೆ ಚಲಿಸುವ ರೈಲುಗಳನ್ನು ನೋಡುತ್ತಾ ಮಲಬಾಧೆ ತೀರಿಸಿಕೊಳ್ಳುವ ಜನರನ್ನು ಸಂಕಷ್ಟಕ್ಕೆ ದೂಡಿದಂತಾಗುತ್ತದೆ. ಆದ್ದರಿಂದ ಸರ್ಕಾರ ರೈಲು ಹಳಿಗಳ ಪಕ್ಕದಲ್ಲಿ ವಾಸಿಸುತ್ತಿರುವ ಜನರಿಗೆ ಮೊದಲು ಶೌಚಾಲಯ ಕಟ್ಟಿಕೊಟ್ಟು, ನಂತರ ತಡೆಗೋಡೆ ಬಗ್ಗೆ ಯೋಚಿಸಬೇಕಾಗುತ್ತದೆ.

ಮುಂಬೈ-ಅಹಮದಾಬಾದ್ ರೈಲ್ವೆ ಲೈನಿನ ಉದ್ದಕ್ಕೂ ವಾಸಿಸುವ ಜನರಿಗೆ ಶೌಚದ ವ್ಯವಸ್ಥೆ ಇದೆಯೆಂದು ಪ್ರಧಾನಮಂತ್ರಿ ಕಾರ್ಯಾಲಯಕ್ಕೆ ಖಾತ್ರಿ ಇದೆಯೆ? ಈ ಬಗ್ಗೆ ಒಂದು ಸರ್ವೆ ನಡೆಸಲಿ. ಆಗ ಅವರಿಗೆ ಈ ಕ್ಷೇತ್ರದಲ್ಲಿ ಗುಜರಾತ್ ಎಷ್ಟು ಅಭಿವೃದ್ಧಿ ಸಾಧಿಸಿದೆ ಎಂಬ ಸತ್ಯದ ಅರಿವಾಗುತ್ತದೆ ಎಂಬುದು ನನ್ನ ಖಚಿತ ಅಭಿಪ್ರಾಯ. ಅದು ಹಾಗಿರಲಿ, ಪ್ರಧಾನಮಂತ್ರಿಯ ಪ್ರಕಾರ ಮಹಾರಾಷ್ಟ್ರ ರಾಜ್ಯ ಇನ್ನೂ ಕಾಂಗ್ರೆಸ್ ಪಕ್ಷದ ಆಳ್ವಿಕೆಯಲ್ಲಿರುವುದರಿಂದ ಏನೇನೂ ಅಭಿವೃದ್ಧಿ ಸಾಧಿಸಿಲ್ಲ, ಶೌಚಾಲಯಗಳೂ ಅಭಿವೃದ್ಧಿಗೊಂಡಿಲ್ಲ, ಆದ್ದರಿಂದ ಶೌಚಾಲಯ ನಿರ್ಮಾಣ ಕಾರ್ಯ ಕನಿಷ್ಟ ಪಕ್ಷ ಅಲ್ಲಿಂದಾದರೂ ಶೀಘ್ರವೇ ಆರಂಭವಾಗಲಿ.

ಟೆಕ್ ವ್ಯಾಮೋಹಿ ಪ್ರಧಾನಿ ಇಂಥಾ ನೈತಿಕ ಹಾಗೂ ಸಾಮಾಜಿಕ ವೈರುಧ್ಯವನ್ನು ಹೇಗೆ ನಿಭಾಯಿಸುತ್ತಾರೆ? ಯಾವುದಾದರೂ ಬುಲೆಟ್ ರೈಲು ಒಂದು ಹಸುವನ್ನು ಕೊಂದ ಪಕ್ಷದಲ್ಲಿ ಅವರ ಪಕ್ಷದ ಜನರು ತಮ್ಮ ಕಲ್ಪಿತ ಶತ್ರುಗಳ ವಿರುದ್ಧ ಗಲಭೆ ಎಬ್ಬಿಸುತ್ತಾರೆ ಎಂಬುದನ್ನು ಊಹಿಸಿಕೊಳ್ಳಿ. ನಂತರದ ಕತೆಯೇನಾಗುತ್ತದೆ?

ಜಪಾನ್ ಮತ್ತು ಚೀನಾಗಳು ಅತ್ಯಂತ ವಿವೇಚನಾಶೀಲ ದೇಶಗಳು. ಆದರೆ ಭಾರತ ಭಾರತವೇ. ಹಿಂದೂ ಸಾಧುಗಳು ಮತ್ತು ಸನ್ಯಾಸಿಗಳಿಗೆ ಇದುವರೆಗೆ ಎಲ್ಲ ರೈಲುಗಳೂ ಪುಕ್ಕಟೆಯಾಗಿವೆ. ಅವರುಗಳು ನಿಗದಿತ ಹಣ ಪಾವತಿಸಿದ ನಂತರವೇ ಬುಲೆಟ್ ರೈಲುಗಳಲ್ಲಿ ಪ್ರಯಾಣಿಸುತ್ತಾರೆ ಎಂಬ ಭರವಸೆಯನ್ನು ರೈಲ್ವೆ ಸಚಿವರು ರಾಷ್ಟ್ರಕ್ಕೆ ನೀಡಬಲ್ಲರೆ? ಅವರ ಪ್ರಯಾಣದ ವೆಚ್ಚವನ್ನು ಬುಲೆಟ್ ರೈಲುಗಳಲ್ಲೂ ಮಾಮೂಲಿಯಂತೆ ರಾಷ್ಟ್ರವೇ ಭರಿಸಬೇಕೆ?


* * *

ಬುಲೆಟ್ ರೈಲುಗಳ ತಂತ್ರಜ್ಞಾನ ಎಲ್ಲಿಂದ ಬರುತ್ತದೆ? ಹಿಂದೂ ಪುರಾಣಗಳು ಪ್ರಾಚೀನ ಭಾರತದಲ್ಲಿ ಪುಷ್ಪಕ ವಿಮಾನಗಳು ಇದ್ದವೆಂದು ಹೇಳುತ್ತವ; ಆದರೆ ಬುಲೆಟ್ ರೈಲುಗಳ ಬಗ್ಗೆ ಪುರಾಣಗಳಲ್ಲಿ ಯಾವುದೇ ಉಲ್ಲೇಖವಿಲ್ಲ, ಹೀಗಾಗಿ, ಈ ತಂತ್ರಜ್ಞಾನ ಜಪಾನ್ ಅಥವಾ ಚೀನಾದಿಂದ ಬರಬೇಕಾಗಿ ಬಂದಿದೆ. ಹಿಂದೂತ್ವದ ಇತಿಹಾಸವನ್ನು ಬದಲಾಯಿಸಬಯಸಿರುವ ಪ್ರಧಾನಿ ನರೇಂದ್ರ ಮೋದಿಯವರು ಈ ಬುಲೆಟ್ ರೈಲುಗಳ ಒಡೆತನವನ್ನು ಸಮಕಾಲೀನ ಕುಬೇರರ ಕೈಗೆ ಒಪ್ಪಿಸುತ್ತಿರುವುದನ್ನು ಮೆಚ್ಚಿಕೊಳ್ಳುವುದಾದರೂ ಹೇಗೆ ಎಂಬುದೇ ಸದ್ಯದ ಸಮಸ್ಯೆ.

ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲಿ ಭಾರತವು ರಥಗಳು ಮತ್ತು ಕುದುರೆಗಳನ್ನು ಹೊಂದಿದ್ದ ದೇಶವಾಗಿತ್ತು, ರಥಗಳು ಹೇಗೂ ರಾಜರು ಮತ್ತು ರಾಣಿಯರಿಗೆ ಮಾತ್ರ ಸೀಮಿತವಾಗಿದ್ದವು. ಹಿಂದೂ ಸಾಧುಗಳು, ಸಂತರು ಹಾಗೂ ಜನಸಾಮಾನ್ಯರು ಹೇಗೆ ಪ್ರಯಾಣಿಸುತ್ತಿದ್ದರು ಎಂಬ ಬಗ್ಗೆ ನಮಗೆ ಯಾವುದೇ ಖಚಿತ ಮಾಹಿತಿ ಲಭ್ಯವಿಲ್ಲ, ಅವರು ತಮ್ಮ ಕೈಲಾದ ಮಟ್ಟಿಗೆ ಕಾಲ್ನಡಿಗೆಯಲ್ಲೇ ಪ್ರಯಾಣಿಸಿದ್ದರು ಎಂದು ನಾವು ಊಹಿಸಬಹುದು. ಸಾಮ್ರಾಟ ಅಶೋಕ ತನ್ನ ಆಳ್ವಿಕೆಯ ಕಾಲದಲ್ಲಿ ಸಾಮಾನ್ಯ ಜನರ ಸಾರಿಗೆ ಸೌಕರ್ಯಕ್ಕಾಗಿ ಎತ್ತಿನ ಗಾಡಿಗಳನ್ನು ವ್ಯವಸ್ಥೆ ಮಾಡಿದ್ದ ಎಂದು ಇತಿಹಾಸದಿಂದ ತಿಳಿದುಬರುತ್ತದೆ.

ನಮ್ಮ ಪುರಾಣಗಳಲ್ಲಿ 'ಪುಷ್ಪಕ ವಿಮಾನ'ದ ಉಲ್ಲೇಖವಿದೆ. ಆದರೆ ಅದು ಕೇವಲ ಒಂದುಕಡೆ ಮಾತ್ರ. ರಾವಣನನ್ನು ಯುದ್ಧದಲ್ಲಿ ಸೋಲಿಸಿದ ರಾಮ ಆ 'ಪುಷ್ಪಕ ವಿಮಾನ'ವನ್ನು ವಶಪಡಿಸಿಕೊಂಡ ಎಂಬುದನ್ನು ವಿವರಿಸುವ ಸಂದರ್ಭದಲ್ಲಿ, ಆ ವಿಮಾನದಲ್ಲಿ ಕುಳಿತ ರಾಮ ಆಕಾಶ ಮಾರ್ಗದಲ್ಲಿ ಅಯೋಧ್ಯೆಗೆ ಮರಳಿದ ಎಂಬುದಾಗಿ ಹೇಳಲಾಗಿದೆ. ಈ ಪುಷ್ಪಕ ವಿಮಾನಕ್ಕೆ ಮತ್ತೊಂದು ಕುತೂಹಲಕಾರಿ ಆಯಾಮವೂ ಇದೆ. ಅಸಮಾನತೆಯ ಸೃಷ್ಟಿಗೆ ಕಾರಣನಾದ ಹಿಂದೂ ದೇವತೆ ಬ್ರಹ್ಮನಿಗಾಗಿ ವಿಶ್ವಕರ್ಮನು (ಬಡಗಿ ವೃತ್ತಿಯವ) ಈ ವಿಮಾನವನ್ನು ತಯಾರಿಸಿದನೆಂದು ಹೇಳಲಾಗಿದೆ. ನಂತರ ಬ್ರಹ್ಮನು ಅದನ್ನು ಐಶ್ವರ್ಯ ದೇವತೆ ಕುಬೇರನಿಗೆ ಕೊಟ್ಟುಬಿಟ್ಟನಂತೆ.

ಭಾರತದಲ್ಲಿ ಐಶ್ವರ್ಯ ದೇವತೆಗಳು ಪ್ರಾಚೀನಕಾಲದಿಂದಲೂ ವಿಶೇಷ ಸ್ಥಾನಮಾನವನ್ನು ಅನುಭವಿಸುತ್ತಾ ಬಂದಿದ್ದಾರೆ. ಅವರು ತಮಗೆ ಬೇಕೆನಿಸಿದ್ದನ್ನೆಲ್ಲಾ ಪಡೆದುಕೊಂಡಿದ್ದಾರೆ. ರಾಮಾಯಣದ ಪ್ರಕಾರ, ಇಂಥಾ ವೇಗದ ಪುಷ್ಪಕ ವಿಮಾನ ಕುಬೇರನ ಬಳಿ ಇರುವುದನ್ನು ಸಹಿಸದ ರಾವಣ ಅದನ್ನು ಕಸಿದುಕೊಂಡನಂತೆ. ಅಂತಿಮವಾಗಿ, ರಾವಣನನ್ನು ಕೊಂದ ನಂತರ ಅದು ರಾಮನ ಕೈ ಸೇರಿತು. ಅದಾದನಂತರ ಭಾರತದ ಸಾರಿಗೆ ವ್ಯವಸ್ಥೆಯಿಂದ ಪುಷ್ಪಕ ವಿಮಾನವೇ ಕಾಣೆಯಾಯಿತು.



ಅಂಥಾ ಅತಿವೇಗದ ರಥವನ್ನು ನಿರ್ಮಿಸಿದ್ದರೂ ಕೂಡ ವಿಶ್ವಕರ್ಮರಿಗೆ ಎಂದಿಗೂ ಸೂಕ್ತ ಗೌರವ ಸಿಕ್ಕಿಲ್ಲ ಎಂಬುದು ಮಾತ್ರವಲ್ಲ, ನಂತರದ ದಿನಗಳಲ್ಲಿ ಅವರನ್ನು ಶೂದ್ರ ವರ್ಣಕ್ಕೆ ಸೇರಿಸಲಾಯಿತು. ಬಹುಶಃ ರಾವಣನೆಂಬ ಅಯೋಗ್ಯ ದ್ರಾವಿಡ ರಾಜ ಆ ವಿಮಾನವನ್ನು ಬಳಸಿದ ಕಾರಣಕ್ಕಾಗಿ ಇರಬಹುದು. ಅದೇನಾಯಿತೋ ನಮಗೆ ಗೊತ್ತಿಲ್ಲ; ಆದರೆ ಪುಷ್ಪಕ ವಿಮಾನ ತಯಾರಿಸುವ ಜ್ಞಾನ ಈ ನೆಲದಿಂದ ಕಣ್ಮರೆಯಾಗಿದ್ದು ಮಾತ್ರ ವಾಸ್ತವ ಸತ್ಯ.

ಇದಾದ ಬಹಳ ಕಾಲದ ನಂತರ, ಅಂದರೆ 19ನೇ ಶತಮಾನದ ಕೊನೆಯ ವೇಳೆಗೆ ಏರೋಪ್ಲೇನ್ ತಯಾರಿಸುವ ಜ್ಞಾನವು ಪಶ್ಚಿಮ ದೇಶವಾದ ಅಮೆರಿಕ ನೆಲದಲ್ಲಿ ರೈಟ್ ಸೋದರರ ಮನಸ್ಸಿನಲ್ಲಿ ಮೊಳಕೆಯೊಡೆಯಿತು ಎಂಬ ಚಾರಿತ್ರಿಕ ಸತ್ಯ ಈಗ ನಮ್ಮ ಮುಂದಿದೆ.


ನಮ್ಮ ವಿಶ್ವಕರ್ಮರು ಎಂದಿಗೂ ತಮ್ಮ ಸಾಮಾಜಿಕ ಸ್ಥಾನಮಾನವನ್ನು ಮರಳಿ ಗಳಿಸಿಕೊಳ್ಳಲಾಗದ ಹಾಗೂ ನಮ್ಮದೇ ಸ್ವಂತ 'ಪುಷ್ಪಕ ವಿಮಾನ'ಗಳನ್ನು ತಯಾರಿಸುವ ಆಧುನಿಕ ಜ್ಞಾನವನ್ನು ಪಡೆದುಕೊಳ್ಳುವುದನ್ನು ನಿರ್ಬಂಧಿಸಿದ ಪರಿಣಾಮವಾಗಿ ನಾವು ಅವುಗಳನ್ನು ಹೊರದೇಶಗಳಿಂದ ಆಮದು ಮಾಡಿಕೊಳ್ಳಲಾರಂಭಿಸಿದೆವು. ಇಂದಿಗೂ ನಾವು ಯೂರೋಪ್ ಮತ್ತು ಅಮೆರಿಕಗಳಿಂದ ಏರೋಪ್ಲೇನ್‌ಗಳ ಆಮದು ಮಾಡಿಕೊಳ್ಳುತ್ತಿದ್ದೇವೆ. ರಾಷ್ಟ್ರೀಯ ಸ್ವಯಂ ಸೇವ ಸಂಘದ ರಾಷ್ಟ್ರೀಯವಾದಿಗಳೂ ಕೂಡ ಒಂದಷ್ಟು ಸ್ವದೇ ಘೋಷಣೆಗಳನ್ನು ಅನ್ವೇಷಿಸಿದ್ದನ್ನು ಬಿಟ್ಟರೆ ಬೇರೇನನ್ ಆವಿಷ್ಕಾರ ಮಾಡಲಿಲ್ಲ.

ವಿಮಾನಗಳನ್ನು ತಯಾರಿಸುವ ಸಾಮರ್ಥ್ಯ ನಮ ಯಾವಾಗ ಬರುತ್ತದೆ ಎಂಬುದು ಯಾರಿಗೂ ಗೊತ್ತಿ ಆದರೆ ಸದ್ಯದಲ್ಲೇ ಈ ದೇಶದಲ್ಲಿ ಬುಲೆಟ್ ಟ್ರೈನ್‌ಗ ಸುತ್ತಾಡಲಿವೆ ಎಂಬ ಸುದ್ದಿಯಂತೂ ಹೊರಬಿದ್ದಿದೆ.

1853ರಲ್ಲಿ ಬಾಂಬೆ ಮತ್ತು ಥಾಣೆಗಳ ನಡು ಭಾರತದ ಪ್ರಪ್ರಥಮ ರೈಲು ಬಂಡಿ ಹಳಿಯೇರಿ ಸಂದರ್ಭದಲ್ಲಿ ಹಲವು ಹಿಂದೂ ಗುರುಗಳು ಮ ಶಂಕರಾಚಾರ್ಯರು ಯೋಜನೆಯನ್ನು ಕಟುವಾ ವಿರೋಧಿಸಿದ್ದರು. ಕಾರಣ ರೈಲುಗಳು ಪವಿತ್ರ ಗೋವುಗಳ ಕೊಲ್ಲುತ್ತವೆ ಎಂಬುದಾಗಿತ್ತು. ಆ ದನಗಳನ್ನು ಕಾಯು ಮನುಷ್ಯರು ಕೊಲ್ಲಲ್ಪಡುತ್ತಾರೆ ಎಂಬುದಕ್ಕಿಂತಲೂ ಅವ ದನಗಳ ಬಗ್ಗೆ ಹೆಚ್ಚಿನ ಕಾಳಜಿ ತೋರಿದ್ದರು. ಯಾಕೆಂ ಅಂದಿಗೂ ಇಂದಿಗೂ ದನ ಪವಿತ್ರವೇ ಹೊರತು ಮನು ಪವಿತ್ರ ಅಲ್ಲ; ನಿರ್ದಿಷ್ಟವಾಗಿ ಹೇಳುವುದಾದರೆ ಕಾಯುವ ಕೀಳು ಜಾತಿಯ ಮನುಷ್ಯರಂತ ಪವಿತ್ರರೆನಿಸಿಕೊಳ್ಳಲು ಸಾಧ್ಯವೇ ಇಲ್ಲ, ಆ ಗೋವು ಪಾಲನೆ ಮಾಡುತ್ತಿರುವವರು ಮ್ಲೇಚ್ಛರು ಅಥ ಶೂದ್ರರಾಗಿರುವುದರಿಂದ ಅವರ ಸಾವನ್ನು ಕಟ್ಟಿಕೊಂ ಪಂಡಿತರಿಗೆ ಆಗಬೇಕಾದ್ದು ಏನೂ ಇಲ್ಲ.

ಅದೇನೇ ಇರಲಿ, ರಾಮನ ನಾಡಿನಲ್ಲಿ ಇಂ ಆಮದಾದ ಬುಲೆಟ್ ಟ್ರೈನ್‌ಗಳು ಹರಿದಾಡಲಿವೆ. ಮಾಧ ವರದಿಗಳ ಪ್ರಕಾರ ಭಾರತದಲ್ಲಿ ಇಂಥಾ ರೈಲು ನಿರ್ಮಾಣ ಮಾಡಲು ಪ್ರತಿ ಕಿಲೋಮೀಟರ್‌ಗೆ ರಿಂದ 100 ಕೋಟಿ ರೂಪಾಯಿ ವೆಚ್ಚ ತಗಲು ಮುಂಬೈ-ಅಹಮದಾಬಾದ್ ನಡುವಿನ 5 ಕಿಲೋಮೀಟರ್ ಉದ್ದದ ರೈಲು ಹಳಿ ನಿರ್ಮಾ 37,000 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಯೋಜನೆ ಲಾಭದಾಯಕವಾಗಿ ನಡೆಯಬೇಕೆಂ ಪ್ರಯಾಣಿಕರು ಪ್ರತಿ ಕಿಲೋ ಮೀಟರ್‌ಗೆ 5 ರೂಪಾ ದರ ತೆರಬೇಕಾಗುತ್ತದೆ. ನಮ್ಮ ಸರ್ಕಾರಿ ಶಾಲೆಗಳಲ್ಲಿ ಹಲಗೆಗಳೇ ಸರಿಯಾಗಿಲ್ಲದ ಸಂದರ್ಭದಲ್ಲೇ ಇದ ನಡೆಯುತ್ತಿದೆ.

• ಇಂಗ್ಲಿಷ್ ಮೂಲ: ಕಂಚಾ ಐಲ
• ಕನ್ನಡ ಅನುವಾದ: ದೊಡ್ಡಿಪಾಳ್ಯ ನರಸಿಂಹಮೂ



ದಲಿತರಿಗೆ ಕೊನೆಗ ಸಿಕ್ಕಿತು ಭೂಮಿ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿ ಶ್ರೀರಾಮರಂಗಾಪುರದಲ್ಲಿ (ಹಳೆ ಹೆಸರು-ಕೊಟ್ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆ ನೇತೃತ್ವದಲ್ಲಿ, ಕರ್ನಾ ಜನಶಕ್ತಿಯ ಸಹಭಾಗಿತ್ವದಲ್ಲಿ ಪ್ರಗತಿಪರ ಸಂಘಟನೆ ನಡೆಸಿದ ಚಳವಳಿಯ ಫಲವಾಗಿ ಮೂರು ತಲೆಮಾರು ಕಾಲ ಜೀತ ಮಾಡುತ್ತಿದ್ದ ಮತ್ತು ಭೂಮಾಲೀ ವಂಚನೆಯಿಂದ ತಮ್ಮ ಭೂಮಿಯನ್ನು ಕಳೆದುಕೊಂ ದಲಿತರ ಶೋಷಣೆ ಅಂತ್ಯಗೊಂಡಿದೆ. ನೂರಾರು ದಲಿತ ಅವರ ಭೂಮಿ ಪುನಃ ಸಿಕ್ಕಿದೆ. ಎಕರೆಗಟ್ಟಲೆ ಭೂಮಿ ಇನ್ನು ಅವರು ಕೃಷಿ ಕಾಯಕ ಮಾಡಿ ಹೊಸಬದುಕಿ ಮುಖ ಮಾಡಲಿದ್ದಾರೆ. ಈ ಹೋರಾಟದಲ್ಲಿ ಪ್ರಮು ಪಾತ್ರವಹಿಸಿದ ಕುಮಾರ್ ಸಮತಳ ಮತ್ತು ಕರಿಂ ಗುಡಿಮನಿಯವರಿಗೆ ಅಭಿನಂದನೆಗಳು.


...ಚಿತ್ರದುರ್ಗ: 'ಕೈ' ಸುಟ್ಟ ಕಾಂಗ್ರೆಸ್ ಫಜೀತಿಗಳು!


...ಂತೂ-ಇಂತೂ ಕಾಂಗ್ರೆಸ್‌ಗೆ ಕಾಂಗ್ರೆಸ್ಸೆ ಶತ್ರು ...ಮ ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಮಟ್ಟಿಗೆ ಅಕ್ಷರಶಃ ...ಗಿದೆ. ಇಲ್ಲದೆ ಹೋಗಿದ್ದರೆ ನಾಲ್ಕು ಜನ ಶಾಸಕರು, ...ಎಂ.ಎಲ್‌ಸಿಗಳು, ಒಬ್ಬ ಎಂ.ಪಿ ಸಾಲದ್ದಕ್ಕೆ ಪ್ರಭಾವಿ ...ಒಬ್ಬ ಮಂತ್ರಿಯಿದ್ದರೂ ಜಿ.ಪಂ. ಅಧ್ಯಕ್ಷಗಾದಿ ...ಸಂಖ್ಯಾಬಲವಿರುವ ಕಾಂಗ್ರೆಸ್‌ನ ಕೈತಪ್ಪುತ್ತಿರಲಿಲ್ಲ. ...ಯ ಒಳಸಂಚು, ಜೆಡಿಎಸ್‌ನ ನಂಬಿಕೆದ್ರೋಹಗಳ ...ಂದಾಗಿ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿ ಗಿರಿ ...ಲ್, ಕೈ ಪಾಳಯದ ಅಧಿಕೃತ ಹುರಿಯಾಳು ...ರೆಡ್ಡಿಯಿಂದ ಅಧ್ಯಕ್ಷಗಿರಿ ಕಿತ್ತುಕೊಳ್ಳುವಲ್ಲಿ ...ಯಾಗಿದ್ದಾನೆ. ಕಳೆದ ಮೂರೂವರೆ ವರ್ಷಗಳಿಂದ ...ಪಂಚಾಯ್ತಿಯಲ್ಲಿ ಅಧಿಪತ್ಯ ಮೆರೆದಿದ್ದ ಕಾಂಗ್ರೆಸ್‌ಗೆ ...ರ್ಜರಿ ಮುಖಭಂಗವೇ ಸರಿ. ಜಿಲ್ಲಾ ಪಂಚಾಯ್ತಿ ...ದ ಬಾಬು ರೆಡ್ಡಿ-ಗಿರಿ ಜಾನಕಲ್ಲರ ಅಧಿಕಾರದಾಹ, ... ಸುಧಾಕರನ ಸ್ವಪ್ರತಿಷ್ಠೆ, ಮಂತ್ರಿ ಆಂಜನೇಯರ ...ಯಕತೆ, ಪಕ್ಷದ ಜಿಲ್ಲಾಧ್ಯಕ್ಷ ಸೇತುರಾಮನ ಹೇತ್ಲಾಂಡಿ ...ರಣ, ಔಟ್‌ಡೇಟೆಡ್ ರಾಜಕಾರಣಿ ಮಂಜುನಾಥರ ...ತ್ರಾಮೋಹ ಇವೆಲ್ಲ ಒಟ್ಟಾಗಿಯೇ ಕಾಂಗ್ರೆಸ್‌ನ ...ಬರೋದು ನಗ್ನಸತ್ಯ.


...ಾಗೆ ನೋಡಿದರೆ ಇಲ್ಲಿ ಚುನಾವಣೆ, ಸೋಲು-...ಗಳ ಪ್ರಮೇಯವೇ ಬರುತ್ತಿರಲಿಲ್ಲ. ಲೆಕ್ಕಾಚಾರ ...ಶುದ್ಧವಾಗಿತ್ತು. ಸ್ಪಷ್ಟ ಬಹುಮತ ಬಾರದ ಕಾರಣ ...-ಜೆಡಿಎಸ್‌ಗಳು ಮೂರುವರೆ ವರ್ಷದ ಹಿಂದೆಯೇ 18 ತಿಂಗಳ ಪುನರಾವರ್ತನ ಅವಧಿಗೆ ತಮ್ಮವರನ್ನು ...ನ್ನಾಗಿಸುವ ಕರಾರು ಮಾಡಿಕೊಂಡಿದ್ದವು. ಅದರಂತೆ ...ೊನೆಯ 18 ತಿಂಗಳ ಅಧಿಕಾರ ಕಾಂಗ್ರೆಸ್‌ಗೇ ...ತ್ತು. ಆಂತರಿಕ ಕಚ್ಚಾಟಗಳನ್ನು ತಡೆಯುವುದಕ್ಕೋಸ್ಕರ ...8 ತಿಂಗಳಲ್ಲೂ ಒಬ್ಬರು 9 ತಿಂಗಳು, ಆನಂತರ ...ಬ್ಬರು 9 ತಿಂಗಳಿನಂತೆ ಒಟ್ಟು ಇಬ್ಬರು ಕಾಂಗ್ರೆಸ್ಸಿಗರು ...ರ ಅನುಭವಿಸುವ ಒಪ್ಪಂದವೂ ನಡೆದಿತ್ತು. ಆದರೆ ...ಲ ಒಂಬತ್ತು ತಿಂಗಳಿಗೆ ನಮ್ಮವರೇ ಅಧ್ಯಕ್ಷರಾಗಬೇ... ಕಾಂಗ್ರೆಸ್ಸಿಗರ ಬಣ ಪ್ರತಿಷ್ಠೆಯೇ ಇಷ್ಟೆಲ್ಲಾ ಅವಾಂತರಕ್ಕೆ ...

...ಹಾಲಿ ಶಾಸಕ ಸುಧಾಕರ್ ಮತ್ತು ಅಸೆಂಬ್ಲಿ ಎಲೆಕ್ಷನ್‌ನಲ್ಲಿ ...ತು ಸುಣ್ಣವಾದ ಜಿ.ಎಸ್.ಮಂಜುನಾಥ್ ಈ ...ಮಾದ ಪ್ರಮುಖ ಸೂತ್ರಧಾರಿಗಳು. ಮೊದಲ 9 ...ಗೆ ತನ್ನ ಬೆಂಬಲಿಗ ಬಾಬುರೆಡ್ಡಿಯನ್ನೇ ಅಧ್ಯಕ್ಷರನ್ನಾಗಿಸ...ದು ಸುಧಾಕರ್ ಸಿಂಡಿಕೇಟು ಹಠ ಹಿಡಿದು ಕೂತಿತ್ತು. ... ಪ್ರತಿಯಾಗಿ ಜಿ.ಎಸ್.ಮಂಜುನಾಥ್ ಶತಾಯಗತಾಯ ...ಮಗ ಗಿರಿಯನ್ನೆ ಮೊದಲು ಒಂಬತ್ತು ತಿಂಗಳ ...ರನನ್ನಾಗಿಸಬೇಕು ಅಂತ ತಂತ್ರ ಹೆಣೆದಿದ್ದರು. ಈ ...ಮಗನ ಬೆನ್ನಿಗೆ ನಿಂತದ್ದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ...ರಾಮು. ಹೇಳಿಕೇಳಿ ಈತ ಮಂಜುನಾಥರ ...ಕಟಾಕ್ಷದಲ್ಲೇ ದುಂಡಗಾದವನು.

...ಜಿ.ಪಂ ಅಖಾಡದಲ್ಲಾದರು ತಮ್ಮ ಖದರು ...ಸದಿದ್ದರೆ ಜಿಲ್ಲೆಯಲ್ಲಿ ಮಂತ್ರಿ ಆಂಜನೇಯರೇ ಪ್ರಭಾವಿ ...ಕಾರಣಿಯಾಗಿ ಬೇರೂರಿಬಿಡುತ್ತಾರೆ ಎಂಬ ಬೇಗುದಿಗೆ







ಮಂಜುನಾಥ್

ಜಿ.ಪಂ ಗದ್ದುಗೆಯಲ್ಲಿ ಡಿ.ಸಿ.ಸಿ. ಬ್ಯಾಂಕ್ ರಾಜಕಾರಣ

ಬಾಬುರೆಡ್ಡಿಯನ್ನು ಜಿಲ್ಲಾ ಪಂಚಾಯ್ತಿ ಅಧ್ಯಕ್ಷನನ್ನಾಗಿಸಿಯೇ ತೀರಬೇಕೆಂದು ಹಿರಿಯೂರು ಶಾಸಕ ಸುಧಾಕರ್ ಹಠ ಹಿಡಿದಿದ್ದರ ಹಿಂದೆ ಚಿತ್ರದುರ್ಗ ಜಿಲ್ಲಾ ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷಗಿರಿಯ ರಾಜಕಾರಣವಿದೆ ಎಂಬುದು ಬಹಳ ಜನರಿಗೆ ಗೊತ್ತಿರಲಿಕ್ಕಿಲ್ಲ. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸುಧಾಕರ್ ಅವಿರೋಧವಾಗಿ ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿ ಆಯ್ಕೆಯಾಗಿದ್ದ. ಈ 'ಅವಿರೋಧ ಆಯ್ಕೆ' ಹಿಂದೆ ಭರ್ಜರಿ ರಣತಂತ್ರವೇ ನಡೆದಿತ್ತು. ಡಿಸಿಸಿ ಬ್ಯಾಂಕ್ ಅಧ್ಯಕ್ಷೀಯ ಚುನಾವಣೆಯಲ್ಲಿ ಸುಧಾಕರ್‌ಗೆ ಪ್ರಬಲ ಪ್ರತಿಸ್ಪರ್ಧೆ ಒಡ್ಡುವ ಸಾಧ್ಯತೆ ಇದ್ದದ್ದು ಹಾಲಿ ಅಧ್ಯಕ್ಷನಾಗಿದ್ದ ಲಕ್ಷ್ಮೀಕಾಂತ್‌ಗೆ ಮಾತ್ರ. ನೇರ ಚುನಾವಣೆಯಲ್ಲಿ ಗೆಲ್ಲುವ ಖಾತರಿ ಇಲ್ಲದ ಸುಧಾಕರ್ ಪ್ರಚಂಡ ಲೆಕ್ಕಾಚಾರ ಹಾಕಿ ಲಕ್ಷ್ಮೀಕಾಂತನನ್ನು ನಿರ್ದೇಶಕ ಸ್ಥಾನದಿಂದಲೇ ಕಿತ್ತುಹಾಕಲು ಯೋಜನೆ ರೂಪಿಸಿದ್ದ. ಬ್ಯಾಂಕ್‌ಗೆ ನಿರ್ದೇಶಕನೇ ಆಗದವನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಹೇಗೆ ಸಾಧ್ಯ? ಆಗ ತನ್ನ ಅವಿರೋಧ ಆಯ್ಕೆ ಸುಲಭವಾಗಿಬಿಡುತ್ತದೆ ಎನ್ನುವುದು ಸುಧಾಕರ್ ಲೆಕ್ಕಾಚಾರವಾಗಿತ್ತು. ಆ ಕೆಲಸವೂ ಸಲೀಸಾಗಿ ಆಗುವಂತದ್ದಾಗಿರಲಿಲ್ಲ. ಆಗ ಸುಧಾಕರ್ ಆಯ್ಕೆ ಮಾಡಿಕೊಂಡದ್ದೇ ಜಿ.ಪಂ ಸದಸ್ಯ ಬಾಬೂರೆಡ್ಡಿಯನ್ನು. ಒಂದೊಮ್ಮೆ ಸುಧಾಕರ್‌ನನ್ನು ಡಿಸಿಸಿ ಬ್ಯಾಂಕ್ ಅಧ್ಯಕ್ಷನಾಗಿಸಲು ಬಾಬುರೆಡ್ಡಿ ಸಹಾಯ ಮಾಡಿದ್ದೇ ಆದರೆ ಬಾಬುರೆಡ್ಡಿಯನ್ನು ಸುಧಾಕರ್ ಜಿ.ಪಂ ಅಧ್ಯಕ್ಷಗಾದಿಯಲ್ಲಿ ಕೂರಿಸಬೇಕೆನ್ನುವ ಒಪ್ಪಂದ ನಡೆದದ್ದೇ ಆಗ. ಅದಕ್ಕೋಸ್ಕರವೇ ಬಾಬೂರೆಡ್ಡಿ ತನ್ನ ಕುಲಸ್ಥ ಸದಸ್ಯರನ್ನು ಒಟ್ಟುಗೂಡಿಸಿ, ಬುರುಜನಹಟ್ಟಿಯ ರೆಡ್ಡಿಗಳಿಗೆ ಗಾಳಹಾಕಿದ್ದಲ್ಲದೆ ತನ್ನದೇ ಗ್ರೀನ್‌ಪಾರ್ಕ್ ಬಾರ್‌ನಲ್ಲಿ ಕ್ಯಾಶಿಯರ್ ಆಗಿರುವ ಹನುಮಂತನ ಮೂಲಕ ಲಕ್ಷ್ಮೀಕಾಂತನನ್ನು ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕ ಸ್ಥಾನದಿಂದ ಕಿತ್ತಾಕಿಸಿದ್ದ. ಹಾಗಾಗಿಯೇ ಶಾಸಕ ಸುಧಾಕರ್ ಅವಿರೋಧವಾಗಿ ಡಿಸಿಸಿ ಬ್ಯಾಂಕ್ ಚುಕ್ಕಾಣಿ ಹಿಡಿಯಲು ಸಾಧ್ಯವಾದದ್ದು. ಬಾಬುರೆಡ್ಡಿಯ ಈ ಋಣ ತೀರಿಸುವುದಕ್ಕೆ ಜಿ.ಪಂ. ಚುನಾವಣೆಯಲ್ಲಿ ಶಾಸಕ ಸುಧಾಕರ್ ಇಡೀ ಕಾಂಗ್ರೆಸ್ ಪಾರ್ಟಿಯನ್ನೇ ಎಕ್ಕುಟ್ಟಿಸಿದ್ದಾನೆ.

ಸಿಲುಕಿದ ಸುಧಾಕರ್ ಸಿಂಡಿಕೇಟು ರಾಜಿಗೆ ಸುತಾರಂ ಒಪ್ಪದೆ ಬಾಬುರೆಡ್ಡಿಯನ್ನೆ ಅಧ್ಯಕ್ಷನನ್ನಾಗಿಸಲು ಯುದ್ಧ ಸಾರಿಯೇ ಬಿಟ್ಟಿತ್ತು. ಇತ್ತ ತಾನು ಗೆದ್ದದ್ದು ಮೀಸಲು ಕ್ಷೇತ್ರವಾದರು ತನ್ನ ಗೆಲುವಿಗೆ ಕ್ಷೇತ್ರದಲ್ಲಿರುವ ಪ್ರಬಲ ಸಾಧು ಲಿಂಗಾಯತ ಮತ ಮತ್ತು ಸಿರಿಗೆರೆ ಮಠದ ಹುಕುಂಗಳನ್ನೇ ನೆಚ್ಚಿಕೊಂಡಿರಬೇಕಾದ ಮಂತ್ರಿ ಆಂಜನೇಯ, ಅದೇ ಕೋಮಿನ ಜಿ.ಎಸ್.ಮಂಜುನಾಥ್‌ರನ್ನು ಎದುರುಹಾಕಿಕೊಳ್ಳದ ಅಸಹಾಯಕತೆಗೆ ಸಿಲುಕಿದ್ದರು. ಅಲ್ಲದೆ ಸುಧಾಕರ್ ಸಿಂಡಿಕೇಟಿನ ರಾಜಕಾರಣದ ಒಳಮರ್ಮವನ್ನೂ ಅರಿತಿದ್ದ ಆಂಜನೇಯ ತಮ್ಮ ಅಸಹಾಯಕತೆಗೆ ಮತ್ತೊಂದಷ್ಟು ಮೌನ ಬೆರೆಸಿಕೊಂಡು ತಟಸ್ಥರಾಗಿಬಿಟ್ಟಿದ್ದರು. ಅದರ ಲಾಭ ಪಡೆದ ಜಿ.ಎಸ್.ಮಂಜುನಾಥ್, ಸೇತುರಾಂ, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಆರ್.ಕೆ.ನಾಯ್ಡು, ಪ್ರಧಾನ ಕಾರ್ಯದರ್ಶಿ ಬಿ.ಜಿ.ಶ್ರೀನಿವಾಸರ ಸಿಂಡಿಕೇಟು ಬಿಜೆಪಿ ಮತ್ತು ಜೆಡಿಎಸ್ ಜೊತೆ ಸೇರಿ ಗೆಲುವಿನ ಗುಣಕಾರ ಶುರು ಮಾಡಿಕೊಂಡಿದ್ದರು.

ತಿಪ್ಪಾರೆಡ್ಡಿಯ ಮಸಲತ್ತು

ಈ ಎಲ್ಲಾ ಬಂಡಾಯ ಕಾಂಗ್ರೆಸ್ಸಿಗರ ನೆರವು ಪಡೆದು ಕೈ ಪಾರ್ಟಿಗೆ ಭರ್ಜರಿ ಖೆಡ್ಡಾ ರೆಡಿ ಮಾಡಿದ್ದು ಬಿಜೆಪಿ ಶಾಸಕ ತಿಪ್ಪಾರೆಡ್ಡಿ. ಈತನೂ ಒಂದು ಕಾಲಕ್ಕೆ ಕಾಂಗ್ರೆಸ್‌ನಲ್ಲೆ ಅಧಿಕಾರ ರುಚಿಕಂಡು ಈಗ ಕ'ಮಲ'ಕ್ಕೆ ಜಿಗಿದಂತ ಸಮಯಸಾಧಕ ರಾಜಕಾರಣಿ. ದೀರ್ಘಕಾಲ ಕಾಂಗ್ರೆಸ್‌ನಲ್ಲಿ ಆಡಿ ಬೆಳೆದ ತಿಪ್ಪಾರೆಡ್ಡಿಗೆ ಚಿತ್ರದುರ್ಗ ಜಿಲ್ಲಾ ಕೈ ಪಾಳಯದ ಒಳಮರ್ಮಗಳೆಲ್ಲ ಬಲು ಚೆನ್ನಾಗಿಯೇ ತಿಳಿದಿದ್ದವು. ಸೇತುರಾಮನಂತಾ ಹೇತ್ಲಾಂಡಿ ಅಧ್ಯಕ್ಷನ ವೀಕ್ನೆಸ್ಸು, ಜಿ.ಎಸ್.ಮಂಜುನಾಥರ ಹಪಾಹಪಿಗಳನ್ನೆಲ್ಲ ನಾಜೂಕಾಗಿ ಬಳಸಿಕೊಳ್ಳುವಲ್ಲಿ ತಿಪ್ಪಾರೆಡ್ಡಿ ಕಿಂಚಿತ್ತೂ ತಪ್ಪೆಸಗಿಲ್ಲ.

ಇದೇ ತಿಪ್ಪಾರೆಡ್ಡಿಯಿಂದ ಚಿತ್ರದುರ್ಗ ಅಸೆಂಬ್ಲಿ ಚುನಾವಣೆಯಲ್ಲಿ ಸೋತಿದ್ದ ಜಿ.ಎಸ್.ಮಂಜುನಾಥ್ ತನ್ನ ಮಗನನ್ನು ಜಿ.ಪಂ. ಅಧ್ಯಕ್ಷನನ್ನಾಗಿಸಲು ಅದೇ ತಿಪ್ಪಾರೆಡ್ಡಿಯ ಮೊರೆ ಹೋಗಿದ್ದರು. ತನ್ನ ಪರವಾಗಿದ್ದ ಜಿಲ್ಲಾಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿಗಳಂತ ಘಟಾನುಘಟಿ ಹುದ್ದೆಗಳ ಸಮೇತ ಕಾಂಗ್ರೆಸ್‌ನ ಮೀಸೆ ಮಹಾಲಿಂಗಪ್ಪ, ಪಾರ್ವತಮ್ಮ ಗಿರಿ, ಸುಜಾತ ಅನಿತಾ ಬಸವರಾಜ (ಹೊಸದುರ್ಗ ಶಾಸಕ ಗೋವಿಂದಪ್ಪನ ಖಾಸಾ ಸೊಸೆ) ರಂತಹ ಒಟ್ಟು ಏಳು ಮಂದಿ ಬಂಡಾಯ ಕಾಂಗ್ರೆಸ್ಸಿಗರನ್ನು ತಿಪ್ಪಾರೆಡ್ಡಿಯ ಮುಂದೆ ಗುಡ್ಡೆ ಹಾಕಿದ ಮಂಜುನಾಥ್ ಮಗ ಜಾನಕಲ್ ಗಿರಿಯನ್ನು ಅಧ್ಯಕ್ಷಗಾದಿಗೆ ಕೂರಿಸಲು ಭರ್ಜರಿ ಡೀಲ್ ಕುದುರಿಸಿಕೊಂಡಿದ್ದರು. ಕೈ ತೊರೆದು ಬಿಜೆಪಿ ಸೇರಿದಾಗಿನಿಂದಲೂ ಕಾಂಗ್ರೆಸ್‌ಗೆ ಒಂದೊಂದೇ ಮರ್ಮಾಘಾತ ನೀಡುತ್ತಲೇ ಬಂದಿರುವ ತಿಪ್ಪಾರೆಡ್ಡಿಗೆ ಇಂತದ್ದೊಂದು ಛಾನ್ಸ್ ಸಿಕ್ಕಿದ್ದೇ ತಡ ಮಂಜುನಾಥರ ಅಡಿಕೆ ವ್ಯಾಪಾರದ ದುಡ್ಡಲ್ಲಿ ಜೆಡಿಎಸ್‌ನ ದ್ಯಾಮಣ್ಣ, ವಿಜಯಮ್ಮ ಎಂಬೆರಡು ವಿಕೆಟುಗಳನ್ನೂ ತಮ್ಮ ತೆಕ್ಕೆಗೆ ಸೇರಿಸಿಕೊಂಡಿದ್ದರು. ಕೇವಲ ಒಂಬತ್ತು ತಿಂಗಳ ಅವಧಿಗೆ ಮಗನನ್ನು ಅಧ್ಯಕ್ಷನನ್ನಾಗಿಸಲು ಜಿ.ಎಸ್.ಮಂಜುನಾಥ್‌ರ ಗಂಟು ಸಣ್ಣದಾಗೇನೂ ಕರಗಿಲ್ಲ. ಏನಿಲ್ಲವೆಂದರೂ ಒಂದು ಕೋಟಿ ರೂಪಾಯಿ ಖರ್ಚಾಗಿದೆ ಎನ್ನುವ ಗುಸುಗುಸು ದುರ್ಗದ ತುಂಬಾ ಹರಿದಾಡುತ್ತಿದೆ. ಈ ಸಲದ ಬಂಪರ್ ಅಡಿಕೆ ಬೆಳೆಯಿಂದ ತಿಜೋರಿ ಸೇರಿದ್ದ ರೊಕ್ಕವನ್ನೆಲ್ಲಾ ತಂದು ನೀರಿನಂತೆ ಸುರಿದಿದ್ದಾರೆ. ಬಂದ ಲಾಭ ಅಧಿಕಾರಕ್ಕಾಗಿ ಹೋಗಲಿ ಎನ್ನುವ ಉದಾರತೆಯಲ್ಲಿ ಕುದುರೆ ವ್ಯಾಪಾರಕ್ಕೂ ಕೈಯಿಟ್ಟ ಮಂಜುನಾಥ್ ಬಂಡಾಯ ಕಾಂಗ್ರೆಸ್ಸಿಗರಿಗೆ, ಜೆಡಿಎಸ್ ಭಿನ್ನಮತೀಯರಿಗೆ ತಲಾ ಐದೈದು ಲಕ್ಷ ಫಿಕ್ಸ್ ಮಾಡಿದ ವರ್ತಮಾನ ಗುಟ್ಟಾಗೇನು ಉಳಿದಿಲ್ಲ. ಬಿಜೆಪಿ 12 ಜನ ಸಧಸ್ಯರಿಗೂ ತಲೆದಂಡ ತೆತ್ತು ತಿಪ್ಪಾರೆಡ್ಡಿಯ ಕೈಬೆಚ್ಚಗೆ ಮಾಡಿದ್ದೂ ರಹಸ್ಯವೇನಲ್ಲ.

ಅಂದಹಾಗೆ, ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಗಿರಿ ಜಾನಕಲ್ ಬಿಜೆಪಿಗೆ ನೆಗೆಯುವುದು ಬಹುತೇಕ ಗ್ಯಾರಂಟಿಯಾಗಿದೆ. ಮೊದಲ ಒಂಬತ್ತು ತಿಂಗಳು ಗಿರಿಯ ಅಧಿಕಾರಾವಧಿ ನಂತರ ಕೊನೆಯ ಒಂಬತ್ತು ತಿಂಗಳನ್ನು ಬಿಜೆಪಿಗೆ ಬಿಟ್ಟುಕೊಡಬೇಕೆನ್ನುವ ಕರಾರೂ ಆಗಿದೆ. ಒಟ್ಟನಲ್ಲಿ ಶಾಸಕ ತಿಪ್ಪಾರೆಡ್ಡಿ ಜಿಲ್ಲೆಯಲ್ಲಿ ಕಾಂಗ್ರೆಸ್ ಸರ್ವನಾಶ ಮಾಡುವ ಉಮೇದಿನಲ್ಲಿ ತೇಲುತ್ತಿದ್ದಾನೆ. ಅದಾಗಲೇ ಮೀಸೆ ಮಹಾಲಿಂಗಪ್ಪ ಎಂಬ ಎಡವಟ್ಟು ಗಿರಾಕಿಗೆ ತಿಪ್ಪಾರೆಡ್ಡಿ ಗಾಳ ಬಿಗಿದು ಕೂರಿಸಿಕೊಂಡಿದ್ದಾನೆ. ಸದ್ಯ ಕಾಂಗ್ರೆಸ್‌ನಲ್ಲಿರುವ ಮೀಸೆ ಮಹಾಲಿಂಗಪ್ಪನಿಗೆ ಹಿರಿಯೂರು ಕ್ಷೇತ್ರದಿಂದ ಶಾಸಕನಾಗಬೇಕೆಂಬ ಕನಸಿದೆ. ಆದರೆ ಹಾಲಿ ಶಾಸಕ ಸುಧಾಕರ್ ಇದಕ್ಕೆ ಅಡ್ಡಿಯಾಗಿದ್ದಾನೆ. ಹೇಗೂ ಬಿಜೆಪಿಯ ತಿಪ್ಪಾರೆಡ್ಡಿಗೆ ಹಿರಿಯೂರು, ಚಳ್ಳಕೆರೆ ಕ್ಷೇತ್ರಗಳಲ್ಲಿ ಹೋಲ್ಡ್ ಇರುವುದರಿಂದ ಕಮಲಕ್ಕೆ ನೆಗೆದರೆ ಹಿರಿಯೂರು ಟಿಕೆಟ್ ಖಾತ್ರಿ ಎಂಬುದು ಮೀಸೆಯ ಮಹಾಪ್ಲಾನ್. ಇದನ್ನು ಅರಿತ ತಿಪ್ಪಾರೆಡ್ಡಿ, ಮಹಾಲಿಂಗಪ್ಪನಿಗೆ ಜಿ.ಪಂ. ಚುನಾವಣೆಯ ಗಾಳ ಬೀಸಿದ್ದ. ಮೀನು ಸುಖತಾಗೆ ಕಚ್ಚಿಕೊಂಡಿದೆ. ಒಟ್ಟನಲ್ಲಿ ಒಬ್ಬೊಬ್ಬರನ್ನಾಗಿ ಕಾಂಗ್ರೆಸ್ ಮನೆ ಖಾಲಿ ಮಾಡಿಸುವ ಕಾಂಟ್ರ್ಯಾಕ್ಟು ಪಡೆದವನಂತೆ ತಿಪ್ಪಾರೆಡ್ಡಿ ಮಸಲತ್ತು ಮಾಡುತ್ತಲೇ ಇದ್ದಾನೆ. ಪರಿಸ್ಥಿತಿ ಹೀಗೇ ಮುಂದುವರೆದಲ್ಲಿ ಚಿತ್ರದುರ್ಗದಲ್ಲಿ ಕಾಂಗ್ರೆಸ್ಸು ನೆಲೆ ಕಳೆದುಕೊಳ್ಳುವ ಅಪಾಯವನ್ನು ತಳ್ಳಿಹಾಕುವಂತಿಲ್ಲ.

■ ಟಿ.ಎನ್.ಷಣ್ಮುಖ


ಜಾಯಮಾನ

...ಳಿಗೆ ಸಂದ ಪದಗಳೆಲ್ಲ ಸಪಾಟು ಮಸಿ
...ದ ಮಾತೆಲ್ಲ ಬರಿ ಶಬ್ದ
...ಳಿಗೂ ಪದಕ್ಕೂ ಮಧ್ಯೆ ಇರುವ ತಾವು
...ವ ಭಾಷೆ
...ತಿಗೂ ಶಬ್ದಕ್ಕೂ ನಡುವಿರುವ ಮೌನ
...ವ ರಾಗ

...ರ್ಥೈಸಿಕೊಳ್ಳಲಾಗದ್ದು ಇರಲೇಬಾರದೆಂದು ಲೋಕರೂಢಿ
...ಗೆ ಹೀಗೆ ಇರಲಾರದ್ದು ಬಂಡಿತಾ ಇರಬಾರದ್ದು
...ವ ಮೊಳೆಯಲು ಬೆಳೆಯಲು ಇಂತಿಷ್ಟು ಕಾಲ ಬೇಕು ನೋಡಿ

...ವದ ಒಳ ಲೋಕ ಯಾರ ಒಪ್ಪಿಗೆಯ ಗ್ರಹೀತದ ಟೊಪ್ಪಿ ಧರಿಸಿ
...ರೆಯುರಿಚ್ಚಿಸಲಾರದು
...ು ಇರುವುದೇ ಅನುಮಾನವೆಂದು ಅನ್ನಿಸಿಬಿಟ್ಟರೆ,
...ದ್ದರೂ ಅದು ಬೇರೆಯವರಿಗೆ ದುಃಖ ಕೊಡುವುದಾದರೆ,
...ರ್ಥೈಸಿಕೊಳ್ಳದೇ ಸುಮ್ಮನೆ ಕೈಜೋಡಿಸಿ
...ರ ಉಳಿದುಬಿಡುವುದು ಅದರ ಜಾಯಮಾನ.

...ನ್ನೆಲ್ಲ ರೂಕ್ಷ
...ಸ್ಸೆಲ್ಲ ಸೂಕ್ಷ್ಮ...
...ನ ಹಿಂದೆ ಅವಿತಿರುವ ಅಪ್ಪಟ್ಟ ಓದಿದವರು ಯಾರು... ■




ಕೊಡಬೇಕು ಕೊಳ್ಳಬೇಕು


ಎಲ್ಲೆಲ್ಲೂ ನೋವಿನ ಜಾತ್ರೆ ಸಂಜೆಯ ಈ ಮಬ್ಬು ಬೆಳಕಿನಲ್ಲಿ ,
ಕಮ್ಮಿ ಬೆಲೆಗೆ ಸಿಗುವ ಕಾಲ ಹೋಯಿತು
ಈಗ ಎಲ್ಲವೂ ತುಟ್ಟಿ ಯಾರೂ ಹೇಳಿಕೊಳ್ಳುವುದಿಲ್ಲ
ಇಗೋ ಎನ್ನುವವರಿಲ್ಲ

ಜಾತ್ರೆಯ ಧೂಳಲ್ಲಿ ಮುಳುಗಿ ಒಣಗಿದ,
ಯಾರದೋ ಖಾಸಗೀ ಮೂಗೇಟಿನಂತ
ಹಸಿ ನೋವು
ಸಿಗಬೇಕಾದರೆ ಪ್ರೀತಿ ಕೊಡಬೇಕು
ಮೈತುಂಬ ಮನತುಂಬ ತುಂಬಿ ತುಂಬಿ ಸುರಿದು ಸುರಿದು
ಆಗ ಬುಟ್ಟಿಗೆ ಹಾಕಿಕೊಳ್ಳಬಹುದು ನೋವು
ನಾವು
ಮನೆಗೊಯ್ದು ಬೆಚ್ಚನ್ನ ಎದೆಯೊಳಗೆ ಅಡೆ ಹಾಕಿ
ಮೇಲೆ ಕಾಯುವ ತೆಳು ಹುಲ್ಲು ಹರಡಿ ಹಣ್ಣು ಮಾಡಬಹುದು.

ಪ್ರೀತಿ, ಕೊಂದು ತಂದ ನೋವಿಗಿಂತ ಸಿಹಿ ಯಾವುದಿಲ್ಲ ಬಿಡಿ



■ ಸುಮಾ ಎಂಬಾರ್


ಒಡನಾಡಿಯ ಸಂತ ಪರಶು

ಒಡನಾಡಿಯ ಪರಶು ವಿರುದ್ಧ ಪೊಲೀಸ್-ಪಿಂಪ್ ಜಂಟಿ ಯುದ್ಧ

ಕಳ್ಳನನ್ನು ಹಿಡಿಯುವುದಕ್ಕೆಂದೇ ಸರ್ಕಾರ ಸಂಬಳ ಕೊಟ್ಟು ನೇಮಿಸಿರುವುದು ಪೊಲೀಸರನ್ನು ತಾನೆ? ಆದರೆ ಕಳ್ಳನನ್ನು ಹಿಡಿದ ತಪ್ಪಿಗೆ ಪೊಲೀಸನನ್ನೇ ಬಂಧಿಸಿ ಕಳ್ಳನಿಗೊಪ್ಪಿಸುವುದುಂಟೆ? ತನ್ನನ್ನು ಪತ್ತೆ ಹಚ್ಚಿ ಶಿಕ್ಷಿಸಿದ್ದಕ್ಕಾಗಿ ಕಳ್ಳನೇ ಪೊಲೀಸನನ್ನು ಹಿಡಿದು ಹೊಡೆದು ದೌರ್ಜನ್ಯ ವೆಸಗಿದರೆ ಹೇಗಿರುತ್ತೆ?

ನಂಬಿ ಬಿಡಿ; ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರೂರಾದ ಮೈಸೂರಿನಲ್ಲಿ ಪೊಲೀಸರು ಪೊಲೀಸರನ್ನೇ ಹಿಡಿದು ಕಳ್ಳನಿಗೊಪ್ಪಿಸುತ್ತಾರೆ. ಕಳ್ಳ ತನ್ನನ್ನು ಜೈಲಿಗಟ್ಟಿದ ಪೊಲೀಸನನ್ನು ಪೊಲೀಸರ ಜೊತೆ ಸೇರಿಕೊಂಡೇ ಹಿಡಿಯುತ್ತಾನೆ, ಹೊಡೆಯುತ್ತಾನೆ; ಆರೆಸ್ಟ್ ಕೂಡ ಮಾಡುತ್ತಾನೆ!


ಮೊನ್ನೆ ಜೂನ್ 29ರ ನಡುರಾತ್ರಿ ಮೈಸೂರಿನಿಂದ ಹೊರಟ ಬರೋಬ್ಬರಿ ಅರ್ಧ ಡಜನ್ ಪೊಲೀಸರಿದ್ದ ಖಾಕಿ ಪಡೆ ಪಿರಿಯಾಪಟ್ಟಣ ತಾಲ್ಲೂಕು ಕಾಗಲವಾಡಿ ಗ್ರಾಮ ಕಾಡಿನಂಚಿನ ತೋಟದ ಮನೆಯೊಂದಕ್ಕೆ ನುಗ್ಗಿದ್ದೇ ಯಾರೋ ಭಯಾನಕ ಭಯೋತ್ಪಾದಕನನ್ನು ವೀರಾವೇಶದಿಂದ ಹಿಡಿದು ಹಾಕಿದಂತೆ ಹೆಡೆ ಮುರಿಕಟ್ಟಿ ಎಳೆದು ತಂದದ್ದು ಯಾರನ್ನು ಗೊತ್ತೆ?

ಕಳೆದ ಇಪ್ಪತ್ತೈದು ವರ್ಷಗಳಿಂದ ಮೈಸೂರಿನ ವೇಶ್ಯಾವಾಟಿಕೆಗಳು, ಖತರ್‌ನಾಕ್ ತಲೆಹಿಡುಕರು, ಇಲ್ಲಿ ಸಿಲುಕಿದ್ದ ಮುಗ್ಧ ಹೆಣ್ಣು ಮಕ್ಕಳ ದುರ್ಗತಿ ಮತ್ತು ದುರುಳ ಕಾಮುಕರ ವಿರುದ್ಧ ಹೋರಾಡಿಕೊಂಡೇ ಬಂದ ಒಡನಾಡಿ ಸಂಸ್ಥೆಯ ಪರಶೂರನ್ನು!

ಮೈಸೂರಿನ ಒಡನಾಡಿ ಸಂಸ್ಥೆ ಮತ್ತು ಹೆಣ್ಣುಮಕ್ಕಳ ಮಾರಾಟ ಜಾಲದ ವಿರುದ್ಧ ಅದು ನಡೆಸಿದ ಹೋರಾಟ ಇಂದು ವಿಶ್ವವಿಖ್ಯಾತ. ದೂರದ ಲಂಡನ್ನಿನಲ್ಲಿ ತನ್ನ ಶಾಖೆ ತೆರೆಯುವ ಮೂಲಕ ದೇಶದ ಅಸಂಖ್ಯಾತ ವೇಶ್ಯಾವಾಟಿಕೆಗಳಲ್ಲಿ ನರಳುವ ಮಹಿಳೆಯರ ರಕ್ಷಣೆಗೆ ಕಂಕಣ ತೊಟ್ಟಿದ್ದು ಮೈಸೂರಿನ ಒಡನಾಡಿ. ಸ್ಟ್ಯಾನ್ಲಿ ಮತ್ತು ಪರಶು ಎಂಬಿಬ್ಬರು ಮಾನವೀಯ ತುಡಿತದಿಂದ ಕಟ್ಟಿದ ಈ ಸಂಸ್ಥೆ ನೂರಾರು ಹೆಣ್ಣುಮಕ್ಕಳನ್ನು ತಲೆಹಿಡುಕರ ಕಪಿಮುಷ್ಠಿಯಿಂದ ಕಾಪಾಡಿತು. ಅಷ್ಟೇ ಸಂಖ್ಯೆಯಲ್ಲಿ ಅಪ್ರಾಪ್ತ ಬಾಲಕಿಯರನ್ನು ರಕ್ಷಿಸಿ ಅವರಿಗೆಂದೇ ವಸತಿ ಶಾಲೆ ಆರಂಭಿಸಿತು. ಹಾಗೆ ಸಾಕಿ ಬೆಳೆಸಿದ ಬಾಲಕಿಯರ ಬದುಕಿಗೆ ಆಸರೆ ಕಲ್ಪಿಸಿ ಅವರ ಭವಿಷ್ಯ ರೂಪಿಸಿತು. ಮೈಕಸುಬಿನಲ್ಲೇ ನಾಮಾವಶೇಷವಾಗುತ್ತಿದ್ದ ಅವರ ರೋಗರುಜಿನಗಳಿಗೂ ಚಿಕಿತ್ಸೆ ನೀಡಿತು. ಹಾಗೇ ಚರ್ಮೋದ್ಯಮದಿಂದ ನಿರಾಶ್ರಿತರಾದವರಿಗೆ ಔದ್ಯೋಗಿಕ ತರಬೇತಿ ನೀಡಿದ್ದು ಅವರಿಗೆ ಪರ್ಯಾಯ ಉದ್ಯೋಗ ಕಲ್ಪಿಸಿದ್ದು ಅವರ ಮಕ್ಕಳನ್ನು ಕಾಪಾಡಿದ್ದು, ಸಾಮಾಜಿಕವಾಗಿ ಸತ್ತೆ ಹೋಗಿದ್ದ ಇಂಥ ಪತಿತೆಯರಿಗೆ ಹೊಸ ಬದುಕು ರೂಪಿಸಿದ ಒಡನಾಡಿಯ ಪರಿಶ್ರಮಕ್ಕೆ ಯಾವ ಪ್ರಶಸ್ತಿ ತಾನೇ ಸರಿಸಾಟಿ?


ಒಂದಾನೊಂದು ಕಾಲಕ್ಕೆ ವೇಶ್ಯಾವಾಟಿಕೆ ಮತ್ತು ಕಾಮುಕರ ಹುತ್ತವಾಗಿದ್ದ ಮೈಸೂರು ಇವತ್ತು ಸಾಂಸ್ಕೃತಿಕ ನಗರವಾಗೇ ತಲೆಎತ್ತಿದೆಯೆಂದರೆ ಅದಕ್ಕೆ ಒಡನಾಡಿಯ ಹೋರಾಟ ಕೂಡ ಮುಖ್ಯ ಕಾರಣ. ಇಂಥದೊಂದು ಮಾನವೀಯ ಸತ್ಕಾರ್ಯದ-ರೂವಾರಿ ಪರಶುರನ್ನೇ ಜೂನ್ 29ರ ನಡುರಾತ್ರಿ ಭಯಾನಕ ಭಯೋತ್ಪಾದಕನಂತೆ ಮೈಸೂರು ಪೊಲೀಸರು ಅವರ ಪಿರಿಯಾಪಟ್ಟಣದ ತೋಟದಿಂದ ಬಂಧಿಸುತ್ತಾರೆ ಮತ್ತು ಅವರನ್ನು ಮೈಸೂರಿನ ಕುಖ್ಯಾತ ಪಿಂಪ್ ಸ್ಯಾಂಟ್ರೋ ರವಿಯ ಕೈಗೊಪ್ಪಿಸುತ್ತಾರೆ!

ಕಾಮುಕರ ವಿರುದ್ಧ ತಲೆಹಿಡುಕರ ವಿರುದ್ಧ ಆ ಕಾಲದಿಂದಲೂ ಹೋರಾಡಿಕೊಂಡೇ ಬಂದ ಪರಶು ದೇಶದ ಅಪ್ರತಿಮ ಸಾಮಾಜಿಕ ಕಾರ್ಯಕರ್ತ. ನೂರಾರು ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗಳಿಂದ ರಕ್ಷಿಸಿದ್ದಾರೆ. ಮೈಸೂರಷ್ಟೇ ಅಲ್ಲ ಅವರನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುತ್ತಾರೆ. ಸದ್ಯ ಸರ್ಕಾರದ ಬಾಲನ್ಯಾಯಮಂಡಳಿಗೆ ಸರ್ಕಾರವೇ ಅವರನ್ನು ಸದಸ್ಯರನ್ನಾಗಿ ನೇಮಿಸಿದೆ. ಇಷ್ಟೆಲ್ಲಾ ಗೊತ್ತಿದ್ದೂ ಮೈಸೂರು ಪೊಲೀಸರು ಅವರನ್ನೊಬ್ಬ ಅಪರಾಧಿಯಂತೆ ಬಂಧಿಸಿ ಮೊನ್ನೆಯಷ್ಟೇ ಜೈಲಿನಿಂದ ಹೊರಬಿದ್ದ ಸ್ಯಾಂಟ್ರೋ ರವಿ ಎಂಬ ಖತರ್‌ನಾಕ್ ತಲೆಹಿಡುಕನ ಕಾರಿಗೆ ದಬ್ಬುತ್ತಾರೆಂದರೆ ಇಲ್ಲಿ ಕಳ್ಳರ್‍ಯಾರು ಪೊಲೀಸರ್‍ಯಾರು?


ಕೋರ್ಟ್ ಆವರಣದಲ್ಲೇ ಪರಶುಗೆ ಪಿಂಪ್‌ರವಿಯ ಧಮಕಿ

ಯಾವ ಮೈಸೂರು ನಗರದ ಡಿಸಿಪಿ ರಾಜಣ್ಣನನ್ನು ಮುಖ್ಯಮಂತ್ರಿ ಸಿದ್ದು ನಂಬಿಕಸ್ಥನೆಂದು, ತನ್ನ ಹೆಸರು ಉಳಿಸುತ್ತಾನೆಂದು ಮೈಸೂರಿಗೆ ತಂದರೋ ಅದೇ ಡಿಸಿಪಿ ರಾಜಣ್ಣನೇ ಈ ದೌರ್ಜನ್ಯದ ರೂವಾರಿಯಾಗಿದ್ದ!

ಕಾರಣ ಎಂಥವರನ್ನೂ ನಾಚಿಸುವಂಥದ್ದೆ. ಡಿಸಿಪಿ ರಾಜಣ್ಣ ಈ ಹಿಂದೆ ಮಂಡ್ಯ, ಮೈಸೂರು ಭಾಗದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಡಿವೈಎಸ್ಪಿಯಾಗಿ ಕುಖ್ಯಾತಿಗಳಿಸಿದವನೆ. ಒಂದಲ್ಲ ಎರಡು ಬಾರಿ


ನಟೋರಿಯಸ್ ಪಿಂಪ್ ಸ್ಯಾಂಟ್ರೋರವಿ

ಲೋಕಾಯುಕ್ತಕ್ಕೆ ಸಿಕ್ಕಿಬಿದ್ದು ಕೈಬಾಯಿ ಕೆಡಿಸಿಕೊಂಡ ರಾಜ[...] ಇಲ್ಲಿಗೆ ವರ್ಷದ ಹಿಂದೆ ಡಿಸಿಪಿಯಾಗಿ ಅಧಿಕಾ[...] ವಹಿಸಿಕೊಂಡ. ಹೆಸರಿಗಷ್ಟೇ ಸಲೀಮ್ ಮೈಸೂರಿ[...] ಪೊಲೀಸ್ ಕಮೀಷನರ್ ಆದರೂ ಕಾರುಬಾರು ದರ್ಬಾರ[...] ರಾಜಣ್ಣನದ್ದೆ. ಇನ್ನು ಪೊಲೀಸ್ ಪೌರುಷ ಮೆರೆಯಬೇಕಲ್ಲ[...] ಅದಕ್ಕೆ ತಕ್ಕಂತೆ ಉತ್ಪತ್ತಿಯೂ ಹುಟ್ಟ ಬೇಕೆಂದರೆ ಅನಾಚ[...] ನಡೆದರೆ ತಾನೇ ಆದಾಯ ಬರುವುದು?

ಇಸ್ಪೀಟ್ ಕ್ಲಬ್ಬು, ವೇಶ್ಯಾವಾಟಿಕೆ, ರಾಬರಿ, ರೇ[...] ಕೊಲೆ, ವರದಕ್ಷಿಣೆ ಪೀಡೆ, ರಿಯಲ್ ಎಸ್ಟೇ[...] ಕಿತ್ತಾಟಗಳಾದಷ್ಟೂ ಪೊಲೀಸರಿಗೆ ಲಾಭ ಎಂಬು[...] ರಾಜಣ್ಣನ ಥಿಯರಿ. ಸಮಸ್ಯೆಯಾಗಿದ್ದು ರಾಜಣ್ಣನ ಪರಮ[...] ವಾಲೆ ಮಹೇಶ್ ಗೌಡ ಎಂಬ ಕೀಚಕನ ವಿಷಯದ[...]

ಗಣಿಕಳ್ಳರ ಬಿಎಸ್‌ಆರ್ ಕಾಂಗ್ರೆಸ್‌ನ ಮೈಸೂರು ನ[...] ಘಟಕದ ಅಧ್ಯಕ್ಷನಾದ ವಾಲೆ ಮಹೇಶ್ ಗೌಡ ಮೈಸೂ[...] ಕಂಡ ಕಟ್ಟಾ ಕಾಮುಕ ಮತ್ತು ಜನಕಂಟಕ. ಈತ ಒ[...] ರೌಡಿ ಕೂಡ. ತನ್ನ ಸುಲಿಗೆಗೆ ಪೂರಕವಾಗಿ ಖ[...] ಸೋಗಿನಲ್ಲೂ ಚಾಲ್ತಿಯಲ್ಲಿದ್ದ ವಾಲೆ ಮಹೇಶ್‌ಗೌಡನ ಮ[...] ಕಸಬೇ ಪೊಲೀಸ್ ಅಧಿಕಾರಿಗಳಿಗೆ ಸನ್[...] ಏರ್ಪಡಿಸುವುದು. ಸಿನಿಮಾ ನಟರ ಜೊತೆ ಫೋಟ[...] ತೆಗೆಸಿಕೊಳ್ಳುವುದು. ತಾನೂ ಸಿನಿಮಾ ಮಾಡ್ತೀನಿ ಎಂ[...] ಯುವತಿಯರನ್ನು ಪಟಾಯಿಸುವುದು, ರೌಡಿಗಳ[...] ಪೊಲೀಸರ ಜೊತೆ ಗುಂಡು ಪಾರ್ಟಿಗೆ ಕೂರಿಸುವು[...] ಕಂಡೋರ ಆಸ್ತಿಗೆ ವಕ್ಕರಿಸುವುದು, ವಂಚಕರು ರೌಡಿಗಳ[...] ಹಫ್ತಾ ಸುಲಿದು ಅದನ್ನು ಪೊಲೀಸರಿಗೆ ತಿನ್ನಿಸುವ[...] ಮಹೇಶ್ ಗೌಡನ ಹೊಟ್ಟೇಪಾಡು.

ವಿಚಿತ್ರವೆಂದರೆ ಆಗಾಗ ಪೊಲೀಸ್ ಯೂನಿಫಾ[...] ತೊಟ್ಟು ಸೊಂಟಕ್ಕೆ ರಿವಾಲ್ವರ್ ಸಿಕ್ಕಿಸಿಕೊಂಡು ತ[...] ಕೂಡ ಪೊಲೀಸ್ ಇನ್ಸ್‌ಪೆಕ್ಟರ್ ಎಂದು ಫೋ[...] ಕೊಡುವುದು ಈತನ ಖಯಾಲಿ!

ಇಂಥ ಹರಾಮಿಯನ್ನೇ ತಮ್ಮ ಛೇಂಬರಿನೊ[...] ರಾಜಣ್ಣ ಪ್ರತಿಷ್ಠಾಪಿಸಿಕೊಂಡ. ಅದು ಯಾವ ಮಟ್ಟಕ್ಕೆ[...] ಮಹೇಶ್‌ಗೌಡ ತನ್ನ ಬರ್ತ್‌ಡೆ ಪಾರ್ಟಿಯನ್ನು ಡಿ[...] ರಾಜಣ್ಣನ ಛೇಂಬರಿನಲ್ಲೇ ಆಚರಿಸಿಕೊಂಡರೆ ರಾ[...] ಮಾನಗೆಟ್ಟು ಕೇಕ್ ಕತ್ತರಿಸುತ್ತಿದ್ದರು. ಇಂಥ ಪ[...] ಮಹೇಶ್‌ಗೌಡ ಇಲ್ಲಿಗೆ ಮೂರು ತಿಂಗಳ ಹಿಂದೆ ಅಪ್ರಾ[...] ಬಾಲಕಿಯೊಬ್ಬಳ ಮೇಲೆ ಅತ್ಯಾಚಾರವೆಸಗಿ ಆಕೆಯ[...] ಗರ್ಭಿಣಿಯನ್ನಾಗಿಸಿದ್ದ ಸಹಜವಾಗೇ ಈ ಪ್ರಕರಣದ ತನಿ[...] ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನೇಮಿ[...] ಒಡನಾಡಿ ಸಂಸ್ಥೆಯ ಪರಶುರನ್ನು. ಏಕೆಂದರೆ ಪ[...] ಬಾಲನ್ಯಾಯಮಂಡಳಿಯ ಸದಸ್ಯ.

ಯಾವತ್ತು ಒಡನಾಡಿ ಮತ್ತು ಪರಶು ಹೋರಾ[...] ಫಲವಾಗಿ ವಾಲೆ ಮಹೇಶ್‌ಗೌಡನ ಮೇಲೆ ಅಪ್ರಾ[...] ಮೇಲಿನ ರೇಪ್ ಕೇಸು ದಾಖಲಾಯಿತೋ ಕೆರಳಿ ನಿಂ[...] ಡಿಸಿಪಿ ರಾಜಣ್ಣ. ಹಾಗಿದ್ದೂ ಅನಾರೋಗ್ಯದ ನೆ[...] ಒಂದೂವರೆ ತಿಂಗಳು ಕೆ.ಆರ್. ಆಸ್ಪತ್ರೆಯಲ್ಲೇ ಮ[...] ಮಹೇಶ್‌ಗೌಡ ಕೊನೆಗೂ ಜೈಲು ಪಾಲಾಗುವಂತೆ ಮಾ[...] ಒಡನಾಡಿ. ಬಹುಶಃ ಒಡನಾಡಿ ಕೈಯಿಕ್ಕದೆ ಹೋ[...] ಇಡೀ ಪ್ರಕರಣವನ್ನೇ ಡಿಸಿಪಿ ರಾಜಣ್ಣ ಗತಿ ಕಾಣಿಸಿಬಿಡು[...]

ಡಿಸಿಪಿಯಾಗಿ ತಾನಿದ್ದೂ ತನ್ನ ಚೇಲಾ ಮ[...]

ಜೂನ್ 28ರ ಆ ಕರಾಳ ರಾತ್ರಿ ಮತ್ತು ಪಿಂಪ್ ರವಿಯ ಅಟ್ಟಹಾಸ!


ವನಜಾಕ್ಷಿ ಸ್ಯಾಂಟ್ರೋರವಿ

ಮೈಸೂರೊಂದರಲ್ಲೇ 130ಕ್ಕೂ ಅಧಿಕ ಜಾತಿನಿಂದನೆ ಪ್ರಕರಣಗಳು ದಾಖಲಾಗಿದ್ದರೂ ಇಂಥ ಯಾವೊಂದರ ಬಗ್ಗೆಯೂ ತಲೆಕೆಡಿಸಿಕೊಳ್ಳದ ಪೊಲೀಸರು ಪಿಂಪ್ ಸ್ಯಾಂಟ್ರೋರವಿಯ ಪತ್ನಿಯ ದೂರಿನ ಬಗ್ಗೆ ಮಾತ್ರ ಆಕಾಶ ಭೂಮಿ ಒಂದು ಮಾಡುವಂತೆ ಕಾರ್ಯಾಚರಣೆಗಿಳಿದಿದ್ದಕ್ಕೂ ಕಾರಣವಿದೆ.

ಅಷ್ಟೇ ಏಕೆ, ಇತ್ತೀಚೆಗೆ ಎಡಿಜಿಪಿ ರವೀಂದ್ರನಾಥ್ ಓರ್ವ ಉನ್ನತ ಪೊಲೀಸ್ ಅಧಿಕಾರಿಯಾಗಿ ಕಮೀಷನರ್ ಬಿರಾದ್‌ಕರ್ ವಿರುದ್ಧವೇ ಜಾತಿನಿಂದನೆ ದೂರು ನೀಡಿದ್ದರಲ್ಲ, ಅಂಥಾ ಪೊಲೀಸ್ ವರಿಷ್ಠರೇ ನೀಡಿದ ಜಾತಿನಿಂದನೆ ದೂರನ್ನು ಕಸದಬುಟ್ಟಿಗೆಸೆದ ಪೊಲೀಸರು ಒಡನಾಡಿಯ ಪರಶು ವಿರುದ್ಧದ ದೂರಿಗೆ ಮಾತ್ರ ಯುದ್ಧೋಪಾದಿಯಲ್ಲಿ ಬೀದಿಗಿಳಿದಿದ್ದೇಕೆ?

ಈ ಪ್ರಶ್ನೆ ಒತ್ತಟ್ಟಿಗಿರಲಿ. ಪರಶು ವಿರುದ್ಧ ಖಾಕಿ ಕ್ರೌರ್ಯ ಹೇಗಿತ್ತೆಂದರೆ- ಜೂನ್ 28ರ ಶನಿವಾರ ನಡುರಾತ್ರಿ ಏಕಾಏಕಿ ಪಿರಿಯಾಪಟ್ಟಣದ ಕಾಡಿನಂತಿದ್ದ ಅವರ ತೋಟಕ್ಕೆ ನುಗ್ಗಿದ ಮೈಸೂರು ಪೊಲೀಸರು ಅವರನ್ನು ಅರೆಬೆತ್ತಲೆಯಾಗೇ ಎಳೆದೊಯ್ಯುತ್ತಾರೆ. ಒಂದು ಅಂಗಿ ಧರಿಸುವುದಕ್ಕೂ ಬಿಡದೆ ಪಕ್ಕಾ ಭಯೋತ್ಪಾದಕನಂತೆ ಎಳೆದಾಡಿದ್ದಾರೆ. ಕಾನೂನುರೀತ್ಯಾ ಯಾರೇ ಆರೋಪಿಯನ್ನು ಬಂಧಿಸಬೇಕಾದರೂ ಪೊಲೀಸ್ ಇಲಾಖೆಯ ವಾಹನಗಳಿದ್ದವಲ್ಲವೆ? ಇಲ್ಲಿ ಬಂಧಿಸಲು ಬಂದದ್ದು ಖಾಸಗಿ ಕಾರುಗಳಲ್ಲಿ, ಈ ಪೈಕಿ ಒಂದು ಪಿಂಪ್ ಸ್ಯಾಂಟ್ರೋರವಿಯ ಜೈಲೋ ಕಾರು!


ಖಾಸಗಿ ಗಾಡಿಗಳಲ್ಲಿ ಖಾಕಿ ಯೂನಿಫಾರ್ಮ್ ಕೂಡ ಧರಿಸದೆ ಬಂದವರು ಪೊಲೀಸರೋ, ಪಿಂಪ್‌ಗಳೋ, ಕಾಮುಕರೋ, ರೌಡಿಗಳೋ ಎಂದು ಭೀತಿಗೆ ಬಿದ್ದ ಪರಶು 'ಎಲ್ಲಿ ಇನ್ಸ್‌ಪೆಕ್ಟರ್ ಎಲ್ಲಿದ್ದಾರೆ...' ಎಂದು ಕಂಗಾಲಾಗಿ ಕೇಳಿದ್ದಕ್ಕೆ ಅನತಿ ದೂರದಲ್ಲಿ ನಿಂತಿದ್ದ ಪಿಂಪ್ ರವಿಯ ಕಾರನ್ನು ತೋರಿಸಿ ನೋಡಿ ಗಾಡಿಯಲ್ಲಿದ್ದಾರೆ ಹೋಗಿ ಮಾತಾಡಿಸಿ ಎನ್ನುತ್ತಾರೆ. ಪರಶು ಹೋಗಿ ಇನ್ನೇನು ಕಾರಲ್ಲಿ ಬಗ್ಗಿ ನೋಡಬೇಕು ಅದರೊಳಗಿದ್ದದ್ದು ಪಿಂಪ್ ಸ್ಯಾಂಟ್ರೋರವಿ. ಅಲ್ರೀ ನನ್ನನ್ನ ಈ ಪಿಂಪ್ ಕೈಗೆ ಒಪ್ಪಿಸೋದಕ್ಕೆ ಪೊಲೀಸರೇ ಬೇಕಿತ್ತಾ..? ಎಂದು ಕೊಸರಾಡಿದ ಪರಶುರನ್ನು ಹಿಂದಿನಿಂದ ಅನಾಮತ್ತಾಗಿ ಕುರಿ ಮೇಕೆ ಎತ್ತಿ ತುರುಕಿಕೊಂಡಂತೆ ಪೊಲೀಸರೆತ್ತಿ ಸ್ಯಾಂಟ್ರೋರವಿ ಕಾರಿಗೆತ್ತಿ ತುರುಕಿ ಬಿಟ್ಟರು. ಗಾಡಿಯಲ್ಲಿ ಥೇಟು ವಿಲ್ಲನ್ ಗತ್ತಿನಲ್ಲಿ ಕೂತಿದ್ದ ಪಿಂಪ್ ರವಿ ಪರಶುರನ್ನು ತನ್ನ ಗಾಡಿಗೆ ತುರುಕಿಕೊಂಡಿದ್ದೇ ವಾಚಾಮಗೋಚರ ಬಯ್ಯುತ್ತ ಗುದ್ದಲಾರಂಭಿಸಿದ್ದ.

ಇದು ಮೈಸೂರು ಡಿಸಿಪಿ ರಾಜಣ್ಣನ ಖಾಕಿ ನಿಷ್ಠೆಯ ಒಂದು ಸ್ಯಾಂಪಲ್ಲಷ್ಟೆ. ಪೊಲೀಸರೇ ಹಿಡಿದು ಪರಶುರನ್ನು ಪಿಂಪ್ ರವಿಗೆ ಒಪ್ಪಿಸುತ್ತಾರೆಂದರೆ ಖಾಕಿ ನಿಯತ್ತು ಯಾವ ಮಟ್ಟಕ್ಕೆ ಬಂದು ನಿಂತಿತ್ತು?

ಹೀಗೆ ಮೈಸೂರಿನ ಇಡೀ ಪೊಲೀಸ್ ವ್ಯವಸ್ಥೆಯನ್ನೇ ತನ್ನ ಮೂಗಿನ ನೇರಕ್ಕೆ ಕುಣಿಸಬಲ್ಲ ಟ್ರಾಫಿಕಿಂಗ್ ಮಾಫಿಯಾ ದೊರೆ ಸ್ಯಾಂಟ್ರೋರವಿ ಯಾರೋ ಯಃಕಶ್ಚಿತ್ ಪಿಂಪ್ ಎಂದು ಯಾರಾದರೂ ಭಾವಿಸಿಕೊಂಡರೆ ಅದು ಮೂರ್ಖತನವಷ್ಟೆ. ಇವತ್ತಿನ ಮಟ್ಟಿಗೆ ಏನಿಲ್ಲವೆಂದರೂ ಆತ 35 ಕೋಟಿಯ ಆಸ್ತಿವಂತ. ಕೇವಲ ವೇಶ್ಯಾವಾಟಿಕೆಯಲ್ಲೇ ಕೋಟ್ಯಾಧಿಪತಿಯಾದ ಸ್ಯಾಂಟ್ರೋರವಿ ಇನ್ನು ತನ್ನ ದಂಧೆಗೆ ನೆರವಾಗುವ ಪೊಲೀಸರನ್ನು ಯಾವ ಮಟ್ಟಕ್ಕೆ ಪೋಷಿಸಬಲ್ಲ ಎಂಬ ಲೆಕ್ಕಾಚಾರ ರಾಜಣ್ಣನಂಥ ಪಳಗಿದ ಖಾಕಿಗಳಿಗಷ್ಟೇ ಸಾಧ್ಯ. ಇವತ್ತು ವನಜಾಕ್ಷಿ ಎಂಬ ಹೆಸರಿನಲ್ಲಿ ಒಡನಾಡಿಯ ವಿರುದ್ಧ ದೂರುಕೊಟ್ಟ ಪಿಂಪ್ ರವಿಯ ಪತ್ನಿ ಇಲ್ಲಿಗೆ ಐದು ವರ್ಷದ ಹಿಂದೆ ತನ್ನ ಗಂಡನೇ ತನ್ನನ್ನು ವೇಶ್ಯಾವಾಟಿಕೆಗೆ ಮಾರುತ್ತಾನೆಂದು ಚಂದ್ರಿಕಾ ಎಂಬ ಹೆಸರಲ್ಲಿ ದೂರು ಕೊಟ್ಟಿದ್ದಳು. ನಿನ್ನೆ ಮೊನ್ನೆಯ ತನಕ ಸರ್ಕಾರಿ ದಾಖಲೆಗಳಲ್ಲಿ ಚಂದ್ರಿಕಾ ಎಂಬ ಹೆಸರಲ್ಲಿ ಚಾಲ್ತಿಯಲ್ಲಿದ್ದಾಕೆ ರಾತ್ರೋರಾತ್ರಿ ವನಜಾಕ್ಷಿಯಾಗಿದ್ದು ಹೇಗೆ?

ಇದು ಗೊತ್ತಿದ್ದೂ ಆಕೆ ನಕಲಿ ಹೆಸರಲ್ಲಿ ಕೊಟ್ಟ ದೂರನ್ನು ಪೊಲೀಸರು ಪ್ರಸಾದದಂತೆ ಕಣ್ಣಿಗೊತ್ತಿಕೊಳ್ಳುತ್ತಾರೆಂದರೆ ಮೈಸೂರಿನಲ್ಲಿ ಮಹಿಳೆಯರ ಮಾನಕ್ಕೆ ಏನು ಬೆಲೆ ಬಂತು?


ಡಿಸಿಪಿ ರಾಜಣ್ಣನ ಛೇಂಬರಿನಲ್ಲಿ ರೌಡಿ ವಾಲೇ ಮಹೇಶನ ಬರ್ತ್‌ಡೆ


ನಕಲಿ ಪೊಲೀಸ್ ವೇಷದಲ್ಲಿ ವಾಲೆ ಮಹೇಶ್


ಬಿ.ಇ.ಓ. ಪುಟ್ಟಸ್ವಾಮಿಗೌಡ

...ಪ್ಪಿ ಅಪ್ರಾಪ್ತೆಯ ಅತ್ಯಾಚಾರ ಪ್ರಕರಣಕ್ಕೆ ಸಿಲುಕಿಸಿದ ...ಡಿ ವಿರುದ್ಧ ರಾಜಣ್ಣ ಒಳಗೊಳಗೇ ...ತೊಡಗಿದ. ಇದೇ ಹೊತ್ತಿಗೆ ಕೆ.ಆರ್. ಪೇಟೆಯ ಅರ್ಥಾತ್ ಕ್ಷೇತ್ರ ಶಿಕ್ಷಣಾಧಿಕಾರಿ ...ಮಿಗೌಡನೂ ಅಪ್ರಾಪ್ತ ಬಾಲಕಿಯೊಬ್ಬಳ ಮೇಲೆ ...ರವೆಸಗಿಬಿಟ್ಟ. ಈ ಪುಟ್ಟಸ್ವಾಮಿಗೌಡ ಕೆ.ಆರ್. ... ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್‌ನ ಪರಮಾಪ್ತ ...ಕಾಮುಕ ಸುಖತ್ತು ಹೆಣ್ಣು ಬಾಕ. ಇಂಥಾ ಕಾಮುಕನ ...ಸಿಲುಕಿದ ತಾಲ್ಲೂಕಿನ ಶಿಕ್ಷಕಿಯರ ಕಣ್ಣೀರಿನ ... ಭಯಾನಕ. ಕಾಂಗ್ರೆಸ್ ಅಲೆಯಿದ್ದೂ ಕೆ.ಆರ್. ...ಲ್ಲಿ ಜೆಡಿಎಸ್ ವಿರುದ್ಧ ಚಂದ್ರಶೇಖರ್ ಮಣ್ಣು ...ನೆಂದರೆ ಅದಕ್ಕೆ ಬಿಇಓ ಪುಟ್ಟಸ್ವಾಮಿಗೌಡನ ವಿಕೃತಿ ...ಶಿಕ್ಷಕಿಯರ ಶಾಪವೇ ಕಾರಣವಾಗಿತ್ತು.

...ನು ಆ ಕಾಲದಿಂದಲೂ ಪಶುವಾಂಛೆಗೆ ಬಳಸಿಕೊಳ್ಳು...


ಪೊಲೀಸ್‌ಠಾಣೆ ಮುಂದೆ ... ಗಾಯಗೊಂಡು ಅರೆಬೆತ್ತಲಾದ ಪರಶು

...ಮಹಿಳೆಯ ಆಕರ್ಷಣೆ ಇನ್ನೇನು ಹಳೆಯದಾಯಿತು ...ಕೊಂಡ ಪುಟ್ಟಸ್ವಾಮಿಗೌಡ ತನ್ನ ಮಗಳ ವಯಸ್ಸಿನ ... ಅಪ್ರಾಪ್ತ ಮಗಳ ಮೇಲೆ ಕಣ್ಣು ಹಾಕಿದ್ದ. ಒಬ್ಬ ...ಶಿಕ್ಷಣಾಧಿಕಾರಿಯಾಗಿ ಆದರ್ಶ ಹಾಳಾಗಲಿ ಕನಿಷ್ಠ ...ವೀಯತೆಯನ್ನೇ ಮರೆತ. ಪುಟ್ಟಸ್ವಾಮಿಗೌಡ ಏನೂ ...ದ ಆ ಬಾಲಕಿಯನ್ನೂ ಮುಕ್ಕಿಬಿಟ್ಟ. ಹಿಂಸೆ ...ಾರದೆ ಆ ಬಾಲಕಿ ಬಾಲ ನ್ಯಾಯಮಂಡಳಿಯ ...ಗೇ ಬಂದು ತನ್ನ ಮೇಲಾದ ಅತ್ಯಾಚಾರವನ್ನು ...ದ್ದಳು. ಸಹಜವಾಗೇ ಈ ಪ್ರಕರಣದ ತನಿಖೆ ಕೂಡ ...ಡಿಯ ಪರಶು ಹೆಗಲಿಗೆ ಬಿದ್ದಿದ್ದರಿಂದ ಬಲಾಢ್ಯ ... ಪುಟ್ಟಸ್ವಾಮಿಗೌಡ ಜೈಲು ಪಾಲಾಗಬೇಕಾಯಿತು.

...ಂದೆಡೆ ವಾಲಿ ಮಹೇಶ್‌ಗೌಡ ಮತ್ತೊಂದೆಡೆ ಬಿಇಓ ...ಸ್ವಾಮಿಗೌಡ ಇಬ್ಬರೂ ಅಪ್ರಾಪ್ತ ಬಾಲಕಿಯರ ಮೇಲೆ ...ಾರವೆಸಗಿ ಜೈಲು ಪಾಲಾಗುತ್ತಿದ್ದಂತೆ ಡಿಸಿಪಿ ರಾಜಣ್ಣನ ...ಕೆಂಪಾಯಿತು. ಇದೆಲ್ಲಕ್ಕೂ ಮಿಗಿಲಾಗಿ ಸಂಭವಿಸಿದ್ದು ...ೂರಿನ ಕುಖ್ಯಾತ ತಲೆಹಿಡುಕ ಸ್ಯಾಂಟ್ರೋ ರವಿಯ ...ದ. ಒಂದಾನೊಂದು ಕಾಲಕ್ಕೆ ಮೈಸೂರಿನ ಅಷ್ಟು ...ಲ್ಲೂ ಬಜಾರಾಮಿ ಮನೆಗಳನ್ನು ಹಿಡಿದು ತನ್ನ ...ಸದ ದಂಧೆಯಿಂದಲೇ ಪೊಲೀಸರ ಹೊಟ್ಟೆ ...ಸುತ್ತಿದ್ದವನು ನಟೋರಿಯಸ್ ಪಿಂಪ್ ಸ್ಯಾಂಟ್ರೋ ...ದೇ ಹೊತ್ತಿಗೆ ಹುಟ್ಟಿಕೊಂಡ ಒಡನಾಡಿ ಮೈಸೂರಿನ ...ಕ ವೇಶ್ಯಾವಾಟಿಕೆಗಳ ವಿರುದ್ಧ ಕಾರ್ಯಾಚರಣೆಗಿಳಿದಿತ್ತು. ...ವೇಶ್ಯಾವಾಟಿಕೆಗೆ ಹೆಸರುವಾಸಿಯಾಗಿದ್ದ ಮೈಸೂರಿನ

ಬಹುತೇಕ ಮೈಕಸುಬು ಕೇಂದ್ರಗಳು ಬರಖಾಸ್ತುಗೊಂಡಂತೆಯೇ ಚಾಣಾಕ್ಷ ಸ್ಯಾಂಟ್ರೋ ರವಿ ತನ್ನ ದಂಧೆಯನ್ನು ಮತ್ತಷ್ಟು ನಿಗೂಢಗೊಳಿಸಿದ್ದ. ಮೊಬೈಲ್ ಟ್ರಾಫಿಕಿಂಗ್ ಕೂಡ ಶುರು ಹಚ್ಚಿಕೊಂಡ. ಆದರೆ ಒಡನಾಡಿಯ ಮಾನವೀಯತೆಯ ಕೈಯೇ ಮೇಲಾಯಿತು. ಅಪ್ರಾಪ್ತ ಬಾಲಕಿಯರನ್ನು ದೂರದ ಮುಂಬಯಿಗೂ ಮಾರುತ್ತಿದ್ದ ಸ್ಯಾಂಟ್ರೋ ರವಿಯನ್ನು ಹಿಡಿದು ಜೈಲಿಗಟ್ಟಲಾಯಿತು. ಹಾಗಿದ್ದೂ ಜಾಮೀನು ಗಿಟ್ಟಿಸಿ ಹೊರಬಿದ್ದ ರವಿ ತನ್ನ ದಂಧೆಯ ರಕ್ಷಣೆಗೆಂದೇ ಒಂದು ಹಿಂದು ಟೀವಿ ವರದಿಗಾರರನ್ನು ಜೊತೆ ಹಾಕಿಕೊಂಡ. ಜೊತೆಗೆ ಪೊಲೀಸರನ್ನು ಒಡನಾಡಿ ವಿರುದ್ಧವೂ ಛೂಬಿಟ್ಟ. ಇಷ್ಟೆಲ್ಲ ಗೂಂಡಾಗಿರಿ, ಪೊಲೀಸ್ ದೌರ್ಜನ್ಯ ಮತ್ತು ಮೀಡಿಯಾಗಳ ಕಿರುಕುಳದ ನಡುವೆಯೂ ಸ್ಯಾಂಟ್ರೋ ರವಿಯನ್ನು ಒಡನಾಡಿ ಒಂದಲ್ಲ ಮೂರು ಪ್ರಕರಣದಲ್ಲಿ ರೆಡ್‌ಹ್ಯಾಂಡ್ ಹಿಡಿದು ಹಾಕಿತ್ತು.

ಈ ಮೂರೂ ಪ್ರಕರಣಗಳು, ಅಪ್ರಾಪ್ತ ಬಾಲಕಿಯರನ್ನು ವೇಶ್ಯಾವಾಟಿಕೆಗೆ ಮಾರಿದ ಅಪರಾಧಗಳೇ. ಇನ್ನೇನು ಮತ್ತೆ ತಾನು ಜೈಲು ಪಾಲಾಗುತ್ತೇನೆಂದು ಗ್ಯಾರಂಟಿಯಾಗಿದ್ದೇ ಸ್ಯಾಂಟ್ರೋರವಿ ಮೈಸೂರು ಬಿಟ್ಟೇ ಪರಾರಿಯಾದ. ಹಾಗೆ ಪರಾರಿಯಾದವನು ಬೆಂಗಳೂರು, ಮುಂಬಯಿಗೂ ತನ್ನ ದಂಧೆ ವಿಸ್ತರಿಸಿ ಇನ್ನೂ ದೊಡ್ಡ ಮಟ್ಟದಲ್ಲಿ ಹೈಟೆಕ್ಕಾಗಿ ಶುರು ಹಚ್ಚಿಕೊಂಡ. ದೂರದ ರಷ್ಯಾ, ಆಫ್ರಿಕಾ, ಥೈಲ್ಯಾಂಡ್‌ಗಳಿಂದಲೂ ಗಿರಾಕಿಗಳಿಗೆ ಬೆಲೆವೆಣ್ಣುಗಳನ್ನು ಕರೆಸುತ್ತಿದ್ದ.

ಹೀಗೆ ಸತತ ಏಳು ವರ್ಷಗಳಿಂದ ಭೂಗತನಾಗಿ ಪೊಲೀಸರಿಗೂ ಸಿಗದೆ ಒಡನಾಡಿಯ ಕಾರ್ಯಕರ್ತರಿಗೂ ಪತ್ತೆಯಾಗದೆ ವ್ಯವಸ್ಥಿತವಾಗಿ ತನ್ನ ಚರ್ಮೋದ್ದಿಮೆಯನ್ನು ಸಾಗಿಸುತ್ತಿದ್ದ ಸ್ಯಾಂಟ್ರೋರವಿ ಅಷ್ಟೇ ನಿಗೂಢವಾಗಿ ಮತ್ತೆ ಮೈಸೂರಿಗೆ ಕಾಲಿಟ್ಟದ್ದು ರಾಜಣ್ಣ ಡಿಸಿಪಿಯಾಗಿ ಮೈಸೂರಿಗೆ ಬಂದನಂತರವೆ. ಕೋರ್ಟು ಆತನನ್ನು ಘೋಷಿತ ಅಪರಾಧಿಯೆಂದೇ ಘೋಷಿಸಿತ್ತು. ಆತ ಮತ್ತೆ ಮೈಸೂರಿನಲ್ಲಿ ತಲೆ ಎತ್ತಿದ ವಾಸನೆ ಹಿಡಿಯುವುದು ಒಡನಾಡಿಗೇನೂ ಕಷ್ಟವಾಗಲಿಲ್ಲ. ಅದರ ಪ್ರತಿಫಲವೆಂಬಂತೆ ಇಲ್ಲಿಗೆ ಆರು ತಿಂಗಳ ಹಿಂದೆ ಮೈಸೂರಿನ ರಿಂಗ್‌ರಸ್ತೆ ವಿಜಯನಗರದ ಐಶ್ವರ್ಯ ಪೆಟ್ರೋಲ್ ಬಂಕ್‌ನಲ್ಲಿ ತನ್ನ ಕಾರಿಗೆ ಪೆಟ್ರೋಲ್ ಹಾಕಿಸುತ್ತಿದ್ದಾಗಲೇ ಕುವೆಂಪುನಗರದ ಇನ್ಸ್‌ಪೆಕ್ಟರ್ ಯಶವಂತ್‌ಕುಮಾರ್ ಮತ್ತು ಮುಖ್ಯಪೇದೆ ಲಕ್ಷ್ಮೀನಾರಾಯಣರ ಕೈಗೆ ರವಿ ಸಿಕ್ಕು ಬಿದ್ದ.

ಹಾಗೆ ಜೈಲುಪಾಲಾದ ಸ್ಯಾಂಟ್ರೋರವಿಗೆ ಆರು ತಿಂಗಳಾದರೂ ಕೋರ್ಟು ಜಾಮೀನು ನೀಡಲಿಲ್ಲ. ಇಲ್ಲಿಗೆ ಮೂರು ತಿಂಗಳ ಹಿಂದೆ ಹೇಗೋ ಜಾಮೀನು ಗಿಟ್ಟಿಸಿ ಜೈಲಿಂದ ಹೊರಬಿದ್ದ ಸ್ಯಾಂಟ್ರೋರವಿಯ ಮುಂದಿದ್ದ ಏಕೈಕ ಗುರಿಯೆಂದರೆ ತನ್ನ ದಂಧೆಗೆ ಮುಳ್ಳಾದ ಒಡನಾಡಿಯ ಸ್ಟ್ಯಾನ್ಲಿ ಮತ್ತು ಪರಶುರನ್ನು ಮುಗಿಸುವುದು. ಅದಕ್ಕೆ ಡಿಸಿಪಿಯಾಗಿ ಬಂದಿದ್ದ ರಾಜಣ್ಣನ ಬೆಂಬಲದ ಜೊತೆಗೆ ಜೈಲಲ್ಲಿದ್ದ ಕೆ.ಆರ್. ಪೇಟೆಯ ಬಿಇಓ ಪುಟ್ಟಸ್ವಾಮಿಗೌಡ ಮತ್ತು ವಾಲಿ ಮಹೇಶ್ ಗೌಡರನ್ನೂ ಜೊತೆ ಹಾಕಿಕೊಂಡ. ಈಗಾಗಲೇ ಮೈಸೂರಿನ ಬಹುತೇಕ ವೇಶ್ಯಾವಾಟಿಕೆಗಳನ್ನೆಲ್ಲ ಮುಚ್ಚಿಸಿ ಮಾಂಸದ ದಂಧೆಯನ್ನೇ ತಲೆ ಎತ್ತದಂತೆ ಮಾಡಿ ತಮ್ಮ ಆದಾಯ ಮೂಲಕ್ಕೇ ಕುತ್ತು ತಂದಿದ್ದ ಒಡನಾಡಿಯ ಬಗ್ಗೆ ಪೊಲೀಸರಿಗೂ ಅಸಾಧ್ಯ ಸಿಟ್ಟಿತ್ತು.

ಜೂನ್ 26ಕ್ಕೆ ಮೈಸೂರು ಕೋರ್ಟಿಗೆ ಬಿಇಓ ಪುಟ್ಟಸ್ವಾಮಿಗೌಡ ತನ್ನ ರೇಪ್ ಕೇಸಿನ ವಿಚಾರಣೆಗೆಂದು ಬಂದಾಗ ಸಾಕ್ಷಿಯಾಗಿ ಅಲ್ಲಿಗೆ ಪರಶು ಬಂದೇ ಬರುತ್ತಾರೆಂಬುದು ಸ್ಯಾಂಟ್ರೋರವಿಗೆ ಗೊತ್ತಿತ್ತು. ಹಾಗೆ ಸಾಕ್ಷಿ ಹೇಳಲು ಬಂದ ಪರಶುರನ್ನು ಪಿಂಪ್ ರವಿ ಅಟಕಾಯಿಸಿಕೊಂಡ. ಪುಟ್ಟಸ್ವಾಮಿಗೌಡನ ವಿರುದ್ಧ ನೀನೇನಾದ್ರೂ ಸಾಕ್ಷಿ ಹೇಳಿದೆ ಅಂದರೆ ಕತ್ತರಿಸಿ ಹಾಕ್ತೀನಿ ಎಂದು ಕೋರ್ಟ್ ಆವರಣದಲ್ಲೇ ಹೂಂಕರಿಸಿದ ರವಿ ಜೊತೆ ಆತನ ಪತ್ನಿ ವನಜಾಕ್ಷಿಯೂ ಕೈಜೋಡಿಸಿದ್ದಾಳೆ. ಈ ಬಗ್ಗೆ ಕಂಗಾಲಾದ ಪರಶು ತಕ್ಷಣವೇ ನ್ಯಾಯಾಧೀಶನ ಗಮನಕ್ಕೆ ತಂದಿದ್ದಾರೆ. ನ್ಯಾಯಾಧೀಶರ ಸಲಹೆಯ ಮೇರೆಗೇ ಲಕ್ಷ್ಮೀಪುರ ಪೊಲೀಸ್ ಠಾಣೆಗೂ ಹೋಗಿ ದೂರು ಕೊಟ್ಟಿದ್ದಾರೆ.

ವಿಪರ್ಯಾಸವೆಂದರೆ ಪರಶು ಕೊಟ್ಟ ದೂರಿಗೆ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕಿದ್ದ ಲಕ್ಷ್ಮೀಪುರಂ ಪೊಲೀಸರು ಅದನ್ನು ಎಡಗೈಯಲ್ಲೂ ಮುಟ್ಟದೆ ಕಾಟಾಚಾರದ ಎನ್‌ಸಿಆರ್ ಮಾಡಿ ಕೈತೊಳೆದುಕೊಳ್ಳುತ್ತಾರೆ. ಆದರೆ ಪರಶು ಕೊಟ್ಟ ದೂರಿನ ವಿಚಾರಣೆಗೆಂದು ಸ್ಯಾಂಟ್ರೋರವಿ ಮತ್ತು ಆತ ಪತ್ನಿಯನ್ನು ಠಾಣೆಗೆ ಕರೆಸಿಕೊಂಡು ಪರಶು ತನ್ನ ಜಾತಿನಿಂದನೆ ಮಾಡಿದ್ದಾರೆಂದು ವನಜಾಕ್ಷಿಯಿಂದ ಕಲ್ಪಿತ ದೂರು ದಾಖಲಿಸಿಕೊಳ್ಳುತ್ತಾರೆ. ಆ ಕಾಲದಿಂದಲೂ ದಲಿತ ಚಳವಳಿಯಲ್ಲಿ ಸಕ್ರಿಯವಾಗಿದ್ದ ದಲಿತ ವರ್ಗದ ನೂರಾರು ಹೆಣ್ಣು ಮಕ್ಕಳಿಗೆ ಬದುಕು ಕಟ್ಟಿಕೊಟ್ಟ ಸ್ಟ್ಯಾನ್ಲಿಯಾಗಲಿ ಪರಶು ಆಗಲಿ ಹೇಗೆ ತಾನೆ ಜಾತಿನಿಂದನೆ ಮಾಡಲು ಸಾಧ್ಯ? ಅಷ್ಟಕ್ಕೂ ಸ್ಯಾಂಟ್ರೋರವಿಯ ಪತ್ನಿ ಯಾವ ಜಾತಿಯೆಂಬುದೇ ಗೊತ್ತಿಲ್ಲದೆ ಹೇಗೆ ಜಾತಿ ಎತ್ತಿ ಯಾರು?

ಸಣ್ಣದೊಂದು ವಿಚಾರಣೆ ಕೂಡ ಮಾಡದೆ ಪರಶು ವಿರುದ್ಧ ವನಜಾಕ್ಷಿಯ ದೂರಿನ ಮೇಲೆ ಆತುರಾತುರವಾಗಿ ಎಫ್‌ಐಆರ್ ದಾಖಲಿಸಿದ ಲಕ್ಷ್ಮೀಪುರಂ ಪೊಲೀಸರು ಈ ಬಗ್ಗೆ ಪರಶುಗೆ ನಿಯಮದಂತೆ ನೋಟಿಸ್ ಕೂಡ ನೀಡದೆ, ಒಂದಲ್ಲ ಎರಡು ಬಾರಿ ಠಾಣೆಗೆ ಬಂದಾಗಲೂ ಅದನ್ನು ಪರಶು ಗಮನಕ್ಕೆ ತಾರದೆ ಮುಚ್ಚಿಟ್ಟಿದ್ದಾರೆ. ಇದರರ್ಥ ಸಮಯ ಕಾದು ಬಲಿ ಹಾಕುವುದು. ತಮಾಷೆಯೆಂದರೆ ಪರಶು ಬಂಧನಕ್ಕೆಂದೆ ಕೆ.ಆರ್. ವಿಭಾಗದ ಎಸಿಪಿ ಶಿಲ್ಪಾ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗುತ್ತದೆ. ಎಫ್‌ಐಆರ್ ದಾಖಲಾದ ನಂತರವೂ ಎರಡು ಬಾರಿ ತಾವು ನೀಡಿದ ದೂರಿನ ವಿಚಾರಣೆಗೆಂದು ಎಸಿಪಿ ಶಿಲ್ಪಾರನ್ನು ಪರಶು ಭೇಟಿಯಾದಾಗಲೂ ಈ ಬಗ್ಗೆ ಶಿಲ್ಪಾ ಚಕಾರವೆತ್ತಿಲ್ಲ.

ಇದರರ್ಥ ಶನಿವಾರ ಮತ್ತು ಭಾನುವಾರದ ತನಕ ಕಾದಿದ್ದು ಕೋರ್ಟ್ ರಜೆಯಿದ್ದಾಗಲೆ ಪರಶುರನ್ನು ಹಿಡಿದು ಜೈಲು ಪಾಲಾಗುವಂತೆ ಮಾಡುವ ಪೊಲೀಸ್ ಕುತಂತ್ರ!

ಪರಶುರನ್ನು ರಾತ್ರೋರಾತ್ರಿ ಹಿಡಿದು ಪೊಲೀಸರೇ ಸ್ಯಾಂಟ್ರೋರವಿಯ ಕಾರಿಗೆ ದಬ್ಬುತ್ತಾರೆಂದರೆ ಮೈಸೂರಿನಲ್ಲಿ ರೇಪಿಸ್ಟ್‌ರಿಗೂ ತಲೆಹಿಡುಕರಿಗೂ ಮತ್ತು ಪೊಲೀಸರಿಗೂ ಏನು ವ್ಯತ್ಯಾಸ ಬಂತು? ಮುಖ್ಯಮಂತ್ರಿಯ ತವರೂರಲ್ಲೇ ಅವರದ್ದೇ ನಂಬಿಕಸ್ತ ಪೊಲೀಸರು ಈ ಮಟ್ಟಕ್ಕಿಳಿಯುತ್ತಾರೆಂದರೆ ಏನರ್ಥ? ಮೈಸೂರಿನ ಪ್ರಜ್ಞಾವಂತರೆಲ್ಲರೂ ಒಡನಾಡಿಯ ಸಂತರ ಪರ ದನಿ ಎತ್ತಲೇಬೇಕಿದೆ.

ರಾ. ಸೋಮನಾಥ್









ರೇಪ್ ಪಾಲಿಟಿಕ್ಸ್







ಇಲ್ಲಿಗೆ ವಾರದ ಹಿಂದೆ ಬಸವೇಶ್ವರನಗರ ಪೊಲೀಸ್ ಠಾಣೆಗೊಂದು ದೂರು ಬಂತು. ಕೂಲಿಯೊಬ್ಬ ಯುವಕನನ್ನು ಎಳೆದು ತಂದು ಪೊಲೀಸರಿಗೊಪ್ಪಿಸಿ ಈತನೇ ತನ್ನ 16ರ ಪುತ್ರಿಯನ್ನು ಕಿಡ್ನಾಪ್ ಮಾಡಿದ್ದಾನೆಂದೂ ತನ್ನ ಮಗಳ ಜೊತೆ ಆತ ರಸ್ತೆಯಲ್ಲಿ ಓಡಾಡಿಕೊಂಡಿದ್ದಾಗಲೇ ಹಿಡಿದು ತಂದಿದ್ದೇನೆಂದೂ ಈತನನ್ನು ಜೈಲಿಗೆ ಹಾಕಿ ನ್ಯಾಯ ಕೊಡಿ ಎಂದು ಎದೆ ಬಡಿದುಕೊಳ್ಳುತ್ತಿದ್ದ. ಹಾಗೆ ಹುಡುಗಿ ಸಮೇತ ಪರಾರಿಯಾದ ಆ ಹುಡುಗ ಇಸ್ಪೀಟ್ ಕ್ಲಬ್ ಒಂದರ ಕೆಲಸಗಾರ. ಹುಡುಗನ ಪರ ಕ್ಲಬ್ ಮಾಲೀಕನೇ ಠಾಣೆಗೆ ದುಂಡು ದಾಳಿ ಕಟ್ಟಿಕೊಂಡು ಬಂದು ವ್ಯವಹಾರ ಕುದುರಿಸಿದ್ದರಿಂದ ಪೊಲೀಸರು ಹುಡುಗಿಯ ತಂದೆ-ತಾಯಿ, ಬಂಧುಗಳನ್ನು ಠಾಣೆಯೊಳಕ್ಕೂ ಬಿಟ್ಟುಕೊಳ್ಳದೆ ಹೊರಗಟ್ಟಿಬಿಟ್ಟರು!

ಮಗಳ ಪಜೀತಿ, ಕರೆದೊಯ್ದ ಹುಡುಗನೆದುರೇ ಆದ ಅವಮಾನ, ಆತನಿಗೆ ಸಿಕ್ಕ ರಾಜಮರ್ಯಾದೆ ಮತ್ತು ತನ್ನನ್ನು ನಿಕೃಷ್ಟನಂತೆ ಠಾಣೆಯಿಂದ ಹೊರಗಟ್ಟಿದ ದುಃಖಕ್ಕೆ ಬಿದ್ದ ಆ ತಂದೆ ಯಾರೋ ಪುಢಾರಿಗೆ ತನಗಾದ ದುರ್ಗತಿ ಹೇಳಿಕೊಂಡು ಕಣ್ಣೀರಿಟ್ಟ. ಆ ಪುಢಾರಿ ತಡಮಾಡದೆ ಸಿಕ್ಕ ಸಿಕ್ಕ ಟೀವಿಗಳಿಗೆ ಫೋನಾಯಿಸಿಬಿಟ್ಟ. ಅಷ್ಟಕ್ಕೇ ಠಾಣೆಗೆ ಬಂದ ಮೂರ್‍ನಾಲ್ಕು ಟೀವಿ ವರದಿಗಾರರು ಅದೇನು ಮಾತಾಡಿದರೋ, ಪೊಲೀಸರ ಯಾವ ಸಮಜಾಯಿಷಿ ಅವರನ್ನು ಉಲ್ಟಾ ತಿರುಗಿಸಿತೋ ಗೊತ್ತಿಲ್ಲ. ಅಲ್ಲಪ್ಪಾ ನಿನ್ನ ಮಗಳೇ ಸರಿ ಇಲ್ವಂತೆ, ಅವಳೇ ಮೇಲೆ ಬಿದ್ದು ಹುಡುಗನ ಜೊತೆ ಹೋಗಿದ್ದಳಂತೆ ಎಂದು ಕಣ್ಣೀರಿಡುತ್ತಿದ್ದ ತಂದೆಯನ್ನು ಟೀವಿ ವರದಿಗಾರರು 'ದಬಾಯಿಸಿಬಿಟ್ಟರು. ಕನಿಷ್ಠ ಅಪ್ರಾಪ್ತ ಬಾಲಕಿಯ ವೈದ್ಯಕೀಯ ಪರೀಕ್ಷೆ ಕೂಡ ನಡೆಸದೆ ಪೊಲೀಸರು ಇಸ್ಪೀಟು ಕ್ಲಬ್ ಮಾಲೀಕನ ಜೊತೆ ಹುಡುಗನನ್ನು ಬಿಟ್ಟು ಕಳಿಸಿದರು!

ಇದು ಫ್ರೇಜರ್‌ಟೌನ್ ಮತ್ತು ವಿಬ್‌ಗಯಾರ್ ಶಾಲೆಯ ರೇಪ್ ಪ್ರಕರಣಕ್ಕಿಂತ ಮೂರ್‍ನಾಲ್ಕು ದಿನಗಳ ಹಿಂದಷ್ಟೇ ನಡೆದದ್ದು!

ಇಲ್ಲಿಗೆ ಮೂರು ದಿನಗಳ ಹಿಂದೆ ಅಂದರೆ ರಾಜ್ಯಾದ್ಯಂತ ಅತ್ಯಾಚಾರ ಭುಗಿಲೆದ್ದಿತೆಂದು ಬಿಜೆಪಿ-ಎಬಿವಿಪಿಗಳು ಬೊಬ್ಬೆ ಹೊಡೆಯುತ್ತಿದ್ದಾಗಲೇ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲೊಂದು ರೇಪ್ ಕೇಸು ದಾಖಲಾಯಿತು. ರಸ್ತೆ ಬದಿ ಹೂ ಮಾರಿಕೊಂಡಿದ್ದ ಹುಡುಗಿಯೊಬ್ಬಳು ಕಳೆದೊಂದು ವರ್ಷದಿಂದ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದಳು. ಹಾಗೂ ಆ ಹುಡುಗನ ಜೊತೆ ದೈಹಿಕ ಸಂಬಂಧವೂ ಇತ್ತು, ಈಗ ಏಕಾಏಕಿ ಹುಡುಗ ಮದುವೆಗೆ ನಿರಾಕರಿಸಿದ್ದ. ಅಕ್ಕಪಕ್ಕದ ಪರಿಚಿತರೆಲ್ಲ ಸೇರಿ ಆ ಯುವತಿಯನ್ನು ಪೊಲೀಸ್ ಠಾಣೆಗೆ ಕರೆತಂದರು. ಇನ್ನೇನು ಇನ್ಸ್‌ಪೆಕ್ಟರ್ ಹುಡುಗನನ್ನು ರಿಪೇರಿ ಮಾಡಿ ಮದುವೆಗೆ ಒಪ್ಪಿಸಬೇಕೆನ್ನುವಷ್ಟರಲ್ಲಿ ಆತುರಗೇಡಿ ನ್ಯೂಸ್ ಚಾನಲ್ಲೊಂದು ವೈಯಾಲಿಕಾವಲ್ ಪೊಲೀಸರು ಅಪ್ರಾಪ್ತೆ ಮೇಲಿನ ಅತ್ಯಾಚಾರ ಪ್ರಕರಣವನ್ನೇ ಮುಚ್ಚಿ ಹಾಕುತ್ತಿದ್ದಾರೆಂಬ ಸುದ್ದಿ ಬಿತ್ತರಿಸಿತು.

ಮೀಡಿಯಾ ಮಸಾಲೆ

ಇನ್ನೇನು ಹುಡುಗ ಕೂಡ ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟು ಮದುವೆಗೆ ಒಪ್ಪಿದ್ದ. ಆದರೆ ನ್ಯೂಸ್ ಚಾನಲ್ ಬಿತ್ತರಿಸಿದ ಸುದ್ದಿಯಿಂದಾಗಿ ತಾನೆಲ್ಲಿ ಸಸ್ಪೆಂಡಾಗುತ್ತೇನೋ ಎಂದು ಭೀತಿಗೆ ಬಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಯುವತಿಯ ವಯಸ್ಸು 18ಕ್ಕೂ ಕಮ್ಮಿಯಿದ್ದರಿಂದ ಅಪ್ರಾಪ್ತೆ ಮೇಲಿನ ಅತ್ಯಾಚಾರ ಪ್ರಕರಣ ದಾಖಲಿಸಿದ್ದೇ ಹುಡುಗನನ್ನು ಜೈಲಿಗಟ್ಟಿಬಿಟ್ಟರು. ಹುಡುಗಿ ಈಗ ಐದು ತಿಂಗಳ ಗರ್ಭಿಣಿ. ಟೀವಿ ಚಾನಲ್ಲೊಂದು ಮಾಡಿದ ಅನಾಹುತಕ್ಕೀಗ ತಾಯಿ-ಮಗಳು ಪೊಲೀಸ್ ಠಾಣೆಯೆದುರು ನಿಂತು ಎದೆ ಬಡಿದುಕೊಳ್ಳುತ್ತಿದ್ದಾರೆ!

ಟೀವಿಗಳು ಮೀಡಿಯಾಗಳು ಮಾಡುವ ಅನಾಹುತಕ್ಕಿದು ಎರಡು ನಿದರ್ಶನಗಳಷ್ಟೆ. ಮೊದಲನೇ ಪ್ರಕರಣದಲ್ಲಿ ಮೀಡಿಯಾ ಏಜಂಟರೇ ಅತ್ಯಾಚಾರಿಯ ಸಮರ್ಥಕರು.

ಎರಡನೆಯದರಲ್ಲಿ ಯುವತಿಯ ಭವಿಷ್ಯಕ್ಕೆ ಬೆಂಕಿ ಬಿದ್ದರೂ ನಡೆಯದ ರೇಪನ್ನು ರೇಪನ್ನಾಗಿಸುವ ಕೌರ್ಯ!

ಅಂದರೆ ಮಿಡಿಯಾಗಳಿಗೆ ಬೇಡವಾದರೆ ಅತ್ಯಾಚಾರ ನಡೆದರೂ ಅತ್ಯಾಚಾರಿ ಕೂಡ ಕ್ಷಮಾರ್ಹ. ಮಿಡಿಯಾ ಬಯಸಿತೆಂದರೆ ನಡೆಯದ ಅತ್ಯಾಚಾರವಾದರೂ ಶಿಕ್ಷಾರ್ಹ!

1992 ರಲ್ಲಿ ಅಯೋಧ್ಯೆ ಹಿಂಸಾಕಾಂಡದ ಹಿನ್ನೆಲೆಯಲ್ಲಿ ನಡೆದ ಸೂರತ್ ರೇಪ್ ಪ್ರಕರಣ. 2002 ರಲ್ಲಿ ಗುಜರಾತ್ ಗಲಭೆಗೂ ಮುನ್ನ ಹಿಂದೂ ಹೆಣ್ಣುಮಕ್ಕಳ ಮೇಲೆ ನಡೆಯಿತೆನ್ನಲಾದ ಅತ್ಯಾಚಾರದ ಕತೆಗಳು ಮತ್ತು ಕಳೆದ ವರ್ಷ ಉತ್ತರ ಪ್ರದೇಶದ ಮುಜಾಫರ್‌ನಗರದ ಕೋಮು ಗಲಭೆಯ ಹಿಂದಿದ್ದ ಕಾರಣಗಳಿಗೂ ಈಗ ಏಕಾಏಕಿ ಭುಗಿಲೆದ್ದ ಕರ್ನಾಟಕದ ಅತ್ಯಾಚಾರ ಕಾಂಡಕ್ಕೂ ಸೂಕ್ಷ್ಮ ಸಂಬಂಧವಿದೆ.

ಯಾರೋ ಮುಸ್ಲಿಂ ಓರ್ವನ ಜೊತೆ ಝೋಟ್ ಹುಡುಗಿಯೊಬ್ಬಳು ಓಡಿ ಹೋದಳೆಂಬ ಒಂದೇ ಒಂದು ಕಾರಣದಿಂದ ಹುಟ್ಟಿಕೊಂಡ ಮುಜಾಫರ್‌ನಗರದ ರಕ್ತಪಾತ ಅಂತಿಮವಾಗಿ ಉತ್ತರ ಪ್ರದೇಶದಲ್ಲಿ ಕೇವಲ ಹತ್ತು ಮಂದಿಯಷ್ಟಿದ್ದ ಬಿಜೆಪಿ ಸಂಸದರ ಸಂಖ್ಯೆಯನ್ನು 70 ಕ್ಕೆ ಏರಿಸಿತು, ಕೇಂದ್ರದಲ್ಲಿ ಮೋದಿ ಸರ್ಕಾರಕ್ಕೂ ಮೂಲವಾಯಿತು. ಉತ್ತರ ಪ್ರದೇಶದಲ್ಲಿ ಕೋಮು ದ್ವೇಷದ ಬೀಜಬಿತ್ತಿ ಬಿಜೆಪಿಯನ್ನು ಅಧಿಕಾರಕ್ಕೆ ತಂದ ಮೋದಿ ಪರಮಾಪ್ತ ಅಮಿತ್ ಷಾ ಈಗ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ.

ಅಮಿತ್ ಷಾ ಸೂತ್ರ

ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಯುಪಿಯಲ್ಲಿ ಆಡಳಿತಾರೂಢ ಸಮಾಜವಾದಿ ಸರ್ಕಾರವನ್ನೇ ಮಣ್ಣುಮುಕ್ಕಿಸಿ ಬಿಜೆಪಿಗೆ ಮೇಲುಗೈ ಸಾಧಿಸಿಕೊಟ್ಟ ಅಮಿತ್ ಷಾ ಇದಕ್ಕೆಂದು ತೆಗೆದುಕೊಂಡ ಕಾಲಾವಧಿ ಕೇವಲ 6 ತಿಂಗಳು. ಯುಪಿಗೆ ಕಾಲಿಟ್ಟ ಕೇವಲ ಆರು ತಿಂಗಳಲ್ಲೇ ಮಾಯಾವತಿಯ ಅಂಬೇಡ್ಕರ್‌ವಾದ ಮತ್ತು ಮುಲಾಯಂರ ಸಮಾಜವಾದದ ದಶಕಗಟ್ಟಲೇ ಪರಿಶ್ರಮಗಳನ್ನೆಲ್ಲ ನಿರರ್ಥಕಗೊಳಿಸಿ ಹಿಂದುತ್ವದ ಬಿರುಗಾಳಿಯೆಬ್ಬಿಸಲು ಅಮಿತ್ ಷಾ ಬಳಸಿದ್ದು ಇದೇ ರೇಪ್ ರಾಜಕಾರಣವನ್ನು.

ಇದಕ್ಕೆ ಆಯುಧವಾಗಿದ್ದು ಮೀಡಿಯಾ!

ಯುಪಿಯ ಬಹುತೇಕ ಟೀವಿ ಚಾನಲ್‌ಗಳು ಮತ್ತು ಪ್ರಮುಖ ಪತ್ರಿಕೆಗಳಲ್ಲಿ ಆ ಹೊತ್ತಿಗಾಗಲೇ ಆಕ್ರಮಿಸಿಕೊಂಡಿದ್ದ ಆರೆಸ್ಸೆಸ್ ಕಾರ್ಯಕರ್ತರು ಮಾತ್ರವಲ್ಲದೆ ಟೀವಿ ಪತ್ರಿಕೆಗಳನ್ನು ಅಮಿತ್ ಷಾ ಬುಟ್ಟಿಗೆ ಹಾಕಿಕೊಂಡಿದ್ದ!

ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ 'ನಿಮಗೆ ರೇಪ್ ಬಿಟ್ಟರೆ ಬೇರೆ ಸುದ್ದಿಯೇ ಇಲ್ಲವೆ' ಎಂದು ಟೀವಿ ರಿಪೋರ್ಟರ್‌ಗಳನ್ನು ಕೆಣಕಿದ್ದು ಉದ್ಧಟತನವಾಗಿ ಕಾಣಿಸುತ್ತಿದೆ. ನಡೆಯುತ್ತಿರುವ ಸರಣಿ ಅತ್ಯಾಚಾರಗಳ ಬಗ್ಗೆ ರಾಜ್ಯದ ಮುಖ್ಯಮಂತ್ರಿಯನ್ನಲ್ಲದೆ ಇನ್ನಾರನ್ನು ಕೇಳಬೇಕೆಂದು ಮೀಡಿಯಾಗಳು ಕೊಂಕುತ್ತಿವೆ. ಯಾವ ಟೀವಿ ಯಾವ ಪತ್ರಿಕೆಗಳನ್ನು ತೆರೆದರೂ ಅತ್ಯಾಚಾರದ್ದೇ ಸುದ್ದಿ. ರಾಜ್ಯಾದ್ಯಂತ ಅತ್ಯಾಚಾರದ ವಿರುದ್ಧ ಬಿಜೆಪಿ, ಎಬಿವಿಪಿಗಳು ಬೀದಿಗಿಳಿದಿವೆ. ಯಾವ ಮೂಲೆಯಲ್ಲಿ ಯಾವ ಹೆಣ್ಣಿಗೆ ಏನಾದರೂ ಅದನ್ನು ದೌರ್ಜನ್ಯವೆಂದೋ, ಅತ್ಯಾಚಾರದ ಯತ್ನವೆಂದೋ ಕರೆಯಲಾಗುತ್ತದೆ. ಅನಂತ್‌ಕುಮಾರ್ ಸೇರಿದಂತೆ ಈಶ್ವರಪ್ಪ ಅಶೋಕ್, ಶೆಟ್ಟರ್ ಮುಂತಾದವರೆಲ್ಲರೂ ಹೆಣ್ಣಿನ ಕಾಯುವುದಕ್ಕೆಂದೇ ಜನ್ಮವೆತ್ತಿದ ಪುಂಗವರಂತೆ, ವಾಟಾಳ್ ಏಕಾಏಕಿ ಎಚ್ಚೆತ್ತವರಂತೆ ಕರ್ನಾಟಕ ಬಂದ್ ಕರೆ ಕೊಟ್ಟಿದ್ದಾರೆ. ವಿಧಾನಮಂಡಲದ ಅಧಿವೇಶನವಂತೂ ಅಕ್ಷರಶಃ ಅತ್ಯಾಚಾರಮಯ. ಮೇಲ್ಮನೆ ಮತ್ತು ವಿಧಾನಸಭೆಗಳೆರಡರಲ್ಲೂ ಕಾಂಗ್ರೆಸ್ ಸರ್ಕಾರದಿಂದಾಗಿಯೇ ರೇಪುಗಳು ಹೆಚ್ಚುತ್ತಿವೆ ಎಂಬಂತೆ ಬಿಜೆಪಿ ನಾಯಕರು ಬೊಬ್ಬೆ ಹಾಕುತ್ತಿದ್ದಾರೆ. ಇನ್ನು ಬಿಜೆಪಿ ಸಂಸದೆ ಶೋಭಾ ಕರಂದ್ಲಾಜೆ ಮಿಕ್ಕೆಲ್ಲರಿಗಿಂತಲೂ ತಾನೇ ಒಂದು ಕೈ ಮೇಲೆಂಬಂತೆ ಕರ್ನಾಟಕದಲ್ಲಿ ಮಹಿಳೆಯರಿಗೆ ರಕ್ಷಣೆಯಿಲ್ಲ ಸರ್ಕಾರವನ್ನು ವಜಾ ಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಕರಂದ್ಲಾಜೆಯ ದೂರಿನ ಮೇರೆಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗ ರಾಜ್ಯ ಸರ್ಕಾರಕ್ಕೆ ನೋಟಿಸನ್ನೂ ಜಾರಿಗೊಳಿಸಿದೆ.

ಜಾರ್ಜ್ ಕಾರಣ?

ಇಲ್ಲಿ ಪ್ರಶ್ನೆಯೆಂದರೆ; ಕಾಂಗ್ರೆಸ್ ಅಧಿಕಾರಕ್ಕೆ ಬಂದಾಕ್ಷಣವೇ ಏಕಾಏಕಿ ಅತ್ಯಾಚಾರ ಭುಗಿಲೆದ್ದಿದೆಯೆ ಅಥವಾ ಯಥಾವತ್ ನಡೆಯುತ್ತಿದ್ದ ಅತ್ಯಾಚಾರ ಪ್ರಕರಣಗಳನ್ನೇ ದೊಡ್ಡದು ಮಾಡಿ ಮಾಧ್ಯಮಗಳು ಬೊಬ್ಬೆ ಹಾಕುತ್ತಿವೆಯೆ? ಸದ್ಯ ಏನೆಲ್ಲ ಪ್ರಕರಣಗಳು ಸಂಭವಿಸಿವೆಯೋ ಅವೆಲ್ಲಕ್ಕೂ ಕಾಂಗ್ರೆಸ್ ಸರ್ಕಾರ ಮಾತ್ರವೇ ಕಾರಣವೆ? ಜಾರ್ಜ್ ಗೃಹಮಂತ್ರಿಯಾಗಿರುವ ಕಾರಣಕ್ಕೇ ಅತ್ಯಾಚಾರಗಳಾಗುತ್ತಿವೆಯೆ? ಜಾರ್ಜ್ ರಾಜೀನಾಮೆ ಕೊಟ್ಟ ಮರುಕ್ಷಣಕ್ಕೆ ಅತ್ಯಾಚಾರಗಳೆಲ್ಲ ನಿಂತು ಬಿಡುತ್ತವಾ? ಈಗ ನಡೆಯುತ್ತಿರುವ ಅತ್ಯಾಚಾರಗಳ ಸಂಖ್ಯೆಗೆ ಹೋಲಿಸಿದರೆ ಹಿಂದಿದ್ದ ಬಿಜೆಪಿ ಸರ್ಕಾರ ಅವಧಿಯಲ್ಲಿ ಹೆಣ್ಣುಮಕ್ಕಳ ಮೇಲೆ ದೌರ್ಜನ್ಯಗಳಾಗಲೇ ಇಲ್ಲವೆ? ಭಾರತದ ಬೇರೆಬೇರೆ ರಾಜ್ಯಗಳಿಗೆ ಹೋಲಿಸಿದರೆ ನಿಜಕ್ಕೂ ಕರ್ನಾಟಕ ಅತ್ಯಾಚಾರದಲ್ಲಿ ಮುಂದಿದೆಯೆ? ಬೆಂಗಳೂರು ರೇಪಿಸ್ಟರ ರಾಜಧಾನಿಯಾದರೆ ಗುಜರಾತ್‌ನ ಅಹ್ಮದಾಬಾದ್‌ನ ಅತ್ಯಾಚಾರಕಾಂಡವನ್ನು ಏಕೆ ಮೀಡಿಯಾಗಳು ಮುಚ್ಚಿಡುತ್ತಿವೆ?

ಒಂದರ ಮೇಲೊಂದರಂತೆ ತಲೆ ಎತ್ತುವ ಇಂಥ ಪ್ರಶ್ನೆಗಳೇ ಇಡೀ ಷಡ್ಯಂತ್ರವೊಂದನ್ನು ಬಗೆದಿಡುತ್ತವೆ. ಹಾಗೆ ನೋಡಿದರೆ ಬಿಜೆಪಿ ಅಧಿಕಾರದಲ್ಲಿದ್ದಾಗ ನಡೆದ ಅತ್ಯಾಚಾರಗಳ ಅನುಪಾತಕ್ಕೆ ಹೋಲಿಸಿದರೆ ಈಗ ನಡೆಯುತ್ತಿವುದು ಕಡಿಮೆ. ಬಿಜೆಪಿ ಸರ್ಕಾರವಿದ್ದಾಗಲೇ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ವಿರುದ್ಧ ನಡೆಸಿದ ಲೈಂಗಿಕ ದೌರ್ಜನ್ಯದ ವಿರುದ್ಧ ಪೊಲೀಸರು ಕಾಟಾಚಾರಕ್ಕೂ ಎಫ್‌ಐಆರ್ ದಾಖಲಿಸಲಿಲ್ಲ. ತನ್ನ ಮೇಲೆ ಆಗ ಶಾಸಕನಾಗಿದ್ದ ರೇಣುಕಾಚಾರ್ಯ ಎಸಗಿದ ವಿಕೃತಿಯ ವಿರುದ್ಧ ಜಯಲಕ್ಷ್ಮಿ ಕಂಡಕಂಡ ಪೊಲೀಸ್ ಅಧಿಕಾರಿಗಳು, ಮಂತ್ರಿಗಳು, ಆಯೋಗಗಳೆಲ್ಲಕ್ಕೂ ದೂರು ಕೊಟ್ಟರೂ, ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಗೆ ದಾಖಲಾದರೂ ಬಿಜೆಪಿ ಸರ್ಕಾರ ಆಕೆಯ ಒಂದೇ ಒಂದು ದೂರನ್ನು ದಾಖಲಿಸಲಿಲ್ಲ.

ಓರ್ವ ಮಂತ್ರಿಯಾಗಿ ಹಾಲಪ್ಪನೇ ಅತ್ಯಾಚಾರದ ಆರೋಪ ಹೊತ್ತು ಜೈಲು ಸೇರಿದ್ದು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನವರ ಧರ್ಮಪತ್ನಿ ಮೈತ್ರಾದೇವಿ ನಿಗೂಢವಾಗಿ ಸತ್ತಿದ್ದು, ಮಂತ್ರಿ ನಿರಾಣಿ ಸಿಕ್ಕಸಿ ಹೆಣ್ಣು ಮಕ್ಕಳನ್ನು ಮುಕ್ಕಿದ್ದು ಮಂತ್ರಿಗಳೇ ಕೂತು ವಿಧಾನಸೌಧದಲ್ಲಿ ಬ್ಲೂಫಿಲ್ಮ್ ನೋಡಿದ್ದು, ರಘುಪತಿ ಭಟ್ಟನ ಪತ್ನಿಯ ಹತ್ಯೆ (?) ಇತ್ಯಾದಿಗಳಿಗೆ ಹೋಲಿಸಿದರೆ ಸದ್ಯದ ಸರ್ಕಾರದಲ್ಲಿ ಮಂತ್ರಿಗಳಾಗಲಿ, ಎಮ್ಮೆಲ್ಲೆಗಳಾಗಲಿ ರೇಪ್ ಮಾಡುತ್ತಿಲ್ಲ. ಕಾಮುಕರ ಸರ್ಕಾರವೆಂಬ ಹಣೆಪಟ್ಟಿಗೂ ಸಿದ್ದು ಸರ್ಕಾರ ಈಡಾಗಿಲ್ಲ.


ಫ್ರೆಜರ್ ಟೌನ್ ರೇಪ್

ಸಮಸ್ಯೆಯಾಗಿದ್ದೇ ಸಿದ್ದು ಸರ್ಕಾರಕ್ಕೆ ಕಳಂಕವಿಲ್ಲದು ಮತ್ತು ಕುಮಾರಸ್ವಾಮಿ, ಯಡ್ಡಿಯಂತೆ ಸಿದ... ಮೀಡಿಯಾಗಳನ್ನು ಓಲೈಸದೇ ಅಂತರಕಾಯ್ದುಕೊಂಡಿದ್ದು

2014 ರ ಜನವರಿಯಿಂದ ಜೂನ್‌ವರೆಗೂ ಪ್ರತಿನಿತ್ಯ ಒಂದಲ್ಲ ಒಂದು ಅತ್ಯಾಚಾರ ಪ್ರಕರಣಗಳು ನಡೆಯುತ್ತಲೇ ಇದ್ದವು ತಾನೆ? ಏಕೆ ಯಾರೇ ಒಬ್ಬ ಬಿಜೆಪಿ ನಾಯಕನಾಗಲಿ ಮೋರ್ಚಾಗಳಾಗಲಿ ಈ ಬಗ್ಗೆ ಚಕಾರವೆತ್ತಲಿಲ್ಲ? ಏ... ನ್ಯೂಸ್ ಚಾನಲ್ಲುಗಳ ಕಣ್ಣಿಗೆ ಪ್ರತಿನಿತ್ಯದ ಅತ್ಯಾಚಾ... ಪ್ರಕರಣಗಳು ಕಾಣಿಸಲಿಲ್ಲ, ವಿಕಟವೆಂದರೆ ಜುಲೈ ತಿಂಗಳ... ವಿಧಾನಮಂಡಲದ ಅಧಿವೇಶನ ನಿಗದಿಯಾಗಿದ್ದೇ ತಡ... ಗೃಹಮಂತ್ರಿ ಜಾರ್ಜ್‌ರನ್ನು ನಾನಾ ಕಾರಣಕ್ಕೆ ರಾಜೀನಾಮೆ... ಒತ್ತಾಯಿಸುತ್ತಿದ್ದ ಬಿಜೆಪಿಗೆ ಹೇಳಿಕೊಳ್ಳುವಂಥ ಯಾವುದೇ ದೊಡ್ಡ ಕಾರಣ ಸಿಕ್ಕಿರಲಿಲ್ಲ, ಈ ಮಧ್ಯೆ ಪುಲಿಕೇಶಿ ನಗರದ... ಯುವತಿಯೊಬ್ಬಳನ್ನು ಕಾಮುಕರ ಗುಂಪೊಂದು ಕಾರಿಗೆಳೆದುಕೊಂಡು ಪೀಡಿಸಿದ ಪ್ರಕರಣ ವರದಿಯಾಗಿದ್ದೇ ಏಕಾಏಕಿ ಮೀಡಿಯಾಗಳ ಮಾತೃಭಕ್ತಿ ಭುಗಿಲೆದ್ದಿದೆ.

ಬಹುಶಃ ಪೀಡಿಸಿದ ಕಾಮುಕರು ಹಿಂದೂಗಳಾಗಿದ್ದ... ಈ ಬಗ್ಗೆ ಬಿಜೆಪಿಯಾಗಲಿ, ನ್ಯೂಸ್ ಚಾನಲ್ಲುಗಳಾಗ... ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ಆದರೆ ಪೀಡಿಸಿದ್ದು ಮುಸ್ಲಿಂ ಕಾಮುಕರು. ಹೈದರ್ ನಾಸಿರ್ ಎಂಬ ಬಹುಜನ ಸಮಾಜ ಪಕ್ಷದ ನಾಯಕನ ಮಗನೇ ಫ್ರೆಜರ್ ಟೌನ್ ಅತ್ಯಾಚಾರ ಪ್ರಕರಣದ ರೂವಾರಿಯಾಗಿದ್ದು ಒಂದಾದ... ಕಾಕತಾಳೀಯವೋ ಎಂಬಂತೆ ಇಡೀ ಪ್ರಕರಣವನ್ನು ಮುಚ್ಚಿಹಾಕಲು ಹೊರಟದ್ದು ಮುಸ್ಲಿಂ ಪೊಲೀಸ್ ಅಧಿಕಾರಿಯಾಗಿದ್ದ ರಫೀ. ಅಷ್ಟೇ ಆಚಾನಕ್ಕಾಗಿ ಫ್ರೇಜ...

...ನಾಗಕ್ಕೆ ಎಸಿಪಿಯಾಗಿದ್ದದ್ದು ಕೂಡ ನೂರುಲ್ಲಾ ...ಂಬ ಮಗದೊಬ್ಬ ಮುಸ್ಲಿಂ ಅಧಿಕಾರಿಯೇ. ...ದ್ದಕ್ಕೇ ಇಲ್ಲಿ, ರಾಜ್ಯದ ಉದ್ದಗಲಕ್ಕೂ ಪ್ರತಿನಿತ್ಯ ...ಮ್ಮ ಹೆಣ್ಣುಮಕ್ಕಳ ಅತ್ಯಾಚಾರಗಳೆಲ್ಲವನ್ನೂ ... ಮುಸ್ಲಿಂ ಇನ್ಸ್‌ಪೆಕ್ಟರ್ ಓರ್ವ ಮುಸ್ಲಿಂ ...ನ್ನ ರಕ್ಷಿಸಲು ಹಿಂದೂ ಹೆಣ್ಣುಮಗಳಿಗೆ ...ನಾಗಿದ್ದಾನೆ ಎಂಬ ಒಂದೇ ಅಂಶದ ಆಧಾರದ ...ಸ್ ಚಾನಲ್ಲುಗಳೇ ಚುರುಕಾದವು. ದಿನವಿಡೀ ...ರಾದ ಕುರಿತಂತೆ ವರದಿಗಳ ಮೇಲೆ ವರದಿ, ...ಸ್ಕಷನ್, ಗಣ್ಯರ ಪ್ರತಿಕ್ರಿಯೆಗಳನ್ನು ...ಯಿತು. ವಿಧಾನ ಮಂಡಲದ ಅಧಿವೇಶನದಲ್ಲಿ ...ಯಕರು ಮುಸ್ಲಿಂ ಅಧಿಕಾರಿಯನ್ನೇ ಬಂಧಿಸುವಂತೆ ...ಟ್ಟರು.





...ಪಿಸ್ಟ್ ಹೈದರ್ ತಂತ್ರ!

...ರ್ಕಾರ ಸೂಕ್ಷ್ಮವಾಗೇ ಆ ಪೊಲೀಸ್ ಇನ್ಸ್‌ಪೆಕ್ಟರ್ ...ು ಜರುಗಿಸಿದ್ದಷ್ಟೇ ಅಲ್ಲ ಕ್ರಿಮಿನಲ್ ಮೊಕದ್ದಮೆ ...ಾಖಲಿಸಿತ್ತು. ಪೀಡಿಸಿದ ಕಾಮುಕರ ಪತ್ತೆಗಾಗಿ, ...ರುಲ್ಲಾ ಷರೀಫ್ ಸಿಕ್ಕಸಿಕ್ಕ ಮುಸ್ಲಿಂ ಹುಡುಗರನ್ನು ...ಬ್ಬಲಾರಂಭಿಸಿದ್ದರು. ಆದರೆ ಪ್ರಕರಣದ ಮುಖ್ಯ ...ೖದರ್ ನಾಸಿರ್ ಪೊಲೀಸರನ್ನೇ ಯಾಮಾರಿಸಿ ...ತ್ಯಾರು ದುಷ್ಮನ್‌ಗಳೋ ಅವರೆಲ್ಲರ ಹೆಸರನ್ನು ...ಾನು ಸೇಫಾಗಿ ಜೈಲು ಹೊಕ್ಕಿ ಕೂತು ಬಿಟ್ಟ. ...ಂಬಿದ ಪೊಲೀಸರು ಆತನ ಕೊಟ್ಟ ಹೆಸರುಗಳ ...ಡಿಸು ಸಿಕ್ಕ ಸಿಕ್ಕವರನ್ನೆಲ್ಲ ಎಳೆದು ತಂದರೆ ... ಆತನ ದುಷ್ಮನ್‌ಗಳು ಮತ್ತು ರೇಪ್ ಪ್ರಕರಣಕ್ಕೆ ... ಇಲ್ಲದವರು.

...ಸಿಪಿ ನೂರುಲ್ಲಾ ಬಂಧಿಸಿ ತಂದವರ ಪೈಕಿ ...ಾಧವನು ಟ್ಯಾನರಿ ರಸ್ತೆಯ ಕಿರಾತಕ ರೌಡಿ ...ಅಜಂನ ಖಾಸಾ ತಮ್ಮ ಇಮ್ತಿಯಾಜ್! ...ಯಾದ ಯುವತಿ ಬಂದಿದ್ದೇ ಲಾಕಪ್ಪಿನಲ್ಲಿದ್ದವರನ್ನು ... ಹೊರಟರೆ ಅವರ್‍ಯಾರಿಗೂ ಪ್ರಕರಣಕ್ಕೂ ಸಂಬಂಧವೇ ಇರಲಿಲ್ಲ. ಇನ್ನೇನು ಮತ್ತೆ ಹೈದರ್‌ನನ್ನು ಜೈಲಿಂದ ತಂದು ರುಬ್ಬಿ ಬಾಯಿ ಬಿಡಿಸಬೇಕನ್ನುವಷ್ಟರಲ್ಲಿ ವಿಬ್‌ಗಯಾರ್ ಶಾಲೆಯಲ್ಲಿ ಹಸುಳೆಯ ಮೇಲೇ ಅತ್ಯಾಚಾರವಾಗಿತ್ತು. ದುರಂತವೆಂದರೆ ವಿಬ್‌ಗಯಾರ್ ಶಾಲೆಯ ಮಾಲೀಕನೂ ಮುಸ್ಲಿಂ ಮತ್ತು ಅಲ್ಲಿ ಗಣನೀಯ ಸಂಖ್ಯೆಯಲ್ಲಿ ಮುಸ್ಲಿಂ ಶಿಕ್ಷಕರಿದ್ದರು. ಹೇಳಿಕೇಳಿ ವಿಬ್‌ಗಯಾರ್ ಕಾನ್ವೆಂಟ್ ಮಾಜಿ ಬಿಜೆಪಿ ಶಾಸಕ ನಂದೀಶ್ ರೆಡ್ಡಿಯ ಕೆ.ಆರ್. ಪುರಂ ಕ್ಷೇತ್ರಕ್ಕೆ ಬರುತ್ತದೆ.

ಕುಮಾರಸ್ವಾಮಿಯ ಸತ್ಯ!

ಒಂದೆಡೆ ನಂದೀಶ್ ರೆಡ್ಡಿಯ ರಾಜಕಾರಣ ಮತ್ತೊಂದೆಡೆ ಬಿಜೆಪಿ ಬೊಬ್ಬೆಗೆ ತಕ್ಕಂಥೆಯೇ ಬೀದಿಗಿಳಿದದ್ದು ಸಂಘ ಪರಿವಾರ ವಿದ್ಯಾರ್ಥಿ ಘಟಕವಾದ ಎಬಿವಿಪಿ. ವಿಬ್‌ಗಯಾರ್ ಶಾಲೆಯ ಮಕ್ಕಳ ಪೋಷಕರ ಪೈಕಿ ಬಹುತೇಕರು ಐಟಿ–ಬಿಟಿಯವರು. ಬಿಜೆಪಿ ಮಹಿಳಾ ಮೋರ್ಚಾ, ಯುವ ಮೋರ್ಚಾ, ಎಬಿವಿಪಿಗಳು ನಾಲ್ಕು ಸಿಟ್ಟಿನಿಂದ ಬೀದಿಗಿಳಿಯುತ್ತಿದ್ದಂತೆಯೇ ಸದನದಲ್ಲೂ ಬಿಜೆಪಿ ಬೊಬ್ಬೆ ಶುರುವಾಯಿತು. ಬಿಜೆಪಿ ನಾಯಕರಾದ ಅನಂತ್‌ಕುಮಾರ್ ಸೇರಿದಂತೆ ಈಶ್ವರಪ್ಪ, ಶೆಟ್ಟರ್, ಜೋಷಿ, ಸದಾನಂದ ಗೌಡ ಎಲ್ಲರದ್ದೂ ರೇಪ್ ಕೇಕೆಯೆ. ಇದಕ್ಕೆ ಪಕ್ಕವಾದ್ಯವೆಂಬಂತೆ ಚಾನಲ್‌ಗಳ ಬೊಬ್ಬೆ ಶುರುವಾಯಿತು. ಒಂದು ಚಾನಲ್ಲಂತೂ ಬೆಂಗಳೂರನ್ನು ರಾಷ್ಟ್ರದ ರೇಪ್ ರಾಜಧಾನಿ ಎಂದು ಘೋಷಿಸಿಬಿಟ್ಟಿತು. ಮತ್ತೊಂದು ಚಾನಲ್ ಇಡೀ ದೇಶದಲ್ಲಿ ಕರ್ನಾಟಕವೇ ಅತ್ಯಾಚಾರದಲ್ಲಿ ಮುಂದಿದೆ ಎಂದು ಘೋಷಿಸಿತು.

ಇದರಿಂದ ಮತ್ತಷ್ಟು ಕಂಗಾಲಾದ ಮುಖ್ಯಮಂತ್ರಿ ರಾತ್ರೋರಾತ್ರಿ ಪೊಲೀಸ್ ಕಮೀಷನರ್ ಔರಾದ್‌ಕರ್‌ನನ್ನು ಎತ್ತಂಗಡಿ ಮಾಡಿದ್ದಾಯ್ತು. ಆ ಜಾಗಕ್ಕೆ ಎಂ.ಎನ್. ರೆಡ್ಡಿ ಬರುತ್ತಿದ್ದಂತೆಯೇ ವಿಬ್‌ಗಯಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದ ನಂದೀಶ್ ರೆಡ್ಡಿ ಜಾತಿ ಪ್ರೀತಿಗೆ ಬಿದ್ದು ಪ್ರತಿಭಟನೆ ಕೈಬಿಟ್ಟರು. ಇನ್ನು ರಾಷ್ಟ್ರೀಯ ನ್ಯೂಸ್ ಚಾನಲ್‌ಗಳಂತೂ ಹೊಸ ಕಮೀಷನರ್ ರೆಡ್ಡಿಗೆ ರೇಪುಗಳ ಬಗ್ಗೆಯೇ ಪ್ರಶ್ನೆ ಮೇಲೆ ಪ್ರಶ್ನೆಯಿಟ್ಟು ರೇಪುಮಯಗೊಳಿಸಿಬಿಟ್ಟರು.

ಬಹುಶಃ ಜನಸಾಮಾನ್ಯರಿಗೆ ಅರ್ಥವಾಗದ ಒಂದು ಸೂಕ್ಷ್ಮವೆಂದರೆ ಮೋದಿಯ ಪರಮಾಪ್ತ ಅಂಬಾನಿಯ ರಿಲೈಯನ್ಸ್ ಕಂಪನಿಯೊಂದೇ ದೇಶಾದ್ಯಂತ ನಲವತ್ತಕ್ಕೂ ಅಧಿಕ ಚಾನಲ್ಲುಗಳನ್ನು ನಡೆಸುತ್ತಿದೆ ಎಂಬುದು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಜೆಡಿಎಸ್ ನಾಯಕ ಕುಮಾರಸ್ವಾಮಿ ವಿಧಾನಸಭೆಯಲ್ಲೊಂದು ಮುಖ್ಯ ಸಂಗತಿಯನ್ನು ಬಗೆದಿಟ್ಟರು. ಅದು ಸದ್ಯ ಬೆಂಗಳೂರಿನಲ್ಲಿ ಏನು ಅತ್ಯಾಚಾರವೆಂದು ಬೊಬ್ಬೆ ಹಾಕುತ್ತಿದ್ದಾರೋ ಆ ಸಂಖ್ಯೆಗೆ ಹೋಲಿಸಿದರೆ ಮೋದಿಯ ಗುಜರಾತ್‌ನ ಅಹ್ಮದಾಬಾದ್‌ನಲ್ಲೇ ರೇಪ್ ಪ್ರಕರಣಗಳ ಸಂಖ್ಯೆ ಹೆಚ್ಚು!

ಅಂಕಿ ಅಂಶಗಳ ಸಮೇತ ಕುಮಾರಸ್ವಾಮಿ ವಿಧಾನಸಭೆಯಲ್ಲಿ ಬಿಚ್ಚಿಟ್ಟ ಈ ಸತ್ಯವನ್ನು ಅವತ್ತು ಹಾಜರಿದ್ದ ಎಲ್ಲಾ ಟೀವಿ, ಪತ್ರಿಕೆ ವರದಿಗಾರರೂ ಕೇಳಿಸಿಕೊಂಡಿದ್ದರು. ಆವತ್ತು ಅತ್ಯಾಚಾರದ ಕುರಿತಂತೆ ಬಿಜೆಪಿ ನಾಯಕರು ಮೆರೆದ ಪೌರುಷದ ಬಗ್ಗೆ ರಾಜ್ಯಾದ್ಯಂತ ನಡೆದ ಅತ್ಯಾಚಾರಗಳ ಬಗ್ಗೆ ಮರುದಿನದ ಪತ್ರಿಕೆಗಳಲ್ಲಿ ಪುಂಖಾನುಪುಂಖ ವರದಿಯಿತ್ತಾದರು ಕುಮಾರಸ್ವಾಮಿ ಬಿಚ್ಚಿಟ್ಟ ಈ ಸತ್ಯವನ್ನು ಮಾತ್ರ ಯಾವೊಂದು ಪತ್ರಿಕೆಯೂ ಪ್ರಕಟಿಸಲಿಲ್ಲ, ಯಾವುದೇ ನ್ಯೂಸ್ ಚಾನಲ್ಲಿಗಿದು ಬೇಕಾಗಿರಲಿಲ್ಲ.

ಅಲ್ಲಿಗೆ ಒಂದಂತೂ ಸ್ಪಷ್ಟವಾಗಿತ್ತು. ಮೀಡಿಯಾಗಳಿಗೆ ಸತ್ಯ ಮುಖ್ಯವಲ್ಲ ಮತ್ತು ಬಿಜೆಪಿ, ಎಬಿವಿಪಿಗಳಿಗೆ ಅತ್ಯಾಚಾರ ಬಿಟ್ಟರೆ ಬೇರೇನೂ ಬೇಕಿಲ್ಲ!

ಇದು ಗೊತ್ತಾಗಿಯೇ ಮುಖ್ಯಮಂತ್ರಿ ಸಿದ್ದು ತನ್ನನ್ನು ಕೆಣಕಿದ ಟೀವಿ ಪುಂಗವರ ವಿರುದ್ಧ ಕಿಡಿಕಾರಿದ್ದು.

■ ರಾ. ಸೋಮನಾಥ್

...ರಪ್ಪನ ಯಾನದಲ್ಲಿ ಹಾರುವ ಪುರಾಣವಿದೆಯಂತಲ್ಲಾ

ಥೂತ್ತೇರಿ

...ರ್ನಾಟಕದಲ್ಲಿ ಬಿಜೆಪಿಗಳು ನಡೆಸಿದ ರೇಪಿನ ...ದಲ್ಲಿ ಬಾಯಿ ಮುಚ್ಚಿಕೊಂಡಿದ್ದ ಶೋಭಕ್ಕ ...ಯಲ್ಲಿ ದನಿ ಎತ್ತರಿಸಿ "ಈ ರೇಪುಗಳನ್ನು ಸಹಿಸಲು ..." ಎಂದಳಂತಲ್ಲಾ. ಇದಕ್ಕೆ ಅಲ್ಲೇ ಇದ್ದ ಸಿಮ್ಮ ... ಊಳಿಟ್ಟು "ಹೌದು, ನಮ್ಮಕ್ಕ ಹೇಳುತ್ತಿರುವುದು ... ನೂರು ಸತ್ಯ" ಎಂದನಂತಲ್ಲಾ. ರೇಪಿನಲ್ಲೂ ...ಣ ಮಾಡಲು ಹೊರಟ ಇದೇ ಬಿಜೆಪಿಗಳ ...ಲ್ಲಿ ಉಡುಪಿ ಭಟ್ಟನ ಪತ್ನಿ ದೆಹಲಿಯವರೆಗೂ ...ೋಗಿ ಆತ್ಮಹತ್ಯೆ ಮಾಡಿಕೊಂಡರು. ಆಗ ಅದೇ ... ಆಚಾರಿ ಗೃಹ ಸಚಿವ ಆಗಿದ್ದರು. ಹರತಾಳು ...ಸಾಕ್ಷಿ ಸಮೇತ ಸಿಕ್ಕಬಿದ್ದು ವ್ಹೀಲ್‌ಚೇರ್‌ನಲ್ಲಿ ಆಸ್ಪತ್ರೆ ... ಇನ್ನು ಶೋಭಕ್ಕನ ಸಮ್ಮುಖದಲ್ಲೇ ಸದನದಲ್ಲಿ ... ನೋಡುತ್ತಲೇ ಸಿಕ್ಕ ಬಿದ್ದ ಸಚಿವ "ಅದು ... ಓಡು ಮಾಡಿದ್ದು, ನಾನು ಇಳಿಸಿಕೊಂಡು ..." ಎಂದಿದ್ದ.


...ಲ್ಲಾ ಬಾಯಿ ಮುಚ್ಚಿಕೊಂಡು ತೆಪ್ಪಗಿದ್ದ ಬಿಜೆಪಿ ... ಮಣಿಗಳು ಇದ್ದಕ್ಕಿದ್ದಂತೆ ಬೀದಿಗಿಳಿದು ಎಲ್ಲಾ ... ಜಾರ್ಜ್ ಅವರೇ ಕಾರಣಕರ್ತ ಎಂದೂ, ... ತಮ್ಮ ಸ್ಥಾನಕ್ಕೆ ಜಾರ್ಜ್ ರಾಜೀನಾಮೆ ...ೀಕೆಂದೂ ಪ್ರತಿಕೃತಿಯನ್ನೇ ದಹಿಸಿದರಂತಲ್ಲಾ. ...ದಲ್ಲೀಗ ಮಂತ್ರಿ ಮಹೋದಯರ ಮೊಬೈಲ್‌ನಿಂದ ... ಮಂದಮತಿಯಂತಹ ಪಡ್ಡೆ ಹುಡುಗರ ...ಗಳಲ್ಲೆಲ್ಲಾ ಬ್ಲೂಫಿಲಂ ಹರಿದಾಡುತ್ತಿದೆ. ಇದನ್ನು ... ಹೈದರು ಸುತ್ತಲೂ ನೋಡುತ್ತಾರೆ. ಆಗ ...ರೂ ಬಲಿಪಶುಗಳು ಅವರಿಗೆ ಸಿಗಬಹುದು. ... ಪಶು ಸದೃಶ ಕೃತ್ಯ ಎನ್ನಲಾಗದು. ಏಕೆಂದರೆ ...ಗಳು ಎಂದೂ ಕೂಡ ರೇಪ್ ಮಾಡಿದ ...ರಣೆಯಿಲ್ಲವಂತಲ್ಲಾ, ಥೂತ್ತೇರಿ!

* * *

...ತವಾಗಿ ಮೂವತ್ತೆಂಟು ಗಂಟೆಗಳ ಕಾಲ ...ದಲ್ಲಿ ನಡೆದ ರೇಪುಗಳ ಸುದ್ದಿ ಬಿತ್ತರಿಸಿದ ಟಿ.ವಿ.ಗಳು ...ೇನು ಮಾಡುವುದೆಂದು ರೋಚಕ ಸುದ್ದಿಗಾಗಿ ...ರುವಾಗಲೇ, ದೇಶದ ಯಾವುದೇ ಮೂಲೆಗಾದರೂ ...ಯಲ್ಲಿ ತಲುಪುವಂತಹ ಬುಲೆಟ್ ಟ್ರೈನುಗಳನ್ನು ... ಬಿಡಲಿದ್ದಾರಂತಲ್ಲ, ಸದರಿ ಸುದ್ದಿಯಿಂದ ...ಚನಗೊಂಡಿರುವ ಚಿಡ್ಡಿಗಳು ಇಡೀ ದೇಶದ ... ಮಿಂಚಿನ ಸಂಚಾರದಲ್ಲಿ ಲಾಠಿ ಬೀಸುವ ...ಚಕ ಕನಸಿನಲ್ಲಿ ಮುಳುಗಿದೆಯಂತಲ್ಲಾ, ಸದರಿ ...ಕೇಂದ್ರಸ್ಥಾನವಾದ ನಾಗಪುರದಲ್ಲಿನ ಸ್ಥಿತಿ ನೋಡಿದರೆ ...ವಂತರಿಗೆ ಊಟ ಸೇರುವುದಿಲ್ಲ, ಹಾಗೆಯೇ ...ದ ಕೈಯಲ್ಲಿ ಹಳೆ ಪತ್ರದಲ್ಲಿ ಬಿಹಿಂಡ್‌ಗೆ ಕುಂತವರನ್ನು ...ರೂ ಊಟ ಸೇರಲಾರದು. ಇನ್ನು ಬೊಂಬಾಯಿಂದ ... ದಿಲ್ಲಿ ಬಂದದ್ದೇ ಭೀಕರವಾದದು. ಬದಲಾದ ಜಾಗತೀಕರಣದ ಹೊಡೆತಕ್ಕೆ ಸಿಕ್ಕ ಬಡವರು, ಎಲ್ಲಾ ನಗರಗಳ ಹೊರವಲಯದಲ್ಲಿ ಹಣಬೆಗಳಂತೆ ಗುಡಾರ ಸೃಷ್ಟಿಸುತ್ತಿದ್ದಾರೆ. ಇದಕ್ಕೆಲ್ಲಾ ಪರಿಹಾರ ಕಾಣದಂತಾಗಿರುವ ಮೋದಿ ಪರಿವಾರ, ದೇಶದ ಯಾವುದೇ ಮೂಲೆಗೆ 24 ಗಂಟೆಯಲ್ಲಿ ತಲುಪುವ ಬುಲೆಟ್ ಟ್ರೈನಿಗೆ ಕನಸು ಕಾಣುತ್ತಿದೆ. ಇನ್ನ ತನ್ನ ಬಂಧುವೊಬ್ಬ ಪ್ರಧಾನಿಯಾದಷ್ಟೇ ಖುಷಿಯಿಂದ ಓಡಿಹೋದ ಪೇಜಾವರ ಮೋದಿಯನ್ನು ಕಂಡು ತಮ್ಮ ಎಂದಿನ ಅಜೆಂಡಾ ಮುಂದಿಟ್ಟಿದ್ದಾರೆ ಅಂದರೆ; ದೇಶಕ್ಕೆ ಗಂಡಾಂತರವೇ ಕಾದಿದೆಯಂತಲ್ಲಾ, ಥೂತ್ತೇರಿ!

* * *

ಬೆಟಗೇರಿ ವಿಪ್ರೋತ್ತಮರೆಲ್ಲಾ ಸೇರಿ, ಸಂತೆ ಶಿವರದ ಭೈರಪ್ಪನವರಿಗೆ ಒಂದು ಲಕ್ಷ ರೂ.ಗಳ ಪ್ರಶಸ್ತಿ ಕೊಡಲಿದ್ದಾರಂತಲ್ಲಾ, ಈ ಬಗ್ಗೆ ಅಭಿನಂದಿಸಬೇಕಾದದ್ದು ನಮ್ಮ ಧರ್ಮ. ಆದ್ದರಿಂದ ಭೈರಪ್ಪನವರಿಗೇ ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್‌ಟೋನ್: "ಧಿಯೋ ಯೋನಃ ಪ್ರಚೋದಯಾತ್, ಧಿಯೋಯೋನಃ ಪ್ರಚೋದಯಾತ್"

"ಹಲೋ?"

"ಹಲೋ ನಮಸ್ಕಾರ ಸಾರ್, ನಾನು ಯಾಹು ಅಂತ, ಪತ್ರಕರ್ತ."

"ಏನೇಳಿ ಇವರೆ."

"ಬೆಟಗೇರಿ ಕೃಷ್ಣಶರ್ಮರ ಪ್ರಶಸ್ತಿ ಪಡೆದದ್ದಕ್ಕೆ ಅಭಿನಂದನೆ ಸಾರ್. ಅಂತೂ ಒಂದು ಲಕ್ಷ ರೂಪಾಯಿ ಹೊಡದ್ರಿ."

"ಕೃಷ್ಣಶರ್ಮರ ಪ್ರಶಸ್ತಿಗೆ ಬೆಲೆ ಕಟ್ಟಕ್ಕಾಗಲ್ಲ. ಒಂದು ಲಕ್ಷ ರೂಗಿಂತ ಪ್ರಶಸ್ತಿ ಮುಖ್ಯ."

"ಜ್ಞಾನಪೀಠದ ಮಟ್ಟದ ನಿಮಗೆ ಕೃಷ್ಣಶರ್ಮರ ಪ್ರಶಸ್ತಿ ತೀರ ಸಣ್ಣದಾಯ್ತು ...ನ?"

"ಹಾಗೇನು ಇಲ್ಲ, ಕೃಷ್ಣಶರ್ಮರು ನಮ್ಮ ಬಹಳ ದೊಡ್ಡ ಸಾಹಿತಿಗಳು. ನಮ್ಮ ಬಂಧುಗಳಿದ್ದಂತೆ. ಅವರ ಹೆಸರಿನ ಪ್ರಶಸ್ತಿ ಜ್ಞಾನಪೀಠಕ್ಕಿಂತ ದೊಡ್ಡದು ಅಂತ ಭಾವಿಸಿದ್ದಿನಿ."

"ನಿಜ ಸಾರ್. ಇದುವರೆಗೂ ಜ್ಞಾನಪೀಠ ಪ್ರಶಸ್ತಿ ಕಮಿಟಿ ಸಮೀಪಕ್ಕೂ ಕೂಡ ನಿಮ್ಮ ಪ್ರಸ್ತಾಪ ಬಂದಿಲ್ಲವಂತೆ. ವಸ್ತು ಸ್ಥಿತಿ ಹಿಂಗಿರುವಾಗ ಜನಾಂಗದವರು ಗುರುತಿಸಿ ಕೊಡೋ ಪ್ರಶಸ್ತಿ ದೊಡ್ಡದೆ ಅಲ್ಲವಾ?"

"ನಾನೆಂದೂ ಪ್ರಶಸ್ತಿ ಬಗ್ಗೆ ಯೋಚನೆ ಮಾಡ್ತ ಬರೆದವ್ರುನೆ ಅಲ್ಲ."

"ನಿಜ ಸಾರ್. ಹಿಂದೂ ಧರ್ಮದ ಪುನರುತ್ಥಾನದ ಅಜೆಂಡ ಅಮರಿ ಕೊಂಡವರಿಗೆ ಪ್ರಶಸ್ತಿಗಳೆಲ್ಲಾ ಕಾಣಸಲ್ಲ. ನಿಜವಾಗ್ಲು ಗುರುತಿಸಬೇಕಾದವರು ಗುರುತಿಸಿ ಬಹುಮಾನ ಕೊಡ್ತರೆ."

"ನಾನೇಳಿದ್ನಲ್ಲಾ, ಪ್ರಶಸ್ತಿಗಾಗಿ ನಾನೇನೂ ಬರೀಲಿಲ್ಲ."

"ಇತ್ತೀಚೆಗೆ ಸಾರ್ ಒಬ್ಬ ಭಟ್ಟರ ಹುಡುಗ ನಿಮ್ಮ ಯಾನ ಕಾದಂಬರಿ ಬರುತ್ತೆ ಬೇಗ ಕೊಂಡುಕೊಳ್ಳಿ, ಪ್ರತಿಗಾಗಿ ಸಂಪರ್ಕಿಸಿ ಅಂತ ಕರಪತ್ರ ಹೊರಡಿಸಿದಾನೆ. ಈಗಾಗ್ಲೆ ಸರಕಾರಿ ಕೆಲಸದಲ್ಲಿರೊ ನಿಮ್ಮವರೆಲ್ಲಾ ತಲೆ ಮೇಲೆ ಹೊತ್ಕಂಡು ಮಾರೋದಿಕ್ಕೆ ರೆಡಿಯಾಗಿದಾರೆ ಸಾರ್. ಈಗಾಗಲೇ ಬಂದಿರುವ ಕಾದಂಬರಿಗಿಂತ್ಲೂ ಇದು ಬೇರೆ ತರವಂತಲ್ಲಾ ಸಾರ್."

"ಹೌದು, ನನ್ನ ಯಾನ ಕಾದಂಬರಿ ಸಂಪೂರ್ಣ ಭಿನ್ನ ವಸ್ತುವನ್ನ ಒಳಗೊಂಡಿದೆ."

"ಭಿನ್ನ ವಸ್ತು ಅಂದ್ರೆ ಯಾವುದು ಸಾರ್?"

"ನೋಡಿ, ಅದನ್ನ ಫೋನಿನಲ್ಲಿ ಹೇಳೋಕ್ಕಾಗಲ್ಲ, ಕಾದಂಬರಿ ತಗೊಂಡು ಓದಿ."

"ಸಂಕ್ಷಿಪ್ತವಾಗಿ ಹೇಳಿ ಸಾರ್."

"ನೋಡಿ, ನಮ್ಮ ಭೂಲೋಕದ ಮನುಷ್ಯನ ಕಟ್ಟುಪಾಡು ಸೌರವ್ಯೂಹದಿಂದ ಹೊರಗೆ ಏನಾಗಬಹುದು ಅಂತ ಯೋಚನೆ ಮಾಡೋ ಕಾದಂಬರಿ ಇದು."

"ನಿಜಕ್ಕೂ ವಂಡ್ರುಪುಲ್ಲು ಸಾರ್. ಹಿಂದೂ ಧರ್ಮದ ಮೇಲೆ ಬರದಾಯ್ತು. ಬೌದ್ಧ ಧರ್ಮದ ಮೇಲೆ ಬರದಾಯ್ತು. ಮುಸ್ಲಿಂ ಧರ್ಮದ ಮೇಲೂ ಬರದು ಮುಗಿಸಿದ್ರಿ. ಈಗ ಎಲ್ಲಾನು ಬಿಟ್ಟು ಸೌರವ್ಯೂಹಕ್ಕೆ ಹೋಗಿದ್ದು ನನಗಂತೂ ಆಚ್ಚರಿಯಲ್ಲ ಸಾರ್."

"ಯಾಕೆ ಆಚ್ಚರಿಯಲ್ಲಾ?"

"ನೋಡಿ ಸಾರ್, ನಮ್ಮೂರತ್ರಯಿದ್ದ ಶ್ಯಾನುಭೋಗರ ಮಕ್ಕಳೆಲ್ಲಾ ಓದಿ ಬೆಂಗಳೂರಿಗೋದ್ರು. ಅಲ್ಲಿಂದ ಹೈದರಾಬಾದ್ ಮತ್ತೆ ಡೆಲ್ಲಿಗೋದ್ರು. ಅಂದ್ರೆ ಅಲ್ಲಿನ ಸರಕಾರಗಳ ಮುಖ್ಯ ಕಾರ್ಯದರ್ಶಿಗಳಾದ್ರು. ಆನಂತರ ಅಲ್ಲಿಂದ್ಲೂ ಅಮೆರಿಕಾಕ್ಕೆ ಹೊರಟೋದ್ರು. ನಾವು ಮಾತ್ರ ಇಲ್ಲೇ ಇದ್ದೀವಿ. ಅದೇ ಊರು, ಅದೇ ಕೇರಿ. ಬ್ರಾಂಬ್ರು ಕೇರಿ ಮಾತ್ರ ಖಾಲಿ."

"ನೀವು ಏನೇಳಿದ್ರಿ, ಗೊತ್ತಾಗಲಿಲ್ಲ."

"ನೀವು ಇಲ್ಲಿ ಬರಿಯೋ ಅಂತದ್ದು ಇನ್ನೂ ಇತ್ತು ಸಾರ್. ಒಂದು ಕಾದಂಬರಿ ಬರಿಯಕ್ಕೆ ಒಬ್ಬರ ಮನೇಲಿ ಇದ್ದು ಬಂದ್ರೆ ಏನೂ ತಿಳಿಯಲ್ಲಾ, ನಿಮ್ಮ ಅಷ್ಟೂ ಕಾದಂಬರಿಲಿ ಅಂತ ಕೆಲಸ ಮಾಡಿದ್ದಿರಿ. ಇದ್ದುದರಲ್ಲಿ ಗೃಹಭಂಗ ಮತ್ತು ಪರ್ವ ಪರವಾಗಿಲ್ಲ, ಅದರಲ್ಲೂ ಪರ್ವನ ಸರಿಯಾಗಿ ಓದಿದ್ರೆ 'ರಾಮ ಹುಟ್ಟಿದ ಜಾಗ ಇದೇ ನೋಡ್ರಿ' ಅಂತರಲ್ಲಾ, ಅಂತವರು ಮೆಚ್ಚೊ ಕೃತಿಯಾಗಿ ಪರ್ವ ಕಾಣ್ತಾಯಿದೆ. ನಮ್ಮ ತಕರಾರು ಇರ್ಲಿ, ಮುಂದ ಕೇಳಿ ಸಾರ್."

"ನೋಡಿ, ನಮ್ಮ ನಿರ್ಮಿತಿಯ ಮೌಲ್ಯಗಳು ಸೌರಮಂಡಲದಾಚೆಗೂ ಅನ್ವಯಿಸ್ತವಾ ಅಥವಾ ಅಲ್ಲಿ ನಾವೇನಾದ್ರು ಬೇರೆ ಯೋಚನೆ ಮಾಡಬೇಕಾ ಅಂತ ವೈಜ್ಞಾನಿಕವಾಗಿ ಆಲೋಚನೆಗೆ ಹಚ್ಚುವಂತಾ ವಸ್ತು ತಗೊಂಡು ಬರದಿದ್ದಿನಿ."

"ಇದೇನು ಸಾರ್, ಇಷ್ಟು ದಡ್ಡತನದಲ್ಲಿ ಯೋಚನೆ ಮಾಡಿದ್ದಿರಿ. ಇಲ್ಲಿ ನೀವು ಪ್ರತಿಪಾದನೆ ಮಾಡ್ತಯಿರೋದ್ಯಲ್ಲ ಮನು ಅನ್ನೋ ವೈದಿಕನ ಐಡಿಯಾಲಜಿ. ಅದು ನಿಮ್ಮ ಅಗ್ರಹಾರ ಬಿಟ್ಟು, ನಮ್ಮ ಕೇರಿಗೆ ಅನ್ವಯಿಸಲ್ಲ, ನಮ್ಮ ಕೇರಿಲಿ ಯಾವ ಹೆಂಗಸರೂ ತಲೆ ಬೋಳಿಸಿಕೊಂಡಿಲ್ಲ, ಸಂಧ್ಯಾವಂದನೆ, ಶ್ರಾದ್ಧ ಪಿಂಡ ಯಾವುದೂ ನಮ್ಮಲ್ಲಿಲ್ಲ, ಆದ್ಯಂಗೆ ಇದನ್ನಲ್ಲ ಸೌರವ್ಯೂಹದ ಹೊರಗೆ ತಗಂಡೋಗಿ ಯೋಚನೆ ಮಾಡಿದ್ದಿರೀ?"

"ನೋಡಿ, ಇಂತ ಕಿಡಿಗೇಡಿ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಡಕ್ಕಾಗಲ್ಲ, ಕಾದಂಬರಿ ತಗೊಂಡು ಓದಿ."

"ನೀವು ಸುಮ್ಮಸುಮ್ಮನೆ ಯಾವ ಕಾದಂಬರಿನೂ ಬರದಿಲ್ಲ, ಯಾವುದಾದ್ರೂ ಅಜೆಂಡ ಅಂತರ್ಗತವಾಗಿ ಕೆಲಸ ಮಾಡಿರುತ್ತೆ. ಇದರಲ್ಲಿ ಯಾವ ಅಜೆಂಡಾಯಿದೆ ಸಾರ್?"

"ಅದನ್ನ ಓದಿದ ಮೇಲೆ ನೀವೇ ಹೇಳಿ."

"ಇನ್ನೊಂದು ಸಲಹೆ ಸಾರ್."

"ಏನ್ಹೇಳಿ?"

"ನೀವು ಇಷ್ಟು ಬೇಗ ಸೌರವ್ಯೂಹಕ್ಕೆ ಹೋಗೋದಕ್ಕಿಂತ ನಮ್ಮ ನಡುವಿನ ಬ್ರಾಹ್ಮಣ ಯಾಕೆ ಕಪಟಿಯಾಗಿದಾನೆ? ಈ ಮೂಢನಂಬಿಕೆ ಪರ ಯಾಕೆ ಹೋರಾಡ್ತಯಿದಾನೆ? ನಿಜಕ್ಕೂ ಆ ಪೇಜಾವರರ ಸಮಸ್ಯೆ ಏನು? ಮನುಷ್ಯನ ಮನಸ್ಸು ಸ್ವತಂತ್ರ ಇದದ್ದು ಅಂತ ತತ್ವಶಾಸ್ತ್ರ ಹೇಳಿದ್ರೂ ಹಿಂದೂಗಳ ಮನಸ್ಸನ್ನೂ ಪುರೋಹಿತರ ಕೈಗೆ ಸಿಗಾಯ್ಕಂಡು ಒದ್ದಾಡ್ತಯಿರೊದರ ಹಿಂದಿರುವ ಶಕ್ತಿ ಯಾವುದು ಅಂತ ಒಂದೊಳ್ಳೆ ಕಾದಂಬರಿ ಬರಿಬಹುದಿತ್ತು ಸಾರ್. ನಾರೊ ತಿಪ್ಪೇ ಮೇಲಿದ್ರೂ ಸೌರಮಂಡಲಕ್ಕೆ ಹಾರಿದ್ದೀರಲ್ಲಾ, ಇದ್ಕೆ ಹಾರುವ ಅನ್ನದಲ್ಲವೆ?"


"........"


"ಅಲ್ವಾ ಸಾರ್? ಹಲೋ? ಹಲೋ?"

"..........."

"ಥೂತ್ತೇರಿ!!"

ಮತ್ತೆ ಮತ್ತೆ ಸಂಸ್ಕಾರ...





ಕನ್ನಡದಲ್ಲಿ ಪ್ರತಿವರ್ಷ ಸರಾಸರಿ 150 ಸಿನಿಮಾಗಳು ತಯಾರಾಗುತ್ತಿವೆ. ಅವುಗಳಲ್ಲಿ ಶ್ರೇಷ್ಠವೆನಿಸಿದವುಗಳು ಕೆಲಕಾಲ ಚರ್ಚೆಯಲ್ಲಿದ್ದು ಜನಮಾನಸದಿಂದ ಮರೆಯಾಗಿ ಹೋಗುತ್ತವೆ. ಕನ್ನಡ ಸಿನಿಮಾರಂಗದ ಚರಿತ್ರೆಯಲ್ಲೇ ಕಾದಂಬರಿಯಾಧಾರಿತ ಸಿನಿಮಾಗಳಲ್ಲಿ ಶ್ರೇಷ್ಠ ಸಿನಿಮಾ ಯಾವುದೆಂಬ ಪ್ರಶ್ನೆಗೆ ವಸ್ತುನಿಷ್ಠ ವಿಮರ್ಶಕರಿಂದ ಸಿಗುವ ಉತ್ತರ ಇಂದಿಗೂ 'ಸಂಸ್ಕಾರ'. ಸಂಸ್ಕಾರದ ಕಥೆ ನಮಗೆ ಇಂದಿನ ವೈಜ್ಞಾನಿಕ ದಿನಮಾನದಲ್ಲೂ ಧಗ ಧಗ ಉರಿಯುವ ಬೆಂಕಿಯಂತಹ ಬಂಡಾಯ ಎಂದು ಭಾಸವಾಗಬೇಕಾದರೆ ಸುಮಾರು 45 ವರ್ಷಗಳ ಹಿಂದಿನ ಸಂಪ್ರದಾಯಸ್ಥ ಸಮಾಜದ ಪಾಲಿಗೆ ಬಹುಶಃ ಅದೊಂದು ಜ್ವಾಲಾಮುಖಿಯೆಂದೇ ಅನಿಸಿರಬಹುದಲ್ಲವೇ?

ಇತ್ತೀಚೆಗೆ ಸಂಸ್ಕಾರ ಸಿನಿಮಾ ತಂಡದ ಪ್ರಸ್ತುತ ಬದುಕಿರುವ ಸದಸ್ಯರ ಗೆಟ್‌ಟುಗೆದರ್ ಕಾರ್ಯಕ್ರಮ ಮತ್ತು ಅವರು ನಡೆಸಿದ ಅವಲೋಕನ ಈ ಕಾಲದಲ್ಲಿ ಮತ್ತೆ ಮತ್ತೆ ಸಂಸ್ಕಾರದ ವಸ್ತು ವಿಷಯವನ್ನು ಮೆಲುಕು ಹಾಕುವಂತೆ ಮಾಡಿದೆ. ಇಂತಹ ಒಂದು ಅನನ್ಯ ಕೃತಿಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಅನಂತಮೂರ್ತಿಯವರನ್ನು ಅಭಿನಂದಿಸುವುದು ಬಿಟ್ಟು ಅವರ ಮೇಲೆ ಮತ್ತೆ ಮತ್ತೆ ಕಲ್ಲೆಸೆಯುವವರ ವಿರುದ್ಧ ನಮ್ಮ ಕ್ರೋಧವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಇದೆಲ್ಲಾ ಸಾಧ್ಯವಾಗುವುದು ಅನಂತಮೂರ್ತಿಯವರ ಸಂಸ್ಕಾರಕ್ಕೆ ಮಾತ್ರ ಎಂಬುವುದೇ ಅದರ ಹೆಚ್ಚುಗಾರಿಕೆ.

ಸಂಸ್ಕಾರದ ಕರ್ತೃ ಡಾ.ಯು.ಆರ್.ಅನಂತಮೂರ್ತಿಯವರನ್ನು ಮನೋವ್ಯಾಧಿಗ್ರಸ್ಥರು ಪ್ರತಿನಿತ್ಯ ಇಲ್ಲಸಲ್ಲದ ಕಾರಣ ಹುಡುಕಿ ತಿವಿಯುತ್ತಿರುವುದು ಸರ್ವವೇದ್ಯ. ಬಹುಶಃ ಯಾವುದೇ ಕಾದಂಬರಿಯೂ ಅದು ಪ್ರಕಟವಾಗಿ ಹೆಚ್ಚು ಕಡಿಮೆ ಅರ್ಧ ದಶಕದ ಬಳಿಕವೂ ಚರ್ಚೆಯಾಗುತ್ತಿದೆಯೆಂದರೆ ಅದು ಅದರ ಶ್ರೇಷ್ಠತೆಗೆ ಮಾನದಂಡ ಎನ್ನಲು ಬೇರೆ ಕಾರಣ ಬೇಕಿಲ್ಲ, ತಮ್ಮ ಬದುಕಿನ ಇಳಿಸಂಜೆಯಲ್ಲಿ ನಿರಂತರವಾಗಿ ಸಮಾಜದ್ರೋಹಿಗಳಿಂದ ಮಾನಸಿಕ ಹಲ್ಲೆಗೊಳಗಾಗುತ್ತಿರುವ ಅನಂತಮೂರ್ತಿಯವರ ಬಗ್ಗೆ ಯೋಚಿಸುತ್ತಿರಬೇಕಾದರೆ ಅವರೊಂದು ಸ್ವಾದಿಷ್ಟ ಹಣ್ಣುಗಳನ್ನು ನೀಡುತ್ತಿರುವ ಫಲಭರಿತ ವೃಕ್ಷ ಎಂದೇ ಹೇಳಬೇಕು. ಸ್ವಾದಿಷ್ಟ ಹಣ್ಣುಗಳಿಲ್ಲದ ವೃಕ್ಷ ಯಾರೇ ಆದರೂ ಯಾಕೆ ಆ ವೃಕ್ಷಕ್ಕೆ ಕಲ್ಲೆಸೆಯಬೇಕು? ಯಾರೇನೇ ಅಂದರೂ ಕನ್ನಡ ಸಾಹಿತ್ಯದ ಅದ್ಭುತ ಸಿದ್ಧಿಗಳಲ್ಲೊಂದಾದ ಸಂಸ್ಕಾರವನ್ನು ಅದರ ಅದ್ಭುತ ಸೃಜನಶೀಲತೆಯನ್ನು, ಅಪೂರ್ವ ಶೃಂಗಾರವನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ. ನವ್ಯ ಸಾಹಿತ್ಯ ದರ್ಶನ ಎಂಬ ಗ್ರಂಥದಲ್ಲಿ ಕನ್ನಡದ ಶ್ರೇಷ್ಠ ವಿಮರ್ಶಕರಲ್ಲೊಬ್ಬರಾದ ಶಾಂತಿನಾಥ ದೇಸಾಯಿಯವರು ಸಂಸ್ಕಾರದ ಕುರಿತಂತೆ ಹೀಗೆ ಬರೆಯುತ್ತಾರೆ: "ಸಂಸ್ಕಾರ ಕನ್ನಡ ನವ್ಯ ಸಾಹಿತ್ಯದ ಅಪೂರ್ವ ಸಿದ್ಧಿಗಳಲ್ಲೊಂದಾಗಿದೆ. ನವ್ಯ ಸಾಹಿತ್ಯದ ಕೆಲವು ಮೂಲಭೂತ ಪ್ರವೃತ್ತಿಗಳ ಸಮರ್ಥ ಆವಿಷ್ಕಾರ ಇದರಲ್ಲಿದೆ. ಹಳೆಯ ಸಂಸ್ಕಾರಗಳನ್ನು ಒರೆಗೆ ಹಚ್ಚಿ ನೋಡಿ, ಸತ್ವಹೀನವಾದವುಗಳನ್ನು ಕಳಚಿ ಒಗೆದು, ದ್ವಂದ್ವಕ್ಕೆ, ಘರ್ಷಣೆಗೆ ದುಃಖಕ್ಕೆ ಅಳುಕದೆ, ಧೈರ್ಯದಿಂದ ಪ್ರಾಮಾಣಿಕತೆಯಿಂದ ಹೊಸ ಮೌಲ್ಯಗಳನ್ನು ಅನ್ವೇಷಿಸುವ ಪ್ರವೃತ್ತಿ ನವ್ಯ ಪ್ರಜ್ಞೆಯ ಮೂಲ ಸ್ವರೂಪವೆಂದು ಪರಿಗಣಿಸಬಹುದಾದರೆ, ಅದು ಸಂಸ್ಕಾರದ ವಸ್ತುವಿನಲ್ಲಿಯೂ, ನಾಯಕ ಪ್ರಾಣೇಶಾಚಾರ್ಯರ ಚರಿತ್ರೆಯಲ್ಲಿಯೂ, ಕತೆ ಹೇಳುವ ರೀತಿಯಲ್ಲಿಯೂ, ಭಾಷೆಯಲ್ಲಿಯೂ, ಮೊದಲಿನಿಂದ ಕೊನೆವರೆಗೆ ಪರಿಣಾಮಕಾರಿಯಾಗಿ ಅಭಿನಯಿಸಲ್ಪಟ್ಟಿದೆ. 'ಸಂಸ್ಕಾರ'ದ ಒಟ್ಟಂದದ ಸಿದ್ಧಿಯನ್ನು ನೋಡಿದಾಗ, ಭಾರತೀಯ ಸಾಹಿತ್ಯ ರಂಗದಲ್ಲಿ ಕನ್ನಡದ ಪ್ರತಿನಿಧಿಯಾಗಿ ಬೆಳಗಬಲ್ಲ ಕೆಲವೇ ಕೃತಿಗಳಲ್ಲಿ 'ಸಂಸ್ಕಾರ' ಒಂದಾಗಿದೆ ಎಂದು ಖಚಿತವಾಗಿ ಹೇಳಬಹುದು."

ಜಗತ್ತಿನ ಅತೀ ಹೆಚ್ಚು ಭಾಷೆಗಳಿಗೆ ಅನುವಾದವಾದ ಕನ್ನಡ ಸಾಹಿತ್ಯ ಕೃತಿಗಳಲ್ಲಿ ಮೊದಲನೇ ಸಾಲಿನಲ್ಲಿ ನಿಲ್ಲುವ ಸಂಸ್ಕಾರವನ್ನು ಆ ಕಾಲದಲ್ಲಿ ಅಂದರೆ 1970ರಲ್ಲಿ ದೃಶ್ಯ ಮಾಧ್ಯಮಕ್ಕೆ ತರಲು ಅಂದು ಧೈರ್ಯ ತೋರಿಸಿದ ನಿರ್ದೇಶಕ ಪಟ್ಟಾಭಿರಾಮ ರೆಡ್ಡಿಯವರಿಗೆ ಸೆಲ್ಯೂಟ್ ಹೊಡೆಯಲೇಬೇಕು. ಸಂಸ್ಕಾರ ಸಿನಿಮಾದಲ್ಲಿ ಹತ್ತು ಹಲವು ವಿಶೇಷಗಳೂ ಇವೆ. ಕನ್ನಡ ಸಾಹಿತ್ಯದ ಮೇರು ಶಿಖರ ಪಿ.ಲಂಕೇಶ್ ಮತ್ತು ಭಾರತೀಯ ರಂಗಭೂಮಿಯ ದೈತ್ಯ ಪ್ರತಿಭೆ ಗಿರೀಶ್ ಕಾರ್ನಾಡರು ಸಂಸ್ಕಾರದ ಎರಡು ವಿಭಿನ್ನ ಧ್ರುವಗಳಂತಿರುವ ನಾಯಕ ಮತ್ತು ಪ್ರತಿನಾಯಕ ಪಾತ್ರಗಳಲ್ಲಿ ಅಭಿನಯಿಸಿದ್ದರು. ಗಿರೀಶ್ ಕಾರ್ನಾಡರು ಪ್ರಾಣೇಶಾಚಾರ್ಯ ಎಂಬ ಸಾತ್ವಿಕ ಬ್ರಾಹ್ಮಣನ ಪಾತ್ರವನ್ನು ನಿರ್ವಹಿಸಿದ್ದರೆ ಲಂಕೇಶರು ಅವರ ನಿಜ ವ್ಯಕ್ತಿತ್ವಕ್ಕೆ ಒಪ್ಪಿ ಬರುವ ಧರ್ಮದ್ರೋಹಿ, ಬಂಡಾಯಗಾರ ನಾರಣಪ್ಪನ ಪಾತ್ರವನ್ನು ನಿರ್ವಹಿಸಿದ್ದರು. ನನಗೆ ಈಗಲೂ ಒಂದು ಅನುಮಾನವಿದೆ: ಸಂಸ್ಕಾರದಲ್ಲಿ ಪ್ರಾಣೇಶಾಚಾರ್ಯ ನಾಯಕನೋ ಅಥವಾ ನಾರಣಪ್ಪ ನಾಯಕನೋ...? ಕೊನೆಗೂ ನನಗೆ ವಾಸ್ತವದಲ್ಲಿ ಪ್ರತಿನಾಯಕ ಪಾತ್ರದಲ್ಲಿದ್ದ ನಾರಣಪ್ಪನೇ (ಲಂಕೇಶ್) ನಾಯಕ ಎಂದೆನಿಸುತ್ತದೆ. ಅದನ್ನು ಮುಂದೆ ಪ್ರತಿಪಾದಿಸುತ್ತೇನೆ.

ಲಂಕೇಶ್ ನಿಜಜೀವನದಲ್ಲಿ ಅಂದರೆ ಅವರ ಬಾಲ್ಯದಲ್ಲಿ ಪ್ಲೇಗ್ ಕಾಯಿಲೆಗೆ ತುತ್ತಾಗಿ ಬದುಕುಳಿದವರು. ಕುತೂಹಲದ ಸಂಗತಿಯೇನೆಂದರೆ ರಂಗದ ಮೇಲೆ ಅಂದರೆ ಸಂಸ್ಕಾರ ಸಿನಿಮಾದಲ್ಲಿ ಅವರು ಅದೇ ಪ್ಲೇಗ್‌ನಿಂದ ಸಾವನ್ನಪ್ಪುತ್ತಾರೆ. ಸಂಸ್ಕಾರದ ಪ್ರಾರಂಭದಲ್ಲೇ ಅವರು ಪ್ಲೇಗ್‌ಗೆ ಬಲಿಯಾಗಿ 'ಶವಸಂಸ್ಕಾರ'ವಾಗದೇ ಉಳಿದ ಹೆಣವಾಗಿರುತ್ತಾರೆ. ಒಬ್ಬ ಧರ್ಮದ್ರೋಹಿಯ ಶವಸಂಸ್ಕಾರದ ಕಾರಣವಾಗಿಯೇ ಹುಟ್ಟಿಕೊಳ್ಳುವ ಕತೆಯಲ್ಲಿ ಆತ ಜೀವಂತವಿರುವಾಗ ಬದುಕಿದ ಬಗೆಯನ್ನು ಚರ್ಚಿಸುತ್ತಾ ನಾರಣಪ್ಪನ ಬದುಕನ್ನು ಅಲ್ಲಿ ತೆರೆದುಕೊಳ್ಳಲಾಗುತ್ತದೆ. ಶೂದ್ರ ಸೂಳೆಯನ್ನು (ಚಂದ್ರಿ) ಇಟ್ಟುಕೊಂಡಿರುತ್ತಾನೆ, ಶರಾಬಿನ ದಾಸನಾಗಿರುತ್ತಾನೆ, ಮುಸ್ಲಿಮರ ಜೊತೆ ಕೂತು ಭೋಜನ ಸೇವಿಸುತ್ತಾನೆ. ಮಾಂಸಾಹಾರವನ್ನು ಇಷ್ಟಪಡುತ್ತಾನೆ. ಹೀಗೆ ನಾರಣಪ್ಪ ಧರ್ಮದ ಅರ್ಥಾತ್ ಬ್ರಾಹ್ಮಣ್ಯದ ಆಚಾರ, ವಿಚಾರಗಳನ್ನು ಗಾಳಿಗೆ ತೂರಿ ಮನಸೋ ಇಚ್ಛೆ ಬದುಕುತ್ತಾನೆ. 'ಸಂಸ್ಕಾರ' ಸಿನಿಮಾ ನೋಡುವಾಗ ಅನಂತಮೂರ್ತಿಯವರ ಬದುಕಿನುದ್ದಕ್ಕೂ ಅವರನ್ನು ತೊಳಲಾಡಿಸುವ ದ್ವಂದ್ವವು ನಮಗೆ ಕಾಣಸಿಗುತ್ತದೆ. ಹುಟ್ಟಿನಿಂದ ಓರ್ವ ಬ್ರಾಹ್ಮಣನಾಗಿಯೂ ಅನಂತಮೂರ್ತಿಯವರು ಸಂಸ್ಕಾರದ ನಾರಣಪ್ಪನಂತೆಯೂ ಬದುಕಿದ್ದಾರೆ, ಪ್ರಾಣೇಶಾಚಾರ್ಯನಂತೆ ಸಾತ್ವಿಕ ಜೀವನವನ್ನೂ ಸವೆಸಿದ್ದಾರೆ. ಆದರೆ ಪ್ರಾಣೇಶಾಚಾರ್ಯ ಮತ್ತು ನಾರಣಪ್ಪ ಎಂಬೆರಡು ಪಾತ್ರಗಳ ಮುಖಾಮುಖಿಯಂತೆಯೇ, ಅನಂತಮೂರ್ತಿಯವರ ಬದುಕಿನಲ್ಲೂ ದ್ವಂದ್ವವು ಮುಖಾಮುಖಿಯಾಗಿದ್ದನ್ನು ನಾವೆಲ್ಲಾ ಕಂಡಿದ್ದೇವೆ. ಅನಂತಮೂರ್ತಿಯವರ ಪತ್ನಿ ಎಸ್ತರ್ ಓರ್ವ ಕ್ರೈಸ್ತ ಮಹಿಳೆ, ಅನಂತಮೂರ್ತಿಯವರು ಶರಾಬು ಮತ್ತು ಮಾಂಸಾಹಾರ ಎರಡನ್ನೂ ಸೇವಿಸಿದವರು. ನಾರಣಪ್ಪ ಶೂದ್ರ ಚಂದ್ರಿಯ ಅಡುಗೆಯನ್ನು ಸೇವಿಸುತ್ತಿದ್ದಂತೆಯೇ ಅನಂತಮೂರ್ತಿಯವರು ಕ್ರೈಸ್ತ ಎಸ್ತರ್‌ರ ಅಡುಗೆಯನ್ನೇ ಸೇವಿಸುತ್ತಿದ್ದಾರೆ.

ಸಂಸ್ಕಾರ ಸಿನಿಮಾದಲ್ಲಿ ಕೊನೆಗೂ ಧರ್ಮಗೆಟ್ಟ ನಾರಣಪ್ಪನ ನಿಲುವುಗಳೇ ಸಾಮಾನ್ಯ ಮನುಷ್ಯನೊಬ್ಬನ ಅಂತರಂಗದ ದೃಢನಿಲುವಾಗಿ ಗೆಲ್ಲುತ್ತದೆ. ಸಾತ್ವಿಕತೆಯೆಂಬುವುದು ಪ್ರಾಣೇಶಾಚಾರ್ಯ ಗುಪ್ತವಾಗಿ ಧರ್ಮದ ಆಚಾರಗಳನ್ನು ಗಾಳಿಗೆ ತೂರಿ ಬದುಕುವ ಮೂಲಕ ಮುಖವಾಡವಾಗಿ ಮಾತ್ರ ಉಳಿಯುತ್ತದೆ. ಸಾತ್ವಿಕತೆ, ಧರ್ಮದ ನೀತಿಗಳನ್ನು ಮೀರುವುದು ಇವೆರಡ… ಒಂದುಗೂಡಿದಾಗ ಮಾತ್ರ ಕಲಿಯುಗದ ಸಾಮಾ… ಮನುಷ್ಯನೊಬ್ಬನ ಚಿತ್ರಣ ಸಿಗಲು ಸಾಧ್ಯ ಎಂಬುವುದನ… ಕೊನೆಗೂ ಸಂಸ್ಕಾರ ಸಾಧಿಸಿ ತೋರಿಸುತ್ತದೆ.


ಧರ್ಮಗೆಟ್ಟ ನಾರಣಪ್ಪ ಮ್ಲೇಚ್ಛ ಮುಸ್ಲಿಮರೊಂದಿ… ಊಟ ಮಾಡುವುದು ಮಾತ್ರವಲ್ಲ, ಆತನ ಶವಸಂಸ್ಕಾರ… ಅಗ್ರಹಾರದ ಬ್ರಾಹ್ಮಣರು ಧರ್ಮಶಾಸ್ತ್ರದ ಮೊರೆಹೊಕ್ಕು… ಮೀನ ಮೇಷ ಎಣಿಸುತ್ತಿರುವಾಗ ಆತನ ಮುಸ್ಲಿಂ ಸಖ… ಆತನ ಶವಕ್ಕೊಂದು ಗತಿ ಕಾಣಿಸುತ್ತಾರೆ. ಬದುಕಿರುವಾ… ತನಗಿಷ್ಟ ಬಂದಹಾಗೆ ಬಿಂದಾಸ್ ಆಗಿ ಬದುಕಿದ ನಾರಣ… ಒಂದು ವೇಳೆ ತನಗೆ ಬಹಿಷ್ಕಾರ ಹಾಕಿದರೆ "ಮುಸ್ಲ… ಮತಕ್ಕೆ ಸೇರುವೆ" ಎಂದು ಅಗ್ರಹಾರದ ಬ್ರಾಹ್ಮಣರಿ… ಸವಾಲು ಹಾಕಿ ಅವರನ್ನು ನಡುಗಿಸಿಬಿಡುತ್ತಾನೆ. ಹೀ… ಬ್ರಾಹ್ಮಣರಿಗೆ ಸವಾಲು ಹಾಕಿದ ನಾರಣಪ್ಪನ ಶವಸಂಸ್… ಕೊನೆಗೂ ಮುಸ್ಲಿಮರಿಂದಲೇ ಆಗುತ್ತದೆ.

ಬ್ರಾಹ್ಮಣ್ಯದ ಗೊಡ್ಡು ಸಂಪ್ರದಾಯಗಳನ್ನು ತೊರೆದ… ತನ್ನಂತೆ ಜೀವನದ ನಿಜಸುಖವನ್ನು ಅನುಭವಿಸಲು ಪ್ರಕಾಂ… ಪಂಡಿತ ಪ್ರಾಣೇಶಾಚಾರ್ಯರಿಗೆ ನಾರಣಪ್ಪ ಒಂದೊಮ್ಮೆ… ಆಹ್ವಾನ ನೀಡುತ್ತಾನೆ. ಕೊನೆಗೆ ಚಂದ್ರಿಯ ಮೊಲೆಗಳನ್ನು… ಆವೇಶಭರಿತವಾಗಿ ಹಿಸುಕುವ ಮೂಲಕ, ಆಕೆಯ… ತೊಡೆಯಲ್ಲಿ ಪವಡಿಸುವ ಮೂಲಕ, ಆಕೆಯನ್ನು… ಸಂಭೋಗಿಸುವ ಮೂಲಕ ಪ್ರಾಣೇಶಾಚಾಯ… ಪ್ರಜ್ಞಾಪೂರ್ವಕವಾಗಿಯೋ ಅಥವಾ… ಅಪ್ರಜ್ಞಾಪೂರ್ವಕವಾಗಿಯೋ ಬ್ರಾಹ್ಮಣ್ಯವನ್ನು ತೊರೆಯುತ್ತಾ… ಒಟ್ಟಿನಲ್ಲಿ ನಾರಣಪ್ಪನ ಸವಾಲು ಆತ ಸತ್ತ ನಂತರ ಆತ… ಸಖಿಯ ಮುಖಾಂತರ ಗೆಲ್ಲುತ್ತದೆ. ಸಂಪ್ರದಾಯ ಸೋ… ನಿಜಜೀವನ ಗೆಲ್ಲುತ್ತದೆ. ನಾರಣಪ್ಪನ ವಾದಗಳ… ಜಯಿಸುವುದರಿಂದ ಸಂಸ್ಕಾರದ ನಿಜ ನಾಯಕನಾಗಿ ನ… ಗೋಚರಿಸಿದ್ದು ನಾರಣಪ್ಪನೇ ಹೊರತು… ಪ್ರಾಣೇಶಾಚಾರ್ಯರಲ್ಲ. ನನಗೆ ಕೆಲವೊಮ್ಮೆ ಅನಿಸುವುದಿ… ಬಹುಶಃ ಭಾರತದಂತಹ ಸಂಪ್ರದಾಯಸ್ಥ ದೇಶದಲ್ಲಿ ಕೂ… ಅನಂತಮೂರ್ತಿಯವರಿಗೆ ಸಂಸ್ಕಾರ ಬರೆಯ… ಸಾಧ್ಯವಾಗಿಲ್ಲವೇನೋ? ಆದಕ್ಕಾಗಿಯೇ ಅವರು ದೂರ… ಬರ್ಮಿಂಗ್ ಹ್ಯಾಮ್‌ನಲ್ಲಿ ಕೂತು ಈ ಅದ… ಕಾದಂಬರಿಯನ್ನು ರಚಿಸಿದ್ದಿರಬಹುದು.

■ ಇಸ್ಮತ್ ಫಜೀರ…

ಬಲಿ

(ಒಂದು ಪ್ರಸ್ತುತ ಕಥಾ ಪ್ರಸಂಗ)



ಕೊರಳಿಗೆ ಹೂವಿನ ಹಾರವಿಲ್ಲ, ಹಣೆಯ ಮೇಲೆ ಲೇಪಿಸಿದ ಕುಂಕುಮವೂ ಇಲ್ಲ, ಎದೆಬಿರಿಯೆ ಬೊಬ್ಬಿಡುತ್ತಿರುವ ಡೋಲು, ತಮಟೆಗಳಿಲ್ಲ, ಉತ್ಸಾಹಿತ ಸಂಗೀತಗಾರರು ತಂತಮ್ಮ ಕೊರಳಿನ ರಕ್ತನಾಳಗಳನ್ನು ಅರಳಿಸಿ ಊದುವಂತಹ ವಾದ್ಯಗಳಿಲ್ಲ, ಜನಜಾತ್ರೆಯಿಲ್ಲ, [illegible] ಮೇಲೆ ಯಾರ ಹರಕೆಯೂ ಇಲ್ಲ, ವಿದ್ಯುದ್ದೀಪಗಳಿಂದ ಅಲಂಕೃತವಾದ ರಸ್ತೆಯೂ ಇಲ್ಲ, ದೃಷ್ಟಿಗೆಟುಕುವ ಯಾವುದೇ ದೇಗುಲ, ಭೂತದ ಮನೆಯಿಲ್ಲ, ಬೆಂಕಿಯನ್ನು ಪ್ರತಿಫಲಿಸುವಂತಹ ಅಂಚಿನ ಕುಡುಗೋಲಿಲ್ಲ, ದೊಡ್ಡ ಹೊಟ್ಟೆಯ ಕಟುಕನೂ ಇಲ್ಲ, ಬಲಿಪೀಠವೂ ಇಲ್ಲ.

ಇವುಗಳೆಲ್ಲರ ಬದಲಾಗಿ, ಕಲ್ಲುಮುಳ್ಳಿನ ಹಾದಿಯಲ್ಲಿ, ಅದೂ ಹಾದಿಯಲ್ಲದ ಹಾದಿಯಲ್ಲಿ ಕಳ್ಳಹೆಜ್ಜೆಗಳನ್ನು ಹೆಕ್ಕುತ್ತಾ, ಯಾವುದೋ ಭೂಗತ ಕಾರ್ಯದಂತೆ ನನ್ನನ್ನೆತ್ತಿಕೊಂಡು ಬಂದು, ಒಂದು ಮರದ ಬುಡಕ್ಕೆ ಕಟ್ಟಿ ಹಿಂದಿರುಗಿ ಹೋಗಿದ್ದಾರೆ; ಊರಿನ ಕೆಲವು ಗಂಡಸರು.

* * *

ಗುಡ್ಡದ ಮೇಲೆ ಕಟ್ಟಿ ಹಾಕಿದ ಹಾಲಿನ ಹಸುವೊಂದು ಹಗ್ಗದೊಂದಿಗೇ ಕಾಣೆಯಾಗಿತ್ತಂತೆ! ಮೇಯಲೆಂದು ಬಯಲಿಗೆ ಹೋದ ಎತ್ತಿನ ಪಕ್ಕೆಲುಬುಗಳು ಎಲ್ಲೆಲ್ಲೋ ಚದುರಿ ಬಿದ್ದಿದ್ದವಂತೆ! ಅಂಗಳದಲ್ಲಿ ಕಟ್ಟಿ ಹಾಕಿದ ನಾಯಿಯ ಸಂಕೋಲೆಯೊಂದಿಗೆ ಅದರ ರುಂಡ ಮಾತ್ರ ಉಳಿದಿತ್ತಂತೆ! ಬುಟ್ಟಿ ಹೆಣೆಯಲೋಸುಗ ಬಳ್ಳಿ ಕೀಳಲು ಹೋದ ದಲಿತ ಹೆಂಗಸಿನ ತಲೆಕೂದಲುಗಳು ಅದ್ಯಾವುದೋ ಪೊದೆಗೆ ಸಿಕ್ಕಿಹಾಕಿಕೊಂಡಿದ್ದವಂತೆ! ಮೊಲದ ಶಿಕಾರಿಗೆಂದು ಮಲೆಯೇರಿದವನೊಬ್ಬನ ಕಣ್ಣಿಗೆ ಅದೇನೋ ಕಂಡಿತ್ತಂತೆ; ಹಸಿರು ಎಲೆಗಳ ಸಂಧಿಯಲ್ಲಿ! ಅಷ್ಟೆ! ಎದ್ದೆನೋ ಬಿದ್ದೆನೋ ಎಂದು ಓಡಿಬಂದು ಏನೇನೋ ಒದರಿ ಎರಡು ದಿನಗಳು ಜ್ವರದಿಂದ ಮಲಗಿದನಂತೆ ಆತ. ಯಾರಿಗೇನು ಅರ್ಥವಾಯಿತೋ... ಅಂತೂ ಸುದ್ದಿಯ ಕೆನ್ನಾಲಿಗೆ ಊರವರ ಕಿವಿಗಳನ್ನು ಮನಸಾರೆ ನೆಕ್ಕಿತು–

"ಈ ಊರಿಗೆ ಹುಲಿಯ ಕಾಟವಿದೆ!"

* * *

ಹೇಗಾದರೂ ಮಾಡಿ ಹುಲಿಯನ್ನು ಹಿಡಿಯಲೇಬೇಕು. ಅದರ ಬಾಯಿಯಿಂದ, ಕೋರೆ ಹಲ್ಲುಗಳಿಂದ ಊರ ಮನುಷ್ಯರ, ಅವರ ಸಾಕುಪ್ರಾಣಿಗಳ ಪ್ರಾಣ ಕಾಪಾಡಬೇಕು. ಹೌದು, ಹುಲಿಯನ್ನು ಹಿಡಿಯಲೇಬೇಕು; ಅದೂ ಜೀವಂತವಾಗಿ! ಅದನ್ನು ಕೊಂದರೆ ತಮಗೆ ಜೈಲು. ಆದರೂ ಅದನ್ನು ಹಿಡಿಯಲೇಬೇಕು ಯಾರನ್ನಾದರೂ ಬಲಿ ಕೊಟ್ಟಾದರೂ ಸರಿಯೆ!

ಇಂತಹ ಯೋಚನೆಯುಳ್ಳ ಮನುಜರ ಕಣ್ಣಿಗೆ ಬಿದ್ದಿದ್ದೇ ನಾನು– ಒಂ… ರೋಗಿಷ್ಟ ಕುರಿಮರಿ. ಪುಡಿಗಾಸಿನ ಬೆಲೆಯಿಲ್ಲದ್ದು, ಮಾಂಸಕ… ಕೊಲೆಯಾಗದಿದ್ದದ್ದು! ಆದರೆ ಹುಲಿಗಿದು ತಿಳಿದಿರಬೇಕಲ್ಲ! ಬಂದ… ಬರಬಹುದು ಅದು ನನ್ನ ಮಾಂಸದಾಸೆಗೆ.

* * *

ಮಾರನೆಯ ದಿನ ನನ್ನನ್ನು ನೋಡಲೆಂದು ಬಂದ ಕೆಲ ಊರ… ಮುಖ ಬಾಡಿತ್ತು– ಹುಲಿ ಬರದೆ ನನ್ನ ಅಸ್ಥಿಪಂಜರಕ್ಕೆ ಏನೂ ಧಕ್ಕೆಯಾಗದ್ದ… ಕಂಡು. ಆದರಲ್ಲೊಬ್ಬ ತನ್ನ ಅಸಮಾಧಾನವನ್ನು ತೋಡಿಕೊಂಡ– "ಈ ಗತಿ… ಕುರಿಮರಿ ಬೊಬ್ಬೆಯೂ ಹೊಡೆಯೋದಿಲ್ಲ. ಅದರ ಬೊಬ್ಬೆ ಕೇಳಿಯಾದ… ಹುಲಿ ಬರುತ್ತಿತ್ತೋ ಏನೋ..."

ಮಗದೊಬ್ಬ ಉತ್ತರಿಸಿದ– "ಅದು ಬೊಬ್ಬೆ ಹೊಡೆಯದಿದ್ದು… ಒಳ್ಳೆಯದಾಯ್ತು ಬಿಡು. ಒಂದು ವೇಳೆ ಅದು ಬೊಬ್ಬೆ ಹೊಡೆದರೆ ಹ… ದಾಳಿ ಮಾಡಿತೆಂದೇ ಅರ್ಥವಲ್ಲವೇ!"

* * *

ಅಷ್ಟರಲ್ಲಿ...

ಮರಗಳ ಮರೆಯಲ್ಲಿ ಸರಸರನೆ ಸದ್ದು; ಹಕ್ಕಿಗಳ ಜೊತೆಗೆ ಹ… ಹರಿದಾಡಿದಂತೆ. ಯಾರೋ ಬರುತ್ತಿದ್ದಾರೆ....ಹುಲಿಯಿರಬಹುದೆ...

ಏನು ಕಾಣುವುದು...


ಅರೆಪ್ರಜ್ಞಾವಸ್ಥೆಯಲ್ಲಿದ್ದ ಹುಡುಗಿಯ ಬೆತ್ತಲೆ ದೇಹ.. ಪ್ರಾಣ ಕಿತ್ತುಹೋಗ… ವೇಳೆಯ ಕ್ಷೀಣ ಆಕ್ರಂದನ... ಮೈಯೆಲ್ಲಾ ಪರಚಿದ ಗಾಯಗಳು... ಕು… ಹಿಡಿದು ಎಳೆದು ತರುತ್ತಿವೆ– ನಾಲ್ಕೈದು ಗಂಡಸು [illegible]!!

ಅದುರಿಹೋದ ನಾನು ಬೊಬ್ಬಿಡುತ್ತೇನೆ– "ಬ್ಯೇ... ಬ್ಯೇ.... ಬ್ಯೇ...." ಬೊಬ್ಬೆ ಕೇಳಿ ಬೆಚ್ಚಿಬಿದ್ದ ಅವರಲ್ಲೊಬ್ಬ ಒಮ್ಮೆಲೆ ನಾನಿದ್ದಲ್ಲ ಧಾವಿಸಿ ಬಂ… ಸೊಂಟದಲ್ಲಿನ ಚಾಕು ಹೊರ ತೆಗೆದು ಕಚಕಚನೆ ನನ್ನ ಕತ್ತು ಸೀಳಿದ!

ಬಾಯಲ್ಲಿ ಹೊರಬೀಳಬೇಕಿದ್ದ ನನ್ನ ಧ್ವನಿ ಸೀಳಿದ ಗಂಟಲಿಂದಲೇ ಕೊನೆ… ಉಸಿರಾಗಿ ಹೊರಹೊಮ್ಮುತ್ತಿದೆ. ಆ ಕಡೆ ಹುಡುಗಿಯ ಆಕ್ರಂದನವೂ ಸ…

ಗಾಳಿಯಲ್ಲೀಗ ಉಸಿರಾಡುತ್ತಿರುವುದು ಬರಿಯ ನೆತ್ತರ ವಾಸನೆ!!

■ ವಿಲ್ಸನ್, ಕಟೀ…



ಭಾಷೆ ಆಡಿ ಮೋಡಿ ಮಾಡಿ

...ತುವಿಲ್ಲದೆ ಕೆಲಸದಲ್ಲಿ ಮಗ್ನರಾಗಿರುವವರು

...ಕಾರಣಿಗಳು!

...ವೇ ಇಲ್ಲದೆ ಬಿಡುವಾಗಿರುವವರು ಯಾರು?

...ತಿಗಳು!

...ನ್ನ ಸಾಕ್ಷಾತ್ಕಾರವಾಗುವುದು ಬಹಳವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ. ಇಂತಹ ...ದ ಯಾವುದೇ ಆಹ್ವಾನ ಪತ್ರಿಕೆ ತೆರೆದು ನೋಡಿ. ...ತುಂಬ ರಾಜಕಾರಣಿಗಳ ನಾಮಧೇಯಗಳು ...ಯುತ್ತಿರುತ್ತವೆ. ಹೀಗೆ ಇರುವುದು ನಮ್ಮ ಹಕ್ಕು ...ವರೆಲ್ಲರ ನಂಬಿಕೆ. ಒಂದು ವೇಳೆ ಇದಕ್ಕೆ ಲೋಪ ...ಬೇಕೆಂದೇ ಅವಮಾನ ಮಾಡಿದ್ದಾರೆ ಎಂದು ...ಯಲ್ಲಿ ರಾದ್ಧಾಂತ ಮಾಡುತ್ತಾರೆ, ವಿಧಾನಸಭೆ ... ಇಂತಹದ್ದಕ್ಕಾಗಿ ಎಂಬಂತೆ! ಹೆಸರನ್ನು ಅವರ ... ಪಡೆದೇ ಹಾಕಿದ್ದರೂ, ಅವರು ಗೈರುಹಾಜರಾದರೆ ...ಕ್ಕುಚ್ಯುತಿ ವ್ಯಾಪ್ತಿಯಿಂದ ಹೊರಗಿರುತ್ತದೆ!

...ಚೆಗೆ ಮಂಡ್ಯ ನಗರದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ...ನ ನಡೆಯಿತು. ಇಂತಹ ಸಮಾರಂಭಗಳು ...ಲೂ ವೇಳೆಗೆ ಸರಿಯಾಗಿ ನಡೆದುದಿಲ್ಲ, ಎಂದಿನ ...ಯುದಂತೆ ಅಂದೂ ಕಾರ್ಯಕ್ರಮ ಕೇವಲ ಎರಡು ...ತಡವಾಗಿ ಪ್ರಾರಂಭ ಆಯಿತು. ಸಮ್ಮೇಳನದ ...ಕರಾಗಿದ್ದ ಮಾನ್ಯ ಮಂತ್ರಿ ಮಹೋದಯರು ... ಗೌರವ'ದಿಂದಾಗಿ ಬರಲು ಸಾಧ್ಯವಾಗಿರಲಿಲ್ಲ. ... ತಿಳಿಸಲೂ ಅದೇ 'ಕಾರ್ಯ ಗೌರವ' ಅಡಚಣೆ ...ವಮಾಡಿತ್ತು. ಸಂಯೋಜಕರ ನಿರಂತರ ...ದಿಂದಾಗಿ ಮಾನ್ಯ ಸಚಿವರ ಆಪ್ತ ಸಹಾಯಕರು ... ಗೌರವ'ದಿಂದಾಗಿ ಮಾನ್ಯ ಮಂತ್ರಿಗಳ ಉಪಸ್ಥಿತಿ ... ಎಂಬ ಸುದ್ದಿ ಬಿತ್ತರಿಸಿದರು. ಆಹ್ವಾನ ಪತ್ರಿಕೆ ...ತುಂಬಿ ತುಳುಕುತ್ತಿದ್ದ ಯಾರಾದರೂ ಶಾಸಕರನ್ನು ... ಉದ್ಘಾಟನೆ ಅನ್ನೊ ಶಾಸ್ತ್ರ ಮುಗಿಸಿ ಬಿಡೋಣ ...ಯಾವ ಶಾಸಕನೂ ಪತ್ತೆ ಇರಲಿಲ್ಲ! 'ಬಿಡುವಿಲ್ಲದ ...ಕ್ರಮ' ಅವರ ಉಪಸ್ಥಿತಿಗೆ ಅಡ್ಡಿಯಾಗಿತ್ತು!

...ಯಕ್ಕೆ ಸರಿಯಾಗಿ ಹಾಜರಾಗಿದ್ದವರೆಂದರೆ ಏನೂ ...ಲ್ಲದೆ ಬಿಡುವಾಗಿದ್ದ ಸಾಹಿತಿಗಳು! ಅಂತೂಇಂತೂ ... ಸಾಹಿತಿಗಳಲ್ಲಿ ಒಬ್ಬರನ್ನು ಹಿಡಿದು ಉದ್ಘಾಟನೆ ...ಮಾಡಲಾಯಿತು. ಅದು ಹೇಗಾದರೂ ಇರಲಿ. ...ರಣಿಗಳೆಲ್ಲ ಕೆಲಸದ ಒತ್ತಡದಿಂದ, ಇಂತಹ ...ಕ್ರಮಗಳಿಗೆ ಹಾಜರಿರಬೇಕೆಂಬ ಹಂಬಲ ಇದ್ದರೂ, ...ಮಾಡಲು ಆಗುತ್ತಿಲ್ಲ. ಮಾಡಲು ಕೇಮೆಯೇ ಇಲ್ಲದ ...ಗಳು ಇಂತಹ ಸಮಾರಂಭ ನಡೆಯಲಿ ಎಂಬ ...ಯುಳ್ಳವರಾದ್ದರಿಂದ ವೇಳೆಗೆ ಸರಿಯಾಗಿ ...ರುತ್ತಾರೆಂದೂ ಮತ್ತೊಮ್ಮೆ ದೃಢೀಕರಿಸಲಾಯಿತು. ...ಡು ದಿವಸಗಳ ಸಮ್ಮೇಳನ ಅದು: ಮೊದಲನೆ ... ಅಳುತ್ತಾ ಹೋದ ಬಡ್ಡಿ ಆಡು ಕಾಯ್ತೊಳೆ ...ಸೂಚನೆ ಸಿಕ್ಕಿತ್ತಲ್ಲಾ, ಎರಡನೇ ದಿವಸದ ಸಂಗತಿಗಳನ್ನು ...ಬೇಕಾದ್ದೇ ಇಲ್ಲ. ಮೊದಲ ಗೋಷ್ಠಿ ಇದ್ದದ್ದು ...ಗಂಟೆಗೆ. ಮನೆಯಲ್ಲಿ ನಿದ್ದೆ ಮಾಡುವುದರ ... ಸಭಾಂಗಣದಲ್ಲೇ ಆ ಕೆಲಸ ಮಾಡಬಹುದಲ್ಲಾ

ಅಂತ ನಾನು ಗೆಳೆಯರೊಂದಿಗೆ ಸಮಯಕ್ಕೆ ಸರಿಯಾಗಿ ಹೋದೆ. ಕುರ್ಚಿಗಳೆಲ್ಲ ಖಾಲಿ ಇದ್ದವು. ಕುಳಿತು ಹರಟೆ ಹೊಡೆಯೋಣ ಅಂದರೆ ಆಗ ಸಭಾಂಗಣದ ಕಸ ಗುಡಿಸುತ್ತಿದ್ದರು. ನಾನು ನಿಂತೇ ಸುತ್ತ ಕಣ್ಣಾಡಿಸಿದೆ. ಕಾರ್ಯಕರ್ತರೊಬ್ಬರು ಹತ್ತಿರ ಬಂದರು. 'ಏನ್ಸಾರ್ ಈ ಹೊತ್ತಿಗೆ ಬಂದ್ರಿ' ಅಂದ್ರು. 'ಕಾರ್ಯಕ್ರಮ ಒಂಬತ್ತು ಗಂಟೆಗಲ್ವ' ಅಂದೆ. 'ಏನ್ಸಾರ್ ಎಲ್ಲಾ ತಿಳ್ಕೊಂಡೋರು ನೀವೇ ಹಿಂಗಂತೀರಿ. ಎರಡು ಮೂರು ದಿನ ಪ್ರೋಗ್ರಾಮ್ಸ್ ಎಲ್ಲ ಲೇಟಾಗಿ ಕಮೆನ್ಸ್ ಆಗ್ತವೆ ಅನ್ನೊ ಕಾಮನ್‌ಸೆನ್ಸ್ ಬೇಡವಾ ಸಾರ್' ಅಂದ. ವೇಳೆಗೆ ಸರಿಯಾಗಿ ಹೋದ ಅಪರಾಧಕ್ಕಾಗಿ ಕಾಮನ್‌ಸೆನ್ಸ್ ಇಲ್ಲದ ಪೆದ್ದುಗಳು ಎಂದು ಉಗಿಸಿಕೊಳ್ಳಬೇಕಾಯಿತು. ಅಂತೂಇಂತೂ ಎರಡನೆ ಗೋಷ್ಠಿ ಮುಗಿಯುವ ವೇಳೆಗೆ ಮೊದಲನೆ ಗೋಷ್ಠಿ ಪ್ರಾರಂಭ ಆಗುವ ಹಂತ ತಲುಪಿತ್ತು. ಹೇಗಿದ್ದರೂ ನಂತರದ ಗೋಷ್ಠಿಗಳಲ್ಲಿ ಭಾಗವಹಿಸುವವರಿಗೆ ಸಮಯ ಕಡಿತಗೊಳಿಸುವ ಸಂಪ್ರದಾಯವೇ ಇರುವುದರಿಂದ ಗೋಷ್ಠಿ ತಡವಾಗಿ ಪ್ರಾರಂಭಿಸಿದರೆ ಮುಂದಿನ ಗೋಷ್ಠಿಗಳಿಗೆ ಸಮಯ ಸಾಲುವುದಿಲ್ಲ ಎಂಬ ಆತಂಕವೇನೂ ಕಾರ್ಯಕರ್ತರಿಗೆ ಇದ್ದಂತಿರಲಿಲ್ಲ.

ಅಂತೂಇಂತೂ ಸಮಾರಂಭ ಪ್ರಾರಂಭ ಆಯಿತು. ಮೊದಲಿಗೆ ಇದ್ದದ್ದು ಪ್ರೀಯೂನಿವರ್ಸಿಟಿ ಮಕ್ಕಳಿಗೆ ಚರ್ಚಾ ಸ್ಪರ್ಧೆ. 'ಮಹಿಳಾ ಉದ್ಯೋಗಿಗಳು ಪುರುಷ ಉದ್ಯೋಗಿಗಳಿಗಿಂತ ಹೆಚ್ಚಿನ ಕಾರ್ಯಕ್ಷಮತೆ ಹೊಂದಿದ್ದಾರೆ' ಎಂಬ ವಿಷಯ ಕೊಟ್ಟಿದ್ದರು. ಮಹಿಳೆ ಪುರುಷರಿಗೆ ಸಂಬಂಧಿಸಿದ ವಿಷಯವಾದುದರಿಂದ. ಸ್ಪರ್ಧಿಗಳು ವೀರಾವೇಷ, ಭಾವಾವೇಷ ಇನ್ನೂ ಯಾವುಯಾವುದೋ ವೇಷಗಳಿಂದ ತಮ್ಮ ವಾದವನ್ನು ಗಂಟಲಿಳಿಸಿದರು. ಚರ್ಚಾಸ್ಪರ್ಧೆ ಮುಗಿಯುವ ಹಂತಕ್ಕೆ ಬಂತು. ಎರಡನೆ ಗೋಷ್ಠಿ ಜಿಲ್ಲೆಯ ಸಮಸ್ಯೆಗಳನ್ನು ಕುರಿತದ್ದಾಗಿತ್ತು, ಅದರಲ್ಲಿ ಭಾಗವಹಿಸಲು ಡಾ. ರಜಿನಿ ಬೆಂಗಳೂರಿನಿಂದ ಬಂದಿದ್ದರು. ಅವರು ಮಂಡ್ಯದವರು. ಮಂಡ್ಯದಲ್ಲೆ ಪ್ರೀಯೂನಿವರ್ಸಿಟಿಯ ವರೆವಿಗೂ ಓದಿ ನಂತರ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಮುಂದುವರೆಸಿದ್ದರು. ಅವರು ವೇಳೆಗೆ ಸರಿಯಾಗಿ ಬಂದಿದ್ದರಿಂದ ಚರ್ಚಾಸ್ಪರ್ಧಿಗಳ ವಾದಕ್ಕೆ ಬಲವಂತವಾಗಿ ಕಿವಿಯಾಗಬೇಕಾಯಿತು. ಎಲ್ಲವನ್ನೂ ಕೇಳಿದನಂತರ ಅವರು ನನ್ನ ಹತ್ತಿರ 'ಸಾರ್ ಈ ಮಕ್ಕಳ ಐಕ್ಯು ಲೆವೆಲ್ಲು ಪಿಯುನಲ್ಲಿದ್ದಾಗ ನಮಗೆಷ್ಟಿತ್ತೋ ಅಷ್ಟೇ ಇದೆ' ಅಂದರು!

ಡಾಕ್ಟರ್ ಅವರ ಈ ಮಾತು ನನಗೆ ಅನಿರೀಕ್ಷಿತವಾಗಿತ್ತು, ಈಗಿನ ಮಕ್ಕಳು ಬಲೇ ಚುರುಕು. ಬೆರಳು ತೋರಿಸಿದರೆ ಹಸ್ತಾನೆ ನುಂಗುತ್ತವೆ. ಬೆರಳ ತುದೀಲೆ ಮಾಹಿತಿ ಇಟ್ಟುಕೊಂಡಿರುತ್ತವೆ. ಅವರ ಐಕ್ಯೂ ಲೆವೆಲ್ ಯದ್ವಾತದ್ವಾ ಏರಿ ಹೋಗಿದೆ ಅಂತೆಲ್ಲ ಹೇಳುತ್ತಿರುತ್ತೀವಿ. ಡಾಕ್ಟರ್ ಮಾತು ಸತ್ಯವೇ ಆಗಿದ್ದರೆ ಬುದ್ಧಿಮತ್ತೆ ಅನ್ನೋದು ಯಾವುದೋ ಹಂತದಲ್ಲಿ ಸ್ಥಗಿತಗೊಳ್ಳುತ್ತಾ ಅನ್ನೊ ಆಲೋಚನೆಗೆ ಬಿದ್ದೆ.

ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾವಿನ್ನೂ ಚಿಕ್ಕ ಹುಡುಗರು. ನೆಹರು, ಪಟೇಲ್, ರಾಜೇಂದ್ರ ಪ್ರಸಾದ್ ಇಂತಹ ನಾಯಕರನ್ನು ನೋಡುವುದೂ ಒಂದೇ ದೇವರ ದರ್ಶನ ಪಡೆಯುವುದೂ ಒಂದೇ ಎಂದು ನಾವು ನಂಬಿದ್ದ ಕಾಲ ಅದು. ಇಂತಹ ನಾಯಕರು ಬಂದರೆ ಜನರು ಕಿಕ್ಕಿರಿದು ನೆರೆಯುತ್ತಿದ್ದರು. ಸಭಿಕರನ್ನು ನೋಡಿ ಪುಳಕಿತರಾದ ನಾಯಕರು ಮಾಡುತ್ತಿದ್ದ ಮೊದಲ ಕೆಲಸ ಅಂದರೆ ಜನರೆಡೆಗೆ ಕೈ ಬೀಸುವುದು, ನಂತರ ಭಾಷಣ. ಬಹಳವಾಗಿ ಅವರ ಭಾಷಣ ಹೀಗೆ ಪ್ರಾರಂಭ ಆಗುತ್ತಿತ್ತು! '...ಮಂಡ್ಯಾ ಜನತೆಗೆ ನಮಸ್ಕಾರ!' ದೇಶದ ನಾಯಕರ ಬಾಯಿಂದ ಹೊರಬಿದ್ದ ಕನ್ನಡ ನುಡಿಯಿಂದ ಪುಳಕಿತವಾದ ಸಭೆಯಾದ ಸಭೆ ಎಲ್ಲ 'ಹೋ' ಎಂದು ಹರ್ಷೋದ್ಗಾರ ಮಾಡುತ್ತಿತ್ತು, ಜೈಕಾರ ಮೊಳಗುತ್ತಿತ್ತು, ಇಡೀ ಸಭೆಗೆ ಅವರಲ್ಲಿ ಆತ್ಮೀಯತೆ ಬೆಳೆಯುತ್ತಿತ್ತು, ನಮ್ಮಲ್ಲಿ ಯಾರಿಗೂ 'ಮಂಡ್ಯದ ಜನರಿಗೆ ನಮಸ್ಕಾರ' ಅನ್ನುವುದರಲ್ಲಿ ಯಾವುದೂ ಅತಿಶಯ ಇಲ್ಲ; 'ಮಂಡ್ಯ ಜನತಾ ಕೊ ನಮಸ್ಕಾರ' ಅನ್ನುವುದಕ್ಕೂ ಅದಕ್ಕೂ ಏನು ಮಹಾ ವ್ಯತ್ಯಾಸ ಇರುವುದು ಅನ್ನುವ ಆಲೋಚನೆಯೇ ಬರುತ್ತಿರಲಿಲ್ಲ, ತಮಗೆ ತಿಳಿದಿರುವ ಲಿಪಿಯಲ್ಲಿ ಇದನ್ನು ಬರೆದು ಕೊಂಡು ಓದುತ್ತಿದ್ದಾರೆ ಅಥವಾ ಬಾಯಿಪಾಠ ಮಾಡಿ ಹೇಳುತ್ತಿದ್ದಾರೆ ಎಂಬ ಕಲ್ಪನೆಯೂ ನಮ್ಮ ಯಾರ ಬಳಿಯೂ ಸುಳಿಯುತ್ತಿರಲಿಲ್ಲ, ಕನ್ನಡದಲ್ಲಿ ಮಾತನಾಡಿದರಲ್ಲಾ ಎಂಬುದೇ ನಮಗೆ ಸಾಕಾಗಿತ್ತು, ಅವರ ಭಾಷಾ ಪ್ರಂಗಿಯ ಸಮ್ಮೋಹನಕ್ಕೆ ಒಳಗಾಗಿ ನಾವು ತಲೆದೂಗುತ್ತಿದ್ದೆವು.

ನೆಹರೂಯಿಂದ ಮೋದಿವರೆಗೆ ಹೂಡುತ್ತಿರುವುದು ಇದೇ ತಂತ್ರ, ಜನರ ಭಾಷಾ ಭಾವಕೋಶಕ್ಕೆ ಲಗ್ಗೆ ಹಾಕುವುದು. ಜನರ ಆಲೋಚನಾಶಕ್ತಿಯನ್ನೇ ಸ್ಥಗಿತಗೊಳಿಸುವುದು. ಸುಷ್ಮಾ ಸ್ವರಾಜ್ ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿದ್ದರು. ಬಳ್ಳಾರಿಯಿಂದ ಲೋಕಸಭೆಗೆ ಸ್ಪರ್ಧಿಸಿದ್ದಾಗ ಹತ್ತು ಹದಿನೈದು ನಿಮಿಷಗಳ ಕಾಲ ಕನ್ನಡದಲ್ಲಿ ಮಾತನಾಡಿದ್ದರು ಎಂದು ಮಾಧ್ಯಮಗಳಲ್ಲಿ ವರದಿಯಾಗುತ್ತಿತ್ತು, ಅದು ಎಂತಹ ಕನ್ನಡ ಅದು? ಸಂಸ್ಕೃತ ಭೂಯಿಷ್ಟ ಕನ್ನಡ, ಹೃದಯಕ್ಕೆ ಹೋಗದೆ ಕಂಠದಿಂದ ಹೊರಬಿದ್ದ ಕನ್ನಡ! ಕಂಠಪಾಠ ಮಾಡಿದ್ದ ಕನ್ನಡ! 'ಇನ್ನು ಮೂರು ತಿಂಗಳು ಸಮಯ ಕೊಡಿ ಸ್ವಚ್ಛ ಕನ್ನಡದಲ್ಲಿ ಮಾತನಾಡುತ್ತೇನೆ' ಎಂದು ಭರವಸೆ ನೀಡಿದ್ದರು ಅವರು. ತಾಯಿ ಮಕ್ಕಳ ಕಲಹ ಆಯಿತಂತೆ. ಬಳ್ಳಾರಿಗೆ ಬರುವುದನ್ನೇ ನಿಲ್ಲಿಸಿದರು.

ಸುಷ್ಮಾ ಸ್ವರಾಜ್ ಅವರು ಕನ್ನಡ ಮಾತನಾಡಿದ ವೈಖರಿಯನ್ನು ಇತ್ತೀಚೆಗೆ ಕನ್ನಡ ವಾಹಿನಿಯೊಂದರಲ್ಲಿ ಅದರ ಮುಖ್ಯಸ್ಥರು ಗೇಲಿ ಮಾಡಿದರು. ತಮಾಷೆಯ ಸಂಗತಿ ಎಂದರೆ ಇದೇ ವಾಹಿನಿಯ ವಾರ್ಷಿಕ ಸಮಾರಂಭ ನಡೆದಾಗ ಅಣ್ಣಾ ಹಜಾರೆ ಮುಖ್ಯ ಅತಿಥಿಗಳಾಗಿದ್ದರು. ಐವತ್ತು ಅರವತ್ತು ಪ್ರತಿಷ್ಠಿತರೊಂದಿಗೆ ಅವರ ಸಂವಾದ ಏರ್ಪಡಿಸಲಾಗಿತ್ತು, ಸುಷ್ಮಾ ಅವರನ್ನು ಗೇಲಿ ಮಾಡಿದ್ದ ವಾಹಿನಿ ಪದೇ ಪದೇ ಬಿತ್ತರಿಸುತ್ತಿತ್ತು, 'ಕನ್ನಡದಲ್ಲಿ ಮಾತನಾಡಿದ ಅಣ್ಣಾ' ಹಜಾರೆ ಅವರಿಗೆ ಕನ್ನಡ ಬರುತ್ತದೆಯೆ? ಇಲ್ಲ, ಬರದಿರುವುದು ಅಪರಾಧ ಅಲ್ಲ. ಅವರೂ ರಾಜಕಾರಣಿಗಳಂತೆಯೇ ಮೊದಲ ವಾಕ್ಯವನ್ನು ಕನ್ನಡದಲ್ಲಿ ಹೇಳಿದ್ದರು. ಅದು ವಾಹಿನಿಗೆ 'ಕನ್ನಡದಲ್ಲಿ ಮಾತನಾಡಿದ ಅಣ್ಣಾ' ಆಗಿ ಗೋಚರಿಸಿತ್ತು!

ಇಂತಹವರ ಮಾತುಗಳನ್ನು ಕೇಳಿದ ನಂತರವೂ 'ಕನ್ನಡದಲ್ಲಿ ಮಾತನಾಡಿದರು' ಅಂತ ಅವರ ಮಾತಿಗೆ ಮರುಳಾಗ್ತೀವಲ್ಲಾ... ನಮ್ಮೆಲ್ಲರ ಐಕ್ಯೂ ಲೆವೆಲ್ಲೂ ಸ್ಟ್ಯಾಗ್ನೆಂಟ್ ಆಗಿದೆಯಾ....

■ ಎಚ್ಚೆಲ್ಕೆ

ಲಿಂಗಾಯತ ಧರ್ಮವನ್ನು ಹೈಜಾಕ್ ಮಾಡಲಾಗಿದೆ



...ಳೆದ ವಾರ ರಂಜಾನ್ ದರ್ಗಾ ಅವರು ಬರೆದ 'ಲಿಂಗವಂತ ಧರ್ಮದಲ್ಲಿ ...ತು ಏನಿಲ್ಲ?' ಎಂಬ ಲೇಖನ ತುಂಬಾ ಅರ್ಥಪೂರ್ಣವಾಗಿ ಶರಣ ...ಗಳಿಗೆ ತಕ್ಕುದಾಗಿ ಮೂಡಿಬಂದಿತು. ಶರಣರ ನಿಜದ ನಿಲುವನ್ನು ... ಸ್ಪಷ್ಟವಾಗಿ ಅವರದೆ ವಚನಗಳನ್ನು ಉದಾಹರಿಸುವ ಮೂಲಕ ಲೇಖನವನ್ನು ...ದ್ದಾರೆ. ಆದರೆ ಇದನ್ನು ಅರಗಿಸಿಕೊಳ್ಳುವ ಶಕ್ತಿ ಇಂದಿನ ವೀರಶೈವ/...ಯತರಿಗೆ ಇಲ್ಲ. ಏಕೆಂದರೆ ಇಂದಿನ ಬಹುತೇಕ ವೀರಶೈವ/ಲಿಂಗಾಯತರು ...ಣ ವ್ಯವಸ್ಥೆಯ ಅಡಿಯಲ್ಲಿ ನಜ್ಜುಗುಜ್ಜಾಗಿ ಹೋಗಿದ್ದಾರೆ. ತಮ್ಮನ್ನು ... ಅರಿಯದ ಈ ಮುಗ್ಧ ಜನಾಂಗವನ್ನು ಲಿಂಗೋದ್ಭವವಾದಿಗಳು ಹೈಜಾಕ್ ...ಕೊಂಡು ತಮ್ಮ ಕಬ್ಜಾದಲ್ಲಿ ಇಟ್ಟುಕೊಂಡಿದ್ದಾರೆ.

...ಾವ ಧರ್ಮ ವೈದಿಕ ವಿರೋಧಿಯಾಗಿ ಹುಟ್ಟಿಕೊಂಡಿತ್ತೊ, ಜನಪರವಾದ ... ಕಾಯಕ ಯೋಗಿಗಳ ಧರ್ಮವಾಗಿತ್ತೋ ಅದು ಇಂದು ಹುಟ್ಟಾ...ಸ್ವರ ಪೂಜೆಯೇ ಕಾಯಕವೆಂದು ನಂಬಿಸುವವರ ಧರ್ಮವಾಗಿ ಹೋಗಿದೆ. ... ಅನಿಷ್ಟಗಳು ಲಿಂಗಾಯತದಲ್ಲಿ ಸುಳಿಯಬಾರದೊ ಅವೆಲ್ಲ ಅನಿಷ್ಟ...ಗಳು ಲಿಂಗಾಯತದಲ್ಲಿ ನುಸುಳಿ ಅದೊಂದು ಜಾತಿಯಾಗಿ ಮಾರ್ಪಟ್ಟಿದೆ. ...ದಿ ಶರಣರು ಕನಸಿದ ನಿಜವಾದ ಲಿಂಗಾಯತ ಮಾರ್ಗ ಜಗತ್ತಿಗೆ ...ಗ ಪರಿಚಯವಾದರೆ ಇದಕ್ಕಿಂತ ಮತ್ತೊಂದು ಪ್ರಜಾಪ್ರಭುತ್ವ ಹಾಗೂ ...ಕ ಧರ್ಮ ಮತ್ತೊಂದು ಇರಲಾರದು ಎಂದು ...ಗಾದರೂ ಮನದಟ್ಟಾಗುತ್ತದೆ.


...ಾಗೆಯೇ ಅವಿವೇಕಿಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ... ಸಾಹಿತ್ಯವನ್ನು ರಕ್ಷಿಸುವುದು ಪ್ರಜ್ಞಾವಂತರೆಲ್ಲರ ...ವಾಗಿದೆ. ದೋಷಮುಕ್ತ ವಚನಗಳು ಜನಸಾಮಾನ್ಯರಿಗೆ ... ಅದರಿಂದ ಜನಸಾಮಾನ್ಯರು ಮತ್ತಷ್ಟು ಗೊಂದಲಕ್ಕೆ ...ಗುವ ಸಾಧ್ಯತೆಯೆ ಹೆಚ್ಚು. ದರ್ಗಾ ಅವರು ಹೇಳಿರುವಂತೆ ...ರ್ವರ್ಣಾತೀತನೇ ವೀರಶೈವ' ಎಂಬ ಮಾತು ಸಿದ್ಧರಾಮೇಶ್ವರರ ವಚನದಲ್ಲಿ ಬಂದಿದ್ದರೆ ಖಂಡಿತವಾಗಿಯೂ ಇದನ್ನು ಯಾವ ವಚನ ಸಾಹಿತ್ಯ ಅಭ್ಯಾಸಿಯೂ ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ ವೀರಶೈವದಲ್ಲಿ ಇಂದು ಇದಕ್ಕೆ ಸಂಪೂರ್ಣ ವಿರುದ್ಧವಾದ ನಡಾವಳಿಗಳು ತುಂಬ ತುಳುಕುತ್ತಿವೆ. ಬಹುಶಃ ಇದು 'ಚಾತುರ್ವರ್ಣಾತೀತನೇ ಲಿಂಗವಂತ' ಎಂಬ ಪದವೇ ಅತ್ಯಂತ ಸೂಕ್ತವಾದುದು ಎಂಬುದರಲ್ಲಿ ಎರಡು ಮಾತಿಲ್ಲ.

ಮೊಸರಲ್ಲಿ ಕಲ್ಲು ಬಂದಂತೆ ಜನಪದರ ಜೀವಾಳವಾದ ವಚನ ಸಾಹಿತ್ಯದಲ್ಲಿ ಬರುವ ಸಂಸ್ಕೃತಶ್ಲೋಕಗಳು ಕಾಲಾನಂತರ ಸೇರಿಸಿದವುಗಳೇ ಸರಿ. 'ಕವಿ ಸಾಧಕರೆಲ್ಲ ಕಳವಳಿಸಿ ಕೆಟ್ಟರು. ವಿದ್ಯಾಸಾಧಕರೆಲ್ಲ ಬುದ್ಧಿಹೀನರಾದರು' ಎಂದು ಜರಿದು ಝಂಕಿಸಿದ ಶರಣರು ಸಂಸ್ಕೃತವನ್ನು ತಮ್ಮ ವಚನಗಳಲ್ಲಿ ಹೇಳುವ ಮೂಲಕ ಯಾರಿಗೂ ತಮ್ಮ ಪ್ರೌಢಿಮೆಯನ್ನು ತೋರಿಸುವ ಅಗತ್ಯವಿರಲಿಲ್ಲ, ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ ಎಂದು ಹಾಡಿದವರು. ತಲೆಯ ತಗ್ಗಿಸಿ ನೆಲನ ಬರೆಯುತ್ತಿದ್ದ ಕಾಯಕ ಜೀವಿಗಳಿಂದ ದಂದಣ ದತ್ತಣ ಎಂದು ಹಾಡಿಸಿದವರು ಅವರು. ಹೀಗಾಗಿ ಸಂಸ್ಕೃತ ಪದಗಳು ವಚನ ಸಾಹಿತ್ಯದಲ್ಲಿ ನುಸುಳಿರುವುದು ಪುರೋಹಿತಶಾಹಿಯ ತಂತ್ರವೆನ್ನದೆ ಅನ್ಯಮಾರ್ಗವಿಲ್ಲ.

ಬಸವಣ್ಣನವರ (ಡಾ.ಎಂ.ಎಂ.ಕಲಬುರ್ಗಿ ಸಂಪಾದಿಸಿದ) ವಚನ ಸಂಪುಟದ ಷಟಸ್ಥಲ ವಿಭಾಗದ 252 ವಚನ ಸಂಸ್ಕೃತ ಶ್ಲೋಕದ ಉದ್ಧರಣೆ, ಪ್ರೊ.ಶಿ.ಶಿ.ಬಸವನಾಳ 255 ನೇ ವಚನದಲ್ಲಿ ವ್ಯತ್ಯಾಸವಿದ್ದದ್ದನ್ನು ಯಾರಾದರೂ ಗಮನಿಸಬಹುದು. ಈ ಶ್ಲೋಕದ ಉದ್ಧರಣೆ ಇತಿಹಾಸದ ಚಿತ್ರವನ್ನೆ ಬದಲಿಸಬಲ್ಲದು ಎಂಬುದನ್ನು ರಂಜಾನ್ ದರ್ಗಾ ಗುರುತಿಸಿ ಎಲ್ಲರ ಕಣ್ಣು ತೆರೆಸಿದ್ದಾರೆ. ಸ್ವರವಚನಗಳ ಐತಿಹಾಸಿಕತೆಯ ಬಗೆಗೂ ಅವರು ಸತ್ಯವನ್ನು ತಿಳಿಸಿದ್ದಾರೆ. ತಿರುಚಲ್ಪಟ್ಟ ವಚನಗಳನ್ನೂ ವಚನ ಸಂಪುಟದಲ್ಲಿ ಸೇರಿಸುವುದರಿಂದ ನಿಜವಾದ ಓದುಗನಿಗೆ ಪುರೋಹಿತರ ತಂತ್ರಗಳು ಎಷ್ಟು ಆಳ-ಅಗಲ ಹಾಗೂ ಮುನ್ನೋಟದಿಂದ ಕೂಡಿರುತ್ತವೆ ಎಂಬ ಸತ್ಯ ಗೊತ್ತಾಗುತ್ತದೆ. ಅವರ ಸಜ್ಜನಿಕೆಯೂ ಪ್ರದರ್ಶನಕ್ಕೆ ಇಟ್ಟಂತೆ ಆಗುತ್ತದೆ. ಆದ್ದರಿಂದ ವಚನ ಸಂಪುಟ ಮತ್ತೆ ಕನ್ನಡಿಗರ ಕೈಗೆ ಸಿಗುವಾಗ ಇಂಥ ತಪ್ಪುಗಳು ಆಗದಂತೆ ಎಚ್ಚರ ವಹಿಸಬೇಕು ಎಂಬ ದರ್ಗಾ ಅವರ ಮಾತು ಅಕ್ಷರಶಃ ಸತ್ಯವಾಗಿದೆ.

■ ವಿಶ್ವಾರಾಧ್ಯ ಸತ್ಯಂಪೇಟೆ, ಶಹಾಪುರ


ಒಂದು ಪತ್ರ



ವಿಜ್ಞಾನವು ಸದಾ ದೊಡ್ಡ ಸುದ್ದಿಗಳನ್ನು ಮಾಡುತ್ತಲೇ ಇರುತ್ತದೆ. ಆದರೆ ಇದು ಸಾಮಾನ್ಯರ ಚರ್ಚೆಗಳ ಭಾಗವಾಗುವುದೇ ಇಲ್ಲ. ಸಾಮಾನ್ಯವಾಗಿ ವಿಚಾರಗಳು, ಗ್ರಹಿಕೆಗಳು ಸಾಹಿತ್ಯಿಕ ಸಂದರ್ಭಗಳನ್ನೇ- ಸಾಮಾಜಿಕವಾಗಿ ಪರಿಗಣಿಸುವುದುಂಟು. ವಿಜ್ಞಾನವನ್ನು ಕೇವಲ ಒಂದು ವರ್ಗದ ಭಾಷೆಯಾಗಿ -ಇದು ನಮ್ಮದಲ್ಲ ಎಂಬಂತೆ- ನೋಡುವುದೇ ಹೆಚ್ಚು. ಆದರೆ, ವಿಜ್ಞಾನವು ಸಮಾಜ ಬಯಸಿದರೂ ಬಯಸದಿದ್ದರೂ ಪ್ರಭಾವಿಸುವುದಂತೂ ಸತ್ಯ. ಸಾಮಾನ್ಯವಾಗಿ ಕಲಾವಿದರು ಅಥವಾ ಸಾಹಿತಿಗಳು ಬಹಳ ಪ್ರಸಿದ್ಧಿಗೆ ಬರುತ್ತಾರೆ, ಅವರಿಗೆ ಪಾರಿತೋಷಕಗಳು ಬರುವಷ್ಟರಲ್ಲಿ ಅವರು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುತ್ತಾರೆ. ಆದರೆ ವಿಜ್ಞಾನಿಗಳು ಪಾರಿತೋಷಕ/ಬಹುಮಾನಗಳು ಬಂದ ಮೇಲೆ ಎಲ್ಲರಿಗೂ ಪರಿಚಿತರಾಗುತ್ತಾರೆ. ವಿಜ್ಞಾನದ ಈ ಪರಿಧಿಯನ್ನು ದಾಟುವುದೇ ಇಲ್ಲಿನ ಕಾಲಂ ಆಶಯ. ಒಟ್ಟಿನಲ್ಲಿ ವಿಜ್ಞಾನವೂ ಸಾಮಾನ್ಯರ ಮಾತಿನ ವಿಷಯವಾಗಬೇಕು. ಅದರೊಳಗಿನ ಸತ್ಯವನ್ನು ಪವಾಡದಂತಹ ಗ್ರಹಿಕೆಯಿಂದ ದೂರ ತರಬೇಕು.

ಡಾ. ಟಿ.ಎಸ್.ಚನ್ನೇಶ್ ಅವರು ಎರಡು ವಾರಕ್ಕೊಮ್ಮೆ ಬರೆಯುವ ಈ ಕಾಲಂ ನಮ್ಮ ಓದುಗರಿಗೆ ಇಷ್ಟವಾಗುತ್ತದೆಂಬ ಆಶಯ ನಮ್ಮದು.

- ಲಂಕೇಶ್ ಬಳಗ




ಚನ್ನೇಶ್ ಅವರನ್ನು ಕುರಿತು

[illegible] ಸಂಬಂಧಗಳ ವಿದ್ಯಾರ್ಥಿ [illegible] ಅಧ್ಯಯನಗಳ ಆಸಕ್ತಿ

ವಿಜ್ಞಾನದ ಮಾರ್ಗದ ಸಂಚಲನಗಳು


ವಿಜ್ಞಾನಿ ಪದ ರೂಪಿಸಿದ ವಿಲಿಯಂ ವೇವಲ್


ಮಿಲೇಟಸನ್ ಥೇಲ್ಸ್


ಮೊದಲ ವಿಜ್ಞಾನಿ ಗೌರವದ ವಿಲಿಯಂ ಗಿಲ್ಬರ್ಟ್

ಕೆಲವು ವರ್ಷಗಳ ಹಿಂದೆ ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾಗಿನ ಸಂದರ್ಭ. ಅಲ್ಲಿದ್ದ ಸಾಹಿತ್ಯದ ಪ್ರೊಫೆಸರ್ ಒಬ್ಬರು ಖ್ಯಾತ ಬರಹಗಾರರು, ವಿಮರ್ಶಕರು ವಿಜ್ಞಾನಿಗಳ ಬಗ್ಗೆ ಮಾತಾಡುತ್ತಾ, ವಿಜ್ಞಾನಿಯಾದ ನನ್ನನ್ನೂ ಸೇರಿಸಿಕೊಂಡು 'ನೀವು ಬಿಡಿ ಎಲ್ಲಾ ಪೇಟೆಂಟ್ ಮಾಡಿಕೊಂಡಿರುತ್ತೀರಿ' ಎಂದರು. ಒಂದು ಅರ್ಥದಲ್ಲಿ ವಿಜ್ಞಾನಿಗಳು ಏನೂ ಹೇಳುವುದೇ ಇಲ್ಲ, ಹೇಳುವುದೇನಿದ್ದರೂ ಪೇಟೆಂಟ್ ದೃಷ್ಟಿಕೋನದಲ್ಲೇ ಎಂಬಂತೆ ಹೇಳಿದ್ದರು. ವಿಜ್ಞಾನಿಗಳು ಕೆಲಸ ಮಾಡುವುದೇನಿದ್ದರೂ ಅವರ ಲಾಭಕ್ಕೆ ಮಾತ್ರ ಎನ್ನುವ ಅರ್ಥದಲ್ಲಿ ಅಂದಿದ್ದರು. ಪೇಟೆಂಟಿನಿಂದ ಅದೆಷ್ಟು ವರ್ಷ ಏಕಸ್ವಾಮ್ಯ ಹೊಂದಿರುತ್ತಾರೆ, ಇತ್ಯಾದಿ ಸಂಗತಿಗಳೇನೂ ಅವರಿಗೆ ತಿಳಿಯದ್ದು. ಜತೆಗೆ ಓರ್ವ ಲೇಖಕ ತನ್ನ ಜೀವನಪೂರ್ತಿ ಕಾಪಿರೈಟ್ ಹೊಂದಿರುವುದಲ್ಲದೆ, ತಾನು ಸತ್ತ ಮೇಲೂ ಸಂಬಂಧಿಗಳಿಗೆ ಅಥವಾ ತನಗೆ ಬೇಕಾದವರಿಗೆ ಉಳಿಸಿಹೋಗುವುದೂ ಪೇಟಂಟಿನ ರೂಪವೇ ಎಂಬುದೂ ಅವರಿಗೆ ತಿಳಿದಿರಲಿಲ್ಲ. ಅದಕ್ಕೆ ನಾನು ಕೂಡಲೇ 'ಹೌದು, ನೀವು ನಿಮ್ಮ ಪುಸ್ತಕಗಳ ಕಾಪಿರೈಟ್ ಮುಕ್ತವಾಗಿಟ್ಟೀದ್ದೀರಾ?' ಎಂದು ಪ್ರಶ್ನಿಸಬೇಕೆಂದುಕೊಂಡೆ. ಆದರೆ ಅವರ ಹಿರಿತನಕ್ಕೆ ಸುಮ್ಮನಾದೆ. ವೈಜ್ಞಾನಿಕ ಅನ್ವೇಷಣೆಯಲ್ಲಿನ ಪೇಟೆಂಟುಗಳನ್ನು 7-8 ವರ್ಷಗಳವರೆಗೆ ಅಥವಾ ಹೆಚ್ಚೆಂದರೆ 20 ವರ್ಷಗಳವರೆಗೆ ಮಾತ್ರವೇ ಏಕಸ್ವಾಮ್ಯ ಕೊಡುತ್ತಿದ್ದು ಅಷ್ಟರೊಳಗೇ ಅದರಿಂದ ವ್ಯಾವಹಾರಿಕ ಉತ್ಪನ್ನಗಳಾಗಿಸಿ ಹಣಗಳಿಸಿದರೆ ಸರಿ. ಇಲ್ಲವಾದರೆ ಆ ವರ್ಷಗಳ ನಂತರ ಆ ಜ್ಞಾನ ಸಮುದಾಯದ ಪಾಲಾಗುತ್ತದೆ. ಆದರೆ ಗ್ರಂಥ ಸ್ವಾಮ್ಯ ಅಥವಾ ಕಾಪಿರೈಟ್ ಹಾಗಲ್ಲ, ಲೇಖಕ ಅಥವಾ ಕೃತಿಕಾರನ ಬದುಕಿನುದ್ದಕ್ಕೂ ಏಕಸ್ವಾಮ್ಯ ಹೊಂದಿದ್ದಲ್ಲದೆ, ಸತ್ತ ನಂತರವೂ 50 ರಿಂದ 60 ವರ್ಷ ಅದರ ಮೇಲಿನ ಹಕ್ಕುಗಳು ಕಾಯ್ದಿರಿಸಿರುತ್ತವೆ. ವಿಷಯ ಏನು ಅಂದರೆ ವಿಜ್ಞಾನದ ಸಂಗತಿಗಳನ್ನು ಒಂದೋ ತಮಗೆ ಕಷ್ಟ ಅಥವಾ ಅರ್ಥವಾಗದ್ದು ಎಂದೋ ಅಥವಾ ನಮ್ಮದಲ್ಲದ ಸಂಗತಿ ಎಂದೋ ದೂರವಾಗಿಟ್ಟೇ ನೋಡಲಾಗುತ್ತದೆ.

ರೇಡಿಯೋದಲ್ಲಿ ಚಿತ್ರಗೀತೆಗಳನ್ನು ಕೇಳಿರುತ್ತೀರಿ. ಪ್ರತೀ ಬಾರಿಯೂ ಆರಂಭಕ್ಕೆ ಮುಂಚೆ ಅಥವಾ ಮುಗಿದ ಮೇಲೆ ಕವಿಯ ಹೆಸರೂ ಮತ್ತು ಸಂಗೀತಗಾರರ ಹಾಗೂ ಹಾಡಿದ ಕಲಾವಿದರ ಹೆಸರು ಹೇಳಲಾಗುತ್ತದೆ. ಆದರೆ ನಾವು ಮನೆಯಲ್ಲಿ ವಿದ್ಯುತ್ ದೀಪ ಹಚ್ಚುವಾಗ ಸ್ವಿಚ್‌ಗೆ ಕೈ ಹಾಕಿದಾಗ ಮೇಖೆಲ್ ಫ್ಯಾರಡೆಯನ್ನೋ ಅಥವಾ ಎಡಿಸನ್ನನ್ನೋ ನೆನಪಿಸುವುದಿಲ್ಲ, ಇನ್ನು ಬೆಂಜಮಿನ್ ಫ್ರಾಂಕ್ಲಿನ್ ಅವರನ್ನು ನೆನಪಿಸುವುದಂತೂ ದೂರದ ಮಾತು ಬಿಡಿ. ಸಾಹಿತ್ಯದ ಮಾದರಿಗಳಲ್ಲಿ ಸಾಮಾಜಿಕವಾಗಿ ಪರಿಕಲ್ಪಿಸುವಾಗ ಕೃತಿಕಾರ ಅಥವಾ ಕಲಾವಿದನನ್ನು ಬಹು ಮುಖ್ಯವಾಗಿ ನೋಡುತ್ತೇವೆ. ಆದರೆ ವೈಜ್ಞಾನಿಕ ಸಂಗತಿಗಳಲ್ಲಿ ಅನ್ವೇಷಕ ಮುಖ್ಯನಾಗುವುದು ಇರಲಿ, ಅದು ಯಾರೆಂದು ಅದೆಷ್ಟೋ ಬಾರಿ ತಿಳಿದಿರುವುದೂ ಇಲ್ಲ, ಅಷ್ಟರಮಟ್ಟಿಗೆ ವಿಜ್ಞಾನ ಬಳಕೆ ಸುಲಭ, ಸಾರ್ವತ್ರಿಕ ಹಾಗೂ ಮುಕ್ತ.

ವಿಜ್ಞಾನವೆಂಬುದು ಸತ್ಯದ ಹುಡುಕಾಟದ ಪ್ರಕ್ರಿಯೆ. ಇದರಲ್ಲಿ ಸತ್ಯವು ಸಾರ್ವತ್ರಿಕವಾದದ್ದು, ಏಕಪ್ರಕಾರದ್ದೂ ಕೂಡ. ಕಲೆಯಂತೆ ವೈವಿಧ್ಯಮಯ ಗ್ರಹಿಕೆಗಳಲ್ಲ, ಹಾಗಾಗಿ ಇದರ ಮಾರ್ಗದಲ್ಲಿನ ಗ್ರಹಿಕೆಗಳೂ ಭಿನ್ನವಾದವೇ. ಜತೆಗೆ ವಿಜ್ಞಾನ ಹಾದಿಯಲ್ಲಿನ ಸಂಗತಿಗಳು ಸಾಮಾನ್ಯ ಅನುಭವಕ್ಕೆ ಕಾಣದಿರಬಹುದು. ಇಂತಹ ವಿಜ್ಞಾನದ ಹಾದಿಯಲ್ಲಿನ ಸಂಗತಿಗಳನ್ನು ಸಮಾಜೀಕರಣದ ಆಶಯದಿಂದ ಹಲವು ಅನುಭವಗಳನ್ನು ಪ್ರಸಕ್ತ ಸಂದರ್ಭದ ನೆನಪುಗಳೊಡನೆ ಅವುಗಳಲ್ಲಿನ ಸಂಚಲನಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಇದೀಗ ವಿಜ್ಞಾನದ ಸಂದರ್ಭದಲ್ಲಿನ ಸಂಗತಿಗಳನ್ನು ಬಹುಪಾಲು ಜೀವನಕ್ಕೆ ಒಂದು ಭದ್ರತೆಯ ಹಿನ್ನೆಲೆಯಲ್ಲಿಯೇ ನೋಡುವವರ ಸಂಖ್ಯೆ ಹೆಚ್ಚು, ಜತೆಗೆ ಒಂದು ಲಾಭದ ಹಿನ್ನೆಲೆಯಲ್ಲಿಯೂ ನೋಡುವವರ ಸಂಖ್ಯೆಯೂ ಹೆಚ್ಚು. ವಿಜ್ಞಾನವನ್ನು ತಂತ್ರಜ್ಞಾನಗಳ ಮೂಲಕವೇ ಸಮಾಜ ಹೆಚ್ಚು ಸ್ವೀಕರಿಸುವುದರಿಂದ ಇಂತಹ ಕಾರಣಗಳಲ್ಲಿ ವಿಜ್ಞಾನವು ಮುಂಚೂಣಿಯಲ್ಲಿರುತ್ತದೆ. ಆದರೆ ವಿಜ್ಞಾನವೂ ಸಹ ಸಾಮಾಜಿಕ ಅಧ್ಯಯನಗಳಂತೆ ಭಾವನಾತ್ಮಕ, ರೋಚಕ ಬೆರಗುಗಳ ಜತೆಗೆ ಜೀವನದ ಸರಳೀಕರಣ ಹಿನ್ನೆಲೆಯನ್ನು ಹೊಂದಿರುತ್ತದೆ. ಅಲ್ಲದೆ ಅದೆಷ್ಟೋ ಬಾರಿ ಏನೋ ಹುಡುಕಲು ಹೋಗಿ ಏನೋ ತಲುಪಿದಂತೆ ಆಗುವ ಸಂದರ್ಭಗಳೂ ಇವೆ. ಕಂಡೂಕೇಳಿರದ ಅನುಭವಗಳಿಗೇನೂ ಕೊರತೆಯಿಲ್ಲ, ಅಲ್ಲದೆ ಸಮಾಜವನ್ನು ಎದುರು ಹಾಕಿಕೊಳ್ಳುವ, ನಿಸರ್ಗಕ್ಕೆ ಭಿನ್ನವಾದ ಆಲೋಚನೆ ಅನ್ವೇಷಣೆಗಳಿಗೂ ಕೊರತೆಯಿಲ್ಲ, ಇಂತಹ ಅನೇಕ ಸನ್ನಿವೇಶಗಳ ಕಥನವು ಯಾವುದೇ ಲೌಕಿಕ ಅನುಭವಕ್ಕೂ ಕಡಿಮೆಯಿರದಂತೆ, ಇಂತಹದ್ದೂ ಸಾಧ್ಯವೇ ಎಂಬಂತಹ ವಿವರಗಳನ್ನೂ ಜತೆಗೆ ಮಾನವೀಯ ಮೌಲ್ಯದ ಅಪಾರ ಸಾಧ್ಯತೆಗಳನ್ನೂ ತನ್ನ ಮಡಿಲಲ್ಲಿಟ್ಟುಕೊಂಡೇ ವಿಕಾಸವಾಗುತ್ತಲಿದೆ. ಆದರೂ ಬಹುಪಾಲು ನಮ್ಮ ಸಾಮಾಜಿಕ ಸಂದರ್ಭದಲ್ಲಿ ವಿಜ್ಞಾನವನ್ನು ಕೇವಲ ತಂತ್ರಜ್ಞಾನ ಹಿನ್ನೆಲೆಗಳಲ್ಲಿ ನೋಡುತ್ತಾ ಖಳನಾಯಕನ ಸ್ಥಾನದಲ್ಲಿ ನಿಲ್ಲಿಸಿದ ಉದಾಹರಣೆಗಳೇ ಹೆಚ್ಚು, ಇಷ್ಟೆಲ್ಲಾ ಆತಂಕ ತಲ್ಲಣಗಳ ಮಧ್ಯೆಯೂ ಇವನ್ನೆಲ್ಲಾ ನಿರಂತರವಾಗಿ ಪೋಷಿಸುತ್ತಿರುವವರ ಸಾಮಾಜಿಕ ವರ್ಗವೂ ಸಹ ತಮ್ಮ ಮುಂದಿನ ಸಂತತಿಯ ಬೆಳವಣಿಗೆಯನ್ನು ವಿಜ್ಞಾನದ ಜತೆಯಲ್ಲೇ ನೋಡುವುದಂತೂ ಸೋಜಿಗವಾಗಿದೆ. ಬಹುಪಾಲು ಬಳಕೆದಾರರ ಹಿತದಲ್ಲಿ ವಿಜ್ಞಾನವು ಒಂದು ಲಾಭದ, ಕೆಲಸವನ್ನು ಕೊಡುವ, ಮುಂತಾದ ರೀತಿಯಲ್ಲೇ ನೋಡುವುದುಂಟು. ಆದಕ್ಕೇ ಇಂದಿನ ಸಮಾಜದಲ್ಲಿ ಎಲ್ಲರೂ ತಮ್ಮ ಮಕ್ಕಳನ್ನು ಡಾಕ್ಟರಾಗಿಯೋ, ಇಂಜನಿಯರ್ ಆಗಿಯೋ ಒಟ್ಟಾರೆ ವಿಜ್ಞಾನ ಓದಿನ ಹಿಂದೆಯೇ ಕಳಿಸಲು ಇಚ್ಛೆ ಪಡುತ್ತಾರೆ. ಅಷ್ಟರಮಟ್ಟಿಗೆ ವಿಜ್ಞಾನದ ಸಾಧ್ಯತೆಗಳು, ಜೀವನಕ್ಕೆ ನೆಮ್ಮದಿಯನ್ನು ಕೊಡುವ ಸಾಧನವಾಗಿದೆ. ವಿಜ್ಞಾನವು ಮಾನವರ ತಿಳಿವಿಗೆ ತಂದಿರುವ ಜ್ಞಾನವೇ ಅಗಾಧವಾಗಿದೆ. ಅದರ ಉದ್ದೇಶವೂ ಸಹ ಅಷ್ಟೇ ಜನಪರವಾಗಿದೆ. ಹಾಗಾಗಿ ಅದರ ಕುರಿತೂ ಇರುವ ಕುತೂಹಲಗಳು ಸಹ ಅನಂತ.


ವಿಜ್ಞಾನಿಯ ಮೂಲದ ಹುಡುಕಾಟ


ಈ ನೆಲದ ಮೇಲಿನ ಅನಂತ ಅರಿವುಗಳ ವಿಕಾಸದಲ್ಲಿ ವಿಜ್ಞಾನಿಗಳ ಪಾತ್ರ ಹಿರಿದು. ವಿಜ್ಞಾನ ಹುಟ್ಟು ಹಾಕಿರುವ ಅಗಾಧ ತಿಳಿವಿನ ಮೊದಲ ರುವಾರಿ ಯಾರು ಎಂಬ ಜಿಜ್ಞಾಸೆಯಲ್ಲಿ ಮೊದಲನೇ ವಿಜ್ಞಾನಿಯ ಹುಡುಕಾಟಕ್ಕೆ ಆರಂಭವಾಗುತ್ತದೆ. ಜಗತ್ತಿನ ಆಗುಹೋಗುಗಳ ತಿಳಿವಿನ ಹುಡುಕಾಟದ ಆದಿಯಲ್ಲಿ ಎಲ್ಲರನ್ನೂ ತತ್ವಶಾಸ್ತ್ರದ ಹಿನ್ನೆಲೆಯಲ್ಲಿಯೇ ನೋಡಲಾಗುತ್ತಿತ್ತು, ಇನ್ನೂ ಈಗ ಬಳಸಲಾಗುತ್ತಿರುವ ವಿಜ್ಞಾನಿ ಪದದ ಪರಿಚಯವೇ ಇರಲಿಲ್ಲ. "ವಿಜ್ಞಾನಿ" ಎಂಬ ಪದವನ್ನೇ ಮೊದಲಬಾರಿಗೆ 1834ರಲ್ಲಿ ರೂಪಿಸಿ ಬಳಸಿದವರು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ತತ್ವಶಾಸ್ತ್ರಜ್ಞ ಮತ್ತು ಚರಿತ್ರಕಾರರಾದ ವಿಲಿಯಂ ವೇವಲ್. ನಿಸರ್ಗ ಮತ್ತು ಭೌತ ಜಗತ್ತಿನ ರಚನೆ ಮತ್ತು ವರ್ತನೆಯನ್ನು ವೀಕ್ಷಣೆ ಮತ್ತು ಪ್ರಯೋಗಗಳ ಮೂಲಕ ಅಧ್ಯಯನ ಮಾಡುವವರ ಕುರಿತು ಈ ಪದವನ್ನು ಬಳಸಿದ್ದರು. ವಿಜ್ಞಾನಿ ಪದವನ್ನು ಕೊಟ್ಟ ವೇವೆಲ್ಲರೇ ಮೈಖೆಲ್ ಫಾರೆಡೇ ಅವರಿಗೆ ಆನ್‌ಅಯಾನ್, ಕ್ಯಾಟ್ ಅಯಾನು, ಮುಂತಾದ ಪದಗಳನ್ನು ಕೊಟ್ಟಿದ್ದರು. ಈ ವೇವೆಲ್ಲರ ಬಗ್ಗೆ ಮತ್ತೆ ಗಮನಿಸೋಣ.

ಹೆಚ್ಚೂ ಕಡಿಮೆ ವಿಜ್ಞಾನದ ಚರಿತ್ರೆಯ ಆ ಸಮಯದಲ್ಲಿನ ವ್ಯಕ್ತಿಗಳಲ್ಲಿ ಚಾರ್ಲ್ಸ್ ಡಾರ್ವಿನ್ ಅಥವಾ ಮೈಖೆಲ್ ಫ್ಯಾರಡೆ ಇಂತಹವರು ವಿಜ್ಞಾನಿಗಳು [illegible] ಭಾವನೆ ಬರುವುದು ಸಹಜ. ಆದರೂ ಮೊದಲ ವಿಜ್ಞಾ[illegible] ತಲುಪಲು ಕಾಲದ ಹಿಂದೆ ಹೋಗಬೇಕಾಗುತ್ತದೆ. ಇ[illegible] ಅಧ್ಯಯನಗಳನ್ನು ಮಾಡುತ್ತಿದ್ದವರಲ್ಲಿ ಮೊದ[illegible] ಅನೇಕರಿದ್ದರು. ಈ ಅನೇಕರ ಅಧ್ಯಯನಗಳೂ ಸಹ ನಿಸ[illegible] ಆಗುಹೋಗುಗಳ ಕುರಿತ ಹುಡುಕಾಟದಲ್ಲೇ ಇದ[illegible] ಹಾಗಾಗಿ ಕ್ರಿ.ಪೂ. 600ಕ್ಕೆ ತಲುಪಬೇಕಾಗುತ್ತದೆ. ಅಲ್ಲಿಂ[illegible] ಇಂತಹ ವ್ಯಕ್ತಿಗಳು ಕಾಣಬರುತ್ತಾರೆ ಎಂದು ಈ ಕಾಲ[illegible] ಯೋಚಿಸುವುದೂ ಆಶ್ಚರ್ಯವಾಗುತ್ತದೆ. ಮಾನವ[illegible] ಸುಮಾರು 28 ಶತಮಾನಗಳ ಹಿಂದೆಯೇ ವಿಜ್ಞಾ[illegible] ಕಂಡದ್ದು ಕೌತುಕವೇ! ಕ್ರಿ.ಪೂ. 624 ಮತ್ತು 5[illegible] ನಡುವಣ ಜೀವಿಸಿದ್ದ "ಮಿಲೇಟಸ್‌ನ ಥೇಲ್ಸ್" ಎಂಬು[illegible] ಮೊದಲ ಈ ಬಗೆಯ ಹುಡುಕಾಟಗಳನ್ನು ಆರಂಭಿಸಿ[illegible] ಆದರೂ ಅವರನ್ನು ವಿಜ್ಞಾನಿ ಎನ್ನುವುದಕ್ಕಿಂತ[illegible] ತತ್ವಶಾಸ್ತ್ರಜ್ಞರೆಂದೇ ಗುರುತಿಸಲಾಗಿದೆ. ಆಗಲೇ ವೈಜ[illegible] ಮತ್ತು ಗಣಿತೀಯ ವಿಚಾರಗಳಲ್ಲಿ ಹೆಸರು ಮಾಡಿದ್ದ ಇ[illegible] ಹೋಮರನಂತೆ ದಾಖಲೆಗಳ ನಿರ್ಮಿಸಿ ಹೆ[illegible] ಮಾಡಿದ್ದವರು. ಯೂಕ್ಲಿಡ್, ಟಾಲೆಮಿ ಅವರುಗಳೂ [illegible] ಇಂತಹ ಹುಡುಕಾಟದಲ್ಲಿ ತೊಡಗಿದ್ದವರು ಎಂಬು[illegible] ಎರಡು ಮಾತಿಲ್ಲದಿರಬಹುದು. ಆದರೆ ಅವರೆ[illegible] ತರ್ಕವನ್ನೇ ಮೂಲ ಆಶಯವಾಗಿ ನಂಬಿದ್ದವರು. ಥ[illegible] ಈ ವಿಚಾರದಲ್ಲಿ ಯೂಕ್ಲಿಡ್ ಟಾಲೆಮಿಯವರಿ[illegible] ಭಿನ್ನವಾಗಿ ಕಾರ್ಯ ಪ್ರವೃತ್ತರಾಗಿದ್ದರು. ಹಾಗಾಗಿ ವಿಜ[illegible] ಇತಿಹಾಸ ಥೇಲ್ಸ್ ಅವರಿಂಧ ಆರಂಭವಾಗು[illegible] ಮಿಲೇಟಸ್‌ನ ಥೇಲ್ಸ್ ನಮ್ಮಲ್ಲಿಯ ಸಪ್ತರ್ಷಿಗಳ [illegible] ಗ್ರೀಕರ ಸಪ್ತ ತತ್ವಶಾಸ್ತ್ರಜ್ಞರಲ್ಲೊಬ್ಬರೆಂದು ಗುರುತಿಸಲಾಗ[illegible] ಇವರನ್ನು "ನಿನ್ನ ನೀನರಿ (ಗ್ನೋಥಿ ಸಾಟನ್)" ರೂಪಕ[illegible] ಕೊಟ್ಟ ಮಹಾನುಭಾವನೆಂದು ಕರೆಯಲಾಗುತ್ತದೆ. "ಗ್ನೋಥಿ ಸಾಟನ್" ಅನ್ನು ಗ್ರೀಕ್‌ನ ಅಪಾ[illegible] ದೇವಾಲಯದ ಮುಂಭಾಗದ ಗೋಪುರದಲ್ಲಿ ಕೆತ್ತಲ[illegible] ನಮ್ಮನ್ನು ನಾವು ಅರಿತುಕೊಳ್ಳಬೇಕಾದ ಮಹತ್ವ[illegible] ಮೊದಲು ಸಾರಿದ ವ್ಯಕ್ತಿ ಇವರು. ನಮ್ಮ ಪರಂಪರೆಯ[illegible] 'ತತ್ವಮಸಿ' ಎಂಬುದು ಇದೆಯಲ್ಲಾ ಹಾಗೆ! ಅರಿಸ್ಟಾ[illegible] ಇವರನ್ನು ತತ್ವಶಾಸ್ತ್ರೀಯ ಪರಂಪರೆಯ ಆದಿಪುರುಷ[illegible] ಕರೆದಿದ್ದಾರೆ. ಇವರ ಮೂಲ ಬರಹಗಳು ಸಿಕ್ಕಿಲ್ಲ [illegible] ಹಾಗೆ ಬರಹ ರೂಪದಲ್ಲಿ ಇವರು ದಾಖಲು ಮ[illegible] ಇದೇ ಬಗೆಯ ಕಾರ್ಯವಿಧಾನವನ್ನು ಸಾಕ್ರಟಿಸ್ [illegible] ಮುಂದುವರೆಸಿದರು. ಅವರೂ ಕೂಡ ನೇರವಾಗಿ ಬರೆದವರಲ್ಲ. ಥೇಲ್ಸ್ ಸಮಬಾಹು ತ್ರಿಭುಜದ [illegible] ಕೋನಗಳೂ ಸಮವಾಗಿರುತ್ತವೆ ಎಂಬುದನ್ನು [illegible] ಸಿದ್ಧಾಂತೀಯ ಹರಿಕಾರರೆಂದು ಕರೆಯಲಾಗುತ್ತದೆ. ಹುಡುಕಾಟಗಳು ನಿಸರ್ಗದ ಶಕ್ತಿಗಳ ಕುರಿತದ್ದವೇ [illegible] ಅವುಗಳನ್ನು ನಿಸರ್ಗ ಮೀರಿದ ಶಕ್ತಿಯ ರೂ[illegible] ವರ್ಣನೆಯನ್ನು ಕೊಡುತ್ತಿರಲಿಲ್ಲ.

ಗೆಲಿಲಿಯೋ ಪೂರ್ವದ ವಿಲಿಯ[illegible] ಗಿಲ್ಬರ್ಟ್: ಮೊದಲ ವಿಜ್ಞಾನಿಯ ಗೌ[illegible]

ಆಧುನಿಕ ವಿಜ್ಞಾನದ ಬಳಕೆಯಲ್ಲಿ ವೈ[illegible] ವಿಜ್ಞಾನಿಯೆಂಬ ಗೌರವಕ್ಕೆ ಪಾತ್ರರಾದವರು ಯಾರು [illegible] ಪ್ರಶ್ನಿಸಿದರೆ ಸಾಮಾನ್ಯವಾಗಿ ಗೆಲಿಲಿಯೋ ಗೆಲಿಲೀ [illegible] ಉತ್ತರ ಸಹಜವೇನೋ. ಆದರೆ ನಿಜಕ್ಕೂ ಆಧುನಿಕ ವಿ[illegible]


ಗ್ನೋಥಿ ಸಾಟನ್ ಬರಹದ ಗ್ರೀಕ್‌ನ ಅಪೋಲೋ ದೇವಾಲಯ


ಗ್ನೋಥಿ ಸಾಟನ್ ಮೂಲ ಬರಹ

...ತನೆಯನ್ನೂ ಒಳಗೊಂಡ ಬಗೆಯ ಹುಡುಕಾಟದ ...ದರೆ "ವಿಲಿಯಂ ಗಿಲ್ಬರ್ಟ್". ವಿಜ್ಞಾನವೆಂದರೆ ...ವ ಸಾರ್ವತ್ರಿಕ ಸತ್ಯ. ಅದಕ್ಕೆ ಪ್ರಾಯೋಗಿಕ ...ವೆ. ಸೈದ್ಧಾಂತಿಕ ಬೆಂಬಲಗಳಿವೆ. ಇವೆಲ್ಲವನ್ನೂ ...ಸರ್ಗದ ಸತ್ಯದ ಹುಡುಕಾಟದ ಹಿಂದೆ ಬೆನ್ನು ...ದ ವ್ಯಕ್ತಿಯೇ ವಿಲಿಯಂ ಗಿಲ್ಬರ್ಟ್. ಗೆಲಿಲಿಯೋ 20 ವರ್ಷಗಳಷ್ಟೇ ಮೊದಲು ಹುಟ್ಟಿದ ...ನಾವ. "ಎಲೆಕ್ಟ್ರಿಸಿಟಿ" -ವಿದ್ಯುತ್- ಪದವನ್ನು ಬಳಸಿದಾತ. ವೈವಿಧ್ಯಮಯ ಕಾಂತಗಳ ಕುರಿತು ಅಧ್ಯಯನ ನಡೆಸಿದವರು. ಈತನ 'ದ ಮ್ಯಾಗ್ನೆಟ್' ...ಈ ಬಗೆಯಲ್ಲಿ ಮೊದಲ ಗ್ರಂಥವಾಗಿದೆ. ವಿಲಿಯಂ ಬಗೆಗೆ ಆ ಕಾಲದಲ್ಲೂ ಮತ್ತು ಈಗಲೂ ...ಇತಿಹಾಸದಲ್ಲಿ ವಿಶೇಷ ಸ್ಥಾನಗಳಿಲ್ಲ, ಅದೇಕೋ ...ರು ಮೊದಲಿಂದಲೂ ಗೆಲಿಲಿಯೋ ಕುರಿತೇ ...ನೆಗನ್ನು ಆರಂಭಿಸುತ್ತಾರೆ. ಈ ವಿಚಾರದಲ್ಲಿ ...ತಾದಾಪದವಿ ಪಡೆದಾತ. ಇತ್ತೀಚಿಗಿನ ಅಧ್ಯಯನ ...ಲಿಯಂ ಗಿಲ್ಬರ್ಟ್ ಕುರಿತೂ ತಿಳಿವು ಹೆಚ್ಚುತ್ತಿರು ...ಜ್ಞಾನದಲ್ಲಿ ಸತ್ಯಕ್ಕೆ ಕೊಡುತ್ತಿರುವ ಮಹತ್ವಗಳ

...ನದ ಸಮಾಜೀಕರಣದ ಹಂಬಲ

...ನಿಗಳು ಏನು ಮಾಡುತ್ತಾರೋ ಅದೇ ವಿಜ್ಞಾನ ... ವಿಜ್ಞಾನವನ್ನು ಮಾಡುವವರನ್ನು ವಿಜ್ಞಾನಿಗಳು ತಮಾಷೆಗೆ ಹೇಳುವುದುಂಟು. ವಿಜ್ಞಾನವೊಂದು ...ಹುಡುಕಾಟ! ಅದರಲ್ಲೂ ನಿಸರ್ಗದ ಆಗುಹೋಗು ...ವಿನ ಪರಿ. ಸತ್ಯದೊಳಗಣ ಸೌಂದರ್ಯದ ...ನ್ನು ಒದಗಿಸುವ ಮಾಧ್ಯಮ. ಈ ಲೇಖನ ಮೊದಲ ... ಹೇಳಿದ ಹಾಗೆ ವಿಜ್ಞಾನವನ್ನು ಯಾರಿಗೂ ಹೇಳದ, ...ಗದ, ಹೀಗೆ ವೈವಿಧ್ಯಮಯ ವ್ಯಂಜನಗಳಿಂದ ... ಅದರ ಸಮಾಜೀಕರಣದ ಉದ್ದೇಶವನ್ನು ...ಯುಲಾರರು. ಈ ರೀತಿಯ ಗುಮಾನಿಗಳನ್ನು ಕೊಟ್ಟಿರುವುದಕ್ಕೆ ಕಾರಣಗಳನ್ನು ಹುಡುಕುವ ... ಈಗ ಪ್ರಸ್ತುತವಲ್ಲ. ಕೇವಲ ಅದರ ಸಮಾಜದ ...ಕ್ಕೆ ಇರುವ ಹಾಗೂ ಇದ್ದ ಸಂಗತಿಗಳ ...ಗಳನ್ನಷ್ಟೇ ನೆನಪಿಸಿಕೊಳ್ಳುವುದಾಗಿದೆ. ಜತೆಗೆ ಈ ...ಲ್ಲಿ ಮಾನವತೆಯಂತೆ ಅದಕ್ಕೆ ಇರುವ ಚರಿತ್ರೆಯನ್ನೂ ...ವುದಾಗಿದೆ. ಕಾರಣ ನಾಗರಿಕ ಸಮಾಜದ ವಿಕಾಸದಲ್ಲಿ ... ಪಾತ್ರವನ್ನು ಮೆಚ್ಚದೆ ಇರುವುದಾದರೂ ಹೇಗೆ? ... ವಿಚಾರಗಳ ಮಧ್ಯೆಯೂ ದೈನಂದಿನ ...ಟುಗಳಲ್ಲಿ ವಿಜ್ಞಾನದ ವಿಚಾರಗಳ ಸಂವಹನ, ಚರ್ಚೆ ...ದಾದಷ್ಟು ಇಲ್ಲದಿರುವ ನೆನಪನ್ನೂ ಹೇಳದೆ ...ದು. ಈ ನೆಪದಲ್ಲಿ ಕಾಲದ ಆದಿಯಿಂದ ವಿಜ್ಞಾನವು ...ಟ್ಟಿರಬಹುದಾದ ನೆಮ್ಮದಿಯ ಕನವರಿಕೆಯ ಹಿತವೂ ...ಆಶಯದಲ್ಲಿದೆ.

...ಜ್ಞಾನವು ಒಂದು ವಿಶೇಷ ಜ್ಞಾನದ ಸ್ತರಗಳಲ್ಲಿ ...ಲ್ಲಿರುವಂತೆ ಸಮಾಜ ಬಿಂಬಿಸಿರುವುದು ನಿಜ. ...ಆದಕ್ಕೂ ಸಮಾಜೀಕರಣ ಹಂಬಲವಿರುವುದು ...ದು ಇಂದಲ್ಲ, ಸಾಕ್ರೆಟಿಸ್ ಕಾಲದಿಂದಲೂ ಇದೆ. ...ಸ್‌ರನ್ನೇ ವಿಜ್ಞಾನದ ಸಮಾಜೀಕರಣದ ಆದಿ ...ವೆನ್ನಬಹುದು. ಆತ ಹಾದಿ ಬೀದಿಯಲ್ಲಿ ಜನರನ್ನು ...ಕೊಂಡು ಹರಟೆ ಕೊಚ್ಚುತ್ತಿದ್ದ ಸಂಗತಿಗಳು ಆತನ ...ಜೀಕರಣದ ಹುಚ್ಚು ಎನ್ನದೆ ವಿಧಿಯಿಲ್ಲ. ಈ ಹಿಂದೆ ...ಸಿದ "ವಿಜ್ಞಾನಿ" ಪದವನ್ನು ಕೊಟ್ಟ ವಿಲಿಯಂ ...ಲ್ಲರ ಆಸಕ್ತಿಯಲ್ಲೂ ಕಾಣಬಹುದು. ಅವರ ...ಲೀನ ತತ್ವಶಾಸ್ತ್ರಜ್ಞ ಹಾಗೂ ಖ್ಯಾತ ಕವಿಯಾದ ...ಜ್‌ಗೆ ವಿಜ್ಞಾನವೂ ಪದಗಳನ್ನು ಸೃಷ್ಟಿಮಾಡಬಲ್ಲುದು ...ದಕ್ಕೆ ಸಾಕ್ಷಿಯಾಗಿ ಮೈಖೆಲ್ ಫಾರೆಡೆಗೆ ಆಯಾನ್, ...ಯಾನ್ ಮುಂತಾದ ಪದಗಳನ್ನು ಕೊಟ್ಟರು. ಈಗ ...ದರೆ ವಿಜ್ಞಾನದ ಪದ ಸಮೂಹವೇ ಒಂದು ದೊಡ್ಡ ...ಕ. ಅದರೊಳಗಿನ ಪದಕೋಶಕ್ಕೆ ಈ ವಿಶ್ವದ ಅರಿವಿನ ...ಯಾದಂತೆ ಪದಗಳೂ ಸೇರಿಕೊಳ್ಳುತ್ತಲೇ ಇವೆ. ...ರು ಡಾರ್ವಿನ್ ಅವರಿಗೂ ವಿಚಾರಗಳ ಚರ್ಚೆ ...ದವುಗಳ ಸಂಗತಿಗಳಿಗೆ ಆ ಕಾಲದ ಮಾರ್ಗದರ್ಶಕ ...ರು. ವಿಜ್ಞಾನ ಸಂವಹನ ಮತ್ತು ಜನಜೀವನದಲ್ಲಿ ...ಗಿದ್ದವರು. ತರ್ಕ, ಸಿದ್ಧಾಂತ, ಪ್ರಯೋಗ ಮುಂತಾದ ...ಲೆಗಳ ಸಾಧ್ಯತೆಯಿಂದ ಸಾರ್ವತ್ರಿಕ ಸತ್ಯವನ್ನು ಎಲ್ಲರ ...ಒಪ್ಪಿಸುವ ಜಾಣತನ ವಿಜ್ಞಾನದ ಜವಾಬ್ದಾರಿ. ...ಕಾಲಕ್ಕೆ ತಕ್ಕಂತೆ ವೈವಿಧ್ಯಮಯ ಆಯಾಮಗಳಿಂದ ...ಅರಿವಿನ ವಿಸ್ತಾರದಲ್ಲಿ ನಿರತವಾಗಿದೆ: ಇಪ್ಪತ್ತೈದಕ್ಕೂ ...ಶತಮಾನಗಳ ಕಾಲವನ್ನು ಈ ಅರಿವಿನ ವಿಸ್ತಾರಕ್ಕೆ ...ದ ಈ ಶಿಸ್ತು ಅಷ್ಟೇ ವಿಸ್ತಾರವಾದ ಅನಂತ ...ದು ವಿದ್ವಾಂಸರನ್ನು ಬಳಸಿ, ಬೆಳೆಸಿದೆ. ಹೆಚ್ಚೂ ಕಡಿಮೆ ...ಕಲಿಕೆಯೂ ಈ ಗುರಿಗಳ ಸಾಧ್ಯತೆಯ ಹಿಂದೆ ... ಬಯಕೆಯನ್ನು ಹೊಂದಿದೆ. ಇಂತಹ ಅಗಾಧ ...ಗಳ ಒಡನಾಡಿಗಳಾಗಿದ್ದ ಮೇಧಾವಿಗಳ ಮತ್ತು ...ಸತ್ಯ ಮತ್ತೆ ಸಂಗತಿಗಳನ್ನು ಸಮಾಜದ ಜತೆ ...ಸುವ ಸಂಗತಿಗಳು ಮತ್ತೆ ಮತ್ತೆ ಸಂವಾದವಾಗ

channeshts@gmail.com

ಬಸವಾದ್ವೈತ

ಬಸವಾದ್ವೈತವೇ ಲಿಂಗವಂತರ ತತ್ತ್ವಜ್ಞಾನ. ನಿಸರ್ಗರಹಸ್ಯವನ್ನು ತರ್ಕಬದ್ಧವಾಗಿ ಭೇದಿಸುವ ಮೂಲಕ ಬಂದ ಅರಿವಿನ ಮೇಲೆ ನಿಂತ ಈ ತತ್ತ್ವಜ್ಞಾನ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಇದಕ್ಕೆ 'ಚೈತನ್ಯಾತ್ಮಕ ಭೌತಿಕವಾದ' ಎಂದು ಕರೆಯಬಹುದು. ಈ ಜಗತ್ತು ಚೈತನ್ಯಮಯವಾಗಿದೆ ಎಂಬ ಸತ್ಯವನ್ನು ಅರಿಯಬೇಕು. ಅರಿತ ನಂತರ ಕಾಯಕಜೀವಿಯಾಗಿ ಪಡೆದದ್ದನ್ನು ದಾಸೋಹಂಭಾವದ ಮೂಲಕ ವಿನಿಯೋಗಿಸುತ್ತ ಅಸಹಾಯಕ ಜೀವಿಗಳ ದುಃಖ ನಿವಾರಣೆ ಮಾಡಬೇಕು. ಶಾಂತಿ, ಕರುಣೆ, ಸಮತೆ ಮತ್ತು ಸಮಾಧಾನಗಳೊಂದಿಗೆ ಸರ್ವರೊಳಗೆ ಒಂದಾಗುತ್ತ ವಿಶ್ವಪ್ರೇಮಿಯಾಗಿ ಬದುಕಬೇಕು. ಈ ಕ್ರಮದಲ್ಲಿ ಮಾನವರು ಸಮೂಹಪ್ರಜ್ಞೆಯನ್ನು ಹೊಂದಬೇಕು ಎಂದು ಈ ತತ್ತ್ವಜ್ಞಾನ ಸೂಚಿಸುತ್ತದೆ. ಹೀಗೆ ಬದುಕುವವರನ್ನು ಶಿವಸ್ವರೂಪಿಗಳು ಎಂದು ಕರೆಯಲಾಗುತ್ತದೆ.

ಜಗತ್ತು ದ್ವೈತವಾಗಿದೆ. ಅದೇರೀತಿ ನಮ್ಮೊಳಗೂ ದ್ವೈತವೇ ಇದೆ. ನಮ್ಮೊಳಗೆ ದ್ವೈತ ಇದೆ ಏಕೆಂದರೆ ನಾವು ಮತ್ತು ನಮ್ಮೊಳಗಿನ ದೇವರು ಬೇರೆ ಬೇರೆ! ಷಟ್‌ಸ್ಥಲಗಳ ಪ್ರಕಾರ ನಾವು ಇಡೀ ವಿಶ್ವದ ಜೊತೆ ಕೂಡುತ್ತ ಕೂಡುತ್ತ ಕೊನೆಗೆ ಐಕ್ಯಸ್ಥಲದಲ್ಲಿ ನಮ್ಮೊಳಗಿನ ದೇವರ ಜೊತೆ ಸಂಗಮವಾಗುವ ಮೂಲಕ ಬಸವಾದ್ವೈತವನ್ನು ಸಾಧಿಸಬೇಕಾಗುವುದು. ಹೀಗೆ ಲೋಕದ ಜೊತೆ 'ಕೂಡಲ'ವಾಗಿ ನಮ್ಮೊಳಗಿನ ಚೈತನ್ಯರೂಪಿ ದೇವರ ಜೊತೆ 'ಸಂಗಮ'ವಾಗುವುದೇ ಕೂಡಲಸಂಗಮ. ಅಂದರೆ ವಸ್ತು ಮತ್ತು ಚೈತನ್ಯದ ಸಂಗಮವೇ ಕೂಡಲಸಂಗಮ. ತದನಂತರ ಷಟ್‌ಸ್ಥಲವನ್ನೂ ಮೀರಿ ಸಪ್ತಸ್ಥಲವಾದ ನಿರವಯಸ್ಥಲವನ್ನು ಹೊಂದಿ ಬಯಲಾಗಬೇಕಾಗುವುದು.

"ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ,
ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ,
ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ,
ಮೆಲ್ಲಮೆಲ್ಲನೆ ಷಟ್‌ಸ್ಥಲವ ಮೀರಿ
ನಿರವಯಸ್ಥಲವನೆಯ್ದುವೆನಯ್ಯಾ
ಕೂಡಲಸಂಗಮದೇವಾ."

ಎಂದು ಬಸವಣ್ಣನವರು ವಿಶ್ವದಲ್ಲೇ ವಿಶಿಷ್ಟವಾದ ವ್ಯಕ್ತಿತ್ವವಿಕಸನದ ರಹಸ್ಯವನ್ನು ತಿಳಿಸಿದ್ದಾರೆ. ವ್ಯಕ್ತಿತ್ವ ವಿಕಸನವು ವೈಯಕ್ತಿಕವಾಗಿರುವುದಿಲ್ಲ, ಇನ್ನೊಬ್ಬರ ಮೇಲೆ ಪ್ರಭಾವ ಬೀರಲಿಕ್ಕಾಗಿಯೂ ಇರುವುದಿಲ್ಲ. ವ್ಯಕ್ತಿಯೊಬ್ಬ ತನ್ನ ಕ್ರಿಯೆಯ ಮೂಲಕ ಲೋಕಕಲ್ಯಾಣ ಮಾಡುತ್ತ ವ್ಯಕ್ತಿತ್ವವಿಕಸನ ಹೊಂದುವನೇ ಹೊರತಾಗಿ ಜ್ಞಾನ ಮತ್ತು ಸಂಪತ್ತನ್ನು ತನಗಾಗಿ ಗಳಿಸುವುದರ ಮೂಲಕ ಅಲ್ಲ. ಹೀಗೆ ಮೊದಲಿನ ಐದು ಸ್ಥಲಗಳಾದ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ ಮತ್ತು ಶರಣ ಸ್ಥಲಗಳಲ್ಲಿ ಮಾನವ ವಿಶ್ವಮಾನವನಾಗುತ್ತಾನೆ. ನಂತರ ಆರನೇ ಸ್ಥಲವಾದ ಐಕ್ಯಸ್ಥಲದಲ್ಲಿ ಹೊರಗೆ ಸ್ಥಿತಿಪ್ರಜ್ಞನಾಗಿ ಒಳಗೆ ಸ್ಥಿತಪ್ರಜ್ಞನಾಗಿ ಅಚ್ಚಲಿಂಗೈಕ್ಯದ ಅನುಭಾವ ಹೊಂದಿರುತ್ತಾನೆ. ಈ ಬದುಕಿನಲ್ಲಿ ಕ್ರಿಯಾಶೀಲವಾಗಿದ್ದುಕೊಂಡೇ 'ಮೋಕ್ಷ'ವನ್ನು ಸಾಧಿಸುವ ಕ್ರಮವಿದು. ಕೊನೆಗೆ ಸಪ್ತಸ್ಥಲದಲ್ಲಿ ಇಹಲೋಕಯಾತ್ರೆ ಮುಗಿಸಿ ಜೈವಿಕ ಪ್ರಕ್ರಿಯೆಯಂತೆ ಬಯಲಾಗುತ್ತಾನೆ. ಇದುವೆ ನಿರವಯಸ್ಥಲ.

ಹೀಗೆ ಬಸವಣ್ಣನವರು ನಿಸರ್ಗಸತ್ಯದ ಮೂಲಕ ಸಪ್ತಸ್ಥಲಗಳನ್ನು ಗುರುತಿಸಿದ್ದಾರೆ. ಮಾನವ, ಇಡೀ ವಿಶ್ವ ಮತ್ತು ದೇವರನ್ನು ಒಂದಾಗಿಸಿದ್ದಾರೆ. ದ್ವೈತದಿಂದ ಬಸವಾದ್ವೈತವನ್ನು ಸಾಧಿಸುವ ಮಾರ್ಗವಿದು. ಬಸವಾದ್ವೈತದಲ್ಲಿ ನಮ್ಮ ಮತ್ತು ನಮ್ಮೊಳಗಿನ ದೇವರ ಜೊತೆ ನೇರ ಸಂಬಂಧವಿಲ್ಲ. ನಾವು ನಮ್ಮೊಳಗಿನ ದೇವರನ್ನು ಕೂಡಬೇಕೆಂದರೆ ಏಕಾಂತದಿಂದ ಲೋಕಾಂತವನ್ನು ಸಾಧಿಸಲೇಬೇಕು. ಲೋಕವೇ ತಾನಾಗಬೇಕು. "ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನಾ?" ಎಂದು ಅಕ್ಕಮಹಾದೇವಿ ಕೇಳುತ್ತಾಳೆ. ಅಂದರೆ ಜೀವಕಾರುಣ್ಯದಿಂದ ಬದುಕಬೇಕು ಎಂದು ಸೂಚಿಸುತ್ತಾಳೆ. ಹೀಗೆ ಜೀವಕಾರುಣ್ಯದಿಂದ ಬದುಕುವ ಮೂಲಕ ಕ್ರಿಯಾಶೀಲರಾಗಿ ಲೋಕಕ್ಕೆ ಹಿತವನ್ನುಂಟುಮಾಡಬೇಕು. ಅಂದಾಗ ಮಾತ್ರ ನಾವು ನಮ್ಮೊಳಗಿನ ದೇವರ ಜೊತೆ ಒಂದಾಗುವ ಅರ್ಹತೆಯನ್ನು ಪಡೆಯುತ್ತೇವೆ.

ಹೊರಗಿನ ದ್ವೈತ ಮತ್ತು ಒಳಗಿನ ದ್ವೈತಗಳೆರಡೂ ಸಮಯಾಧೀನವಾಗಿವೆ. ಜಗತ್ತಿನ ಮೂಲತತ್ತ್ವವಾದ ಏಕತೆಯು ಅರಿವಾಗುವವರೆಗೆ ನಮ್ಮಲ್ಲಿ ದ್ವೈತವಿರುತ್ತದೆ. ವಿಶ್ವ ಬದುಕಿರುವವರೆಗೆ ವಿಶ್ವದಲ್ಲಿ ದ್ವೈತವಿರುತ್ತದೆ. ಅದ್ವೈತವಾದ ಅವಿನಾಶ ಚೈತನ್ಯವೇ ಎಲ್ಲದರ ಮೂಲ ಆಗಿರುವುದರಿಂದ ಕೊನೆಯಲ್ಲಿ ಎಲ್ಲವೂ ಬಯಲಾಗಿ ಚೈತನ್ಯಮಯವೇ ಆಗುವುದು. ಈ ಸತ್ಯವನ್ನು ತಿಳಿಸುವಂಥದ್ದೇ ಬಸವಾದ್ವೈತ.

"ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ" ಎಂದು ಬಸವಣ್ಣನವರು ತಿಳಿಸಿದ್ದಾರೆ. ಅವರು 'ನಾನೇ ದೇವರು' ಎಂಬುದನ್ನು ನಿರಾಕರಿಸುತ್ತಾರೆ. 'ನನ್ನೊಳಗೆ ದೇವರಿದ್ದಾನೆ' ಎನ್ನುತ್ತಾರೆ. ನಾವು ನಮ್ಮೊಳಗಿನ ದೇವರ ದಾಸರಾದಾಗ, ಆ ದೇವರೊಡನೆ ಒಂದಾಗುವ ಪ್ರಕ್ರಿಯೆ ಆರಂಭವಾಗುತ್ತದೆ. ಹೀಗೆ ನಮ್ಮೊಳಗೇ ಇರುವ ಸೃಷ್ಟಿಕರ್ತನ ಜೊತೆ ಒಂದಾಗುವ ಮೊದಲು, ಆತನ ಸೃಷ್ಟಿಯ ಭಾಗವಾಗಿರುವ ನಾವು ಇಡೀ ಸೃಷ್ಟಿಯ ಜೊತೆ ಒಂದಾಗಿರಬೇಕಾಗುತ್ತದೆ. ಸಕಲಜೀವಾತ್ಮರ ಜೊತೆ ಆತ್ಮಿಕವಾಗಿ ಒಂದಾಗುತ್ತ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ ಸ್ಥಲಗಳನ್ನು ದಾಟುವುದರೊಳಗೆ ಸಕಲಜೀವಾತ್ಮರಿಗೆ ಲೇಸನೇ ಬಯಸುತ್ತ ಏಕಾತ್ಮದಿಂದ ವಿಕಸನಗೊಂಡು ಲೋಕಾತ್ಮದ ಜೊತೆ ಅದ್ವೈತವನ್ನು



ಸಾಧಿಸಿರುತ್ತೇವೆ. ಕೊನೆಗೆ ಐಕ್ಯಸ್ಥಲವನ್ನು ತಲುಪಿದಾಗ ನಮ್ಮೊಳಗಿನ ಪರಮಾತ್ಮನೊಡನೆ ಅದ್ವೈತವನ್ನು ಸಾಧಿಸಿ ಅಚ್ಚಲಿಂಗೈಕ್ಯರಾಗುತ್ತೇವೆ. ಈ ತೆರನಾಗಿ ಅಚ್ಚಲಿಂಗೈಕ್ಯನಾದಾಗ ಏಕಾತ್ಮ, ಲೋಕಾತ್ಮ ಮತ್ತು ಪರಮಾತ್ಮವೆಲ್ಲ ಒಂದಾಗಿ ಬಸವಾದ್ವೈತವಾಗುತ್ತದೆ. ಹೀಗೆ ವ್ಯಷ್ಟಿಮಯ ಏಕಾತ್ಮವು ಸಮಷ್ಟಿಮಯ ಲೋಕಾತ್ಮವಾಗಿ ರೂಪುಗೊಂಡು ಪರಮಾತ್ಮನೊಡನೆ ಐಕ್ಯವನ್ನು ಸಾಧಿಸುತ್ತದೆ.

"ಅನಾದಿಯ ಮಗನು ಆದಿ, ಆದಿಯ ಮಗನತೀತ,
ಅತೀತನ ಮಗನು ಆಕಾಶ, ಆಕಾಶನ ಮಗನು ವಾಯು,
ವಾಯುವಿನ ಮಗನಗ್ನಿ, ಅಗ್ನಿಯ ಮಗನು ಅಪ್ಪು,
ಅಪ್ಪುವಿನ ಮಗನು ಪೃಥ್ವಿ,
ಪೃಥ್ವಿಯಿಂದ ಸಕಲ ಜೀವರೆಲ್ಲರು ಉದ್ಭವಿಸಿದರು ಗುಹೇಶ್ವರ"

ಎಂದು ಅಲ್ಲಮಪ್ರಭುದೇವರು ತಿಳಿಸಿದ್ದಾರೆ. ಸಕಲಜೀವಾತ್ಮರ ಹಾಗೆ ನಾವೆಲ್ಲ ಪೃಥ್ವಿಯಿಂದಲೇ ಜನಿಸಿದ್ದೇವೆ. ನಮ್ಮ ಜಾತಿ, ಕುಲ ಮುಂತಾದ ಭೇದಭಾವಗಳು ಕೃತಿಮವಾಗಿವೆ.

"ರೂಪಿಂಗೆ ಕೇಡುಂಟು, ನಿರೂಪಿಂಗೆ ಕೇಡಿಲ್ಲ
ರೂಪು ನಿರೂಪನೊಡಗೂಡುವ ಪರಿಯಂತು ಹೇಳಾ
ಅಸಂಬಂಧ ಸಂಬಂಧವಾಗಿ ಇದೆ.
ದೇಹ ಇಂದ್ರಿಯವೆಂಬ ಜಾತಿಸೂತಕವಿರಲು
ಗುಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ"

ಎಂದು ಅಲ್ಲಮಪ್ರಭುಗಳು ಅನಂತವಾದುದರ ಕಡೆಗೆ ಗಮನ ಸೆಳೆದಿದ್ದಾರೆ. ಕಣ್ಣಿಗೆ ಕಾಣುವಂಥದ್ದು ಅಂದರೆ ಹುಟ್ಟಿರುವಂಥದ್ದು ಸಾಯಲೇಬೇಕು. ಬಯಲಿನಿಂದ ಸೃಷ್ಟಿಯಾದ ಪೃಥ್ವಿಯಿಂದಲೇ ಎಲ್ಲವೂ ಮೂಡಿಬಂದಿವೆ. ನಾವೆಲ್ಲ ಮತ್ತೆ ಕೊನೆಗೊಂದು ದಿನ ಪೃಥ್ವಿಯ ಭಾಗವಾಗಿ ಹೋಗುತ್ತೇವೆ. ಒಂದು ದಿನ ಈ ಪೃಥ್ವಿ ಕೂಡ ಬಯಲಾಗುತ್ತದೆ. ಕೊನೆಗೊಂದು ದಿನ ಸೂರ್ಯ, ಚಂದ್ರರ ಸಮೇತ ಸಕಲ ನಕ್ಷತ್ರ, ಗ್ರಹ ಮತ್ತು ಉಪಗ್ರಹಗಳ ಸಮೇತ ಎಲ್ಲವೂ ಬಯಲಿನಲ್ಲಿ ಲೀನವಾಗುತ್ತವೆ. ಆ ಬಯಲೇ ಚೈತನ್ಯ.

ಈ ಪ್ರಕಾರ ಚೈತನ್ಯದಿಂದಾದ ಪ್ರತಿ ವಸ್ತುವಿಗೆ ಅಳಿವಿದೆ. ಆದರೆ ಅದರೊಳಗಿನ ಚೈತನ್ಯಕ್ಕೆ ಅಳಿವಿಲ್ಲ. ಪ್ರತಿವಸ್ತುವಿನ ಒಳಗಿನ ಚೈತನ್ಯವು ಕಾಯಕನಿರತ (ಕ್ರಿಯಾಶೀಲ)ವಾಗಿದೆ. ವಸ್ತು ತನ್ನ ಅಸ್ತಿತ್ವವನ್ನು ಕಳೆದುಕೊಂಡಾಗ ಮತ್ತೆ ಚೈತನ್ಯವಾಗಿ ಬಯಲಾಗುತ್ತದೆ.

"ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದು ಬಸವಣ್ಣನವರು ಹೇಳುತ್ತಾರೆ. ಇಲ್ಲಿ ಸ್ಥಾವರ ಎಂದರೆ ವಸ್ತು, ಜಂಗಮ ಎಂದರೆ ಅದರೊಳಗಿನ ಚೈತನ್ಯ. "ಸ್ಥಾವರ ಜಂಗಮ ಒಂದೇ" ಎಂದು ಬಸವಣ್ಣನವರು ಇನ್ನೊಂದು ವಚನದಲ್ಲಿ ಹೇಳುತ್ತಾರೆ. ಸ್ಥಾವರ ಎನ್ನಿಸಿಕೊಳ್ಳುವ ವಸ್ತು ಕೂಡ ಚೈತನ್ಯ ಎಂಬ ಜಂಗಮದಿಂದಲೇ ಆಗಿದೆ ಎಂಬುದು ಇದರರ್ಥ (ಜಂಗಮಕ್ಕೆ ಅನೇಕ ಅರ್ಥಗಳಿವೆ. ಚೈತನ್ಯ ಎಂಬುದು ಅವುಗಳಲ್ಲೊಂದು). ಹೀಗೆ ಚೈತನ್ಯವು ವಸ್ತುವಿನ ರೂಪ ತಾಳುತ್ತದೆ. ಆದರೆ ಅದರೊಳಗೆ ಚೈತನ್ಯವಾಗೇ ಉಳಿದುಕೊಳ್ಳುತ್ತದೆ. ಕಾಲದ ಕಟ್ಟಳೆಯ ಪ್ರಕಾರ ತನ್ನ ಆಯುಷ್ಯ ಮುಗಿದನಂತರ ವಸ್ತುವೊಂದು ಅಳಿದ ನಂತರ ಮತ್ತೆ ಚೈತನ್ಯವಾಗಿ ಮಾರ್ಪಡುತ್ತದೆ. ವಸ್ತುಜಗತ್ತು ಚೈತನ್ಯದೊಳಗೆ ಸೇರಿಕೊಳ್ಳುತ್ತ ಕೊನೆಗೆ ಬಯಲಾಗುವುದೇ ಕಾಸ್ಮಿಕ್ ಡ್ರಾಮಾ (ಲೀಲೆ). ಈ ವಸ್ತು ಮತ್ತು ಚೈತನ್ಯದ ಕಾರಣಪುರುಷನೇ ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ ಕೂಡಲಸಂಗಮದೇವ.

ಲಿಂಗಾಯತ ಧರ್ಮವನ್ನು ಶೂನ್ಯಧರ್ಮ ಅಥವಾ ಬಯಲಧರ್ಮ ಎಂದೂ ಕರೆಯಬಹುದು. ವೈಜ್ಞಾನಿಕ ಮನೋಭಾವದ ಸಮಾಜ ನಿರ್ಮಾಣದಲ್ಲಿ ಈ ಧರ್ಮ ಪ್ರಮುಖ ಪಾತ್ರ ವಹಿಸುತ್ತದೆ.

'ಲಿಂಗಾಂಗಸಾಮರಸ್ಯ'ದಲ್ಲಿ ಲಿಂಗವೆಂದರೆ ಚೈತನ್ಯ, ಅಂಗವೆಂದರೆ ವ್ಯಷ್ಟಿಯಿಂದ ಸಮಷ್ಟಿವರೆಗಿನ ವಸ್ತು, ವಸ್ತುರೂಪದಲ್ಲಿರುವ ನಾವು ಜಗತ್ತೆಂಬ ವಸ್ತುವಿನೊಂದಿಗೆ ತತ್ತ್ವಬದ್ಧವಾಗಿ ಮತ್ತು ಭಾವಪೂರ್ಣವಾಗಿ ಒಂದಾದಾಗ 'ಅಂಗ' ಆಗುತ್ತೇವೆ. 'ಲಿಂಗಾಂಗಸಾಮರಸ್ಯ'ವೆಂದರೆ ನಾವು ಸಕಲಜೀವಾತ್ಮರೆಂಬ ಜಗತ್ತನ್ನು ಒಳಗೊಂಡು ನಮ್ಮೊಳಗಿನ ಚೈತನ್ಯದ ಜೊತೆ ಒಂದಾಗುವುದು. ನಾವೇ ಅಂಗವೆಂದು ಭಾವಿಸುತ್ತ ನಮ್ಮೊಳಗಿನ ಚೈತನ್ಯರೂಪಿ ಲಿಂಗದ ಜೊತೆ ಒಂದಾಗುವುದು ಬಸವಾದ್ವೈತವಾಗಲಾರದು. ನಾವು ಸಕಲಜೀವಾತ್ಮರನ್ನು ನಮ್ಮೊಳಗೆ ಇಟ್ಟುಕೊಂಡಾಗ ಮಾತ್ರ ಲಿಂಗದ ಜೊತೆ ಸಾಮರಸ್ಯ ಸಾಧಿಸಲು ಸಾಧ್ಯ. ಇದುವೆ ಬಸವಾದ್ವೈತದ ವೈಶಿಷ್ಟ್ಯ.


ಸಕಲಜೀವಾತ್ಮರ ಸಂಬಂಧ ಬಂದಾಗ ಜಾತಿ, ವರ್ಣ, ವರ್ಗ ಮತ್ತು ಲಿಂಗಭೇದಗಳಷ್ಟೇ ಅಲ್ಲ ಜೀವಭೇದಗಳೂ ಹೊರಟುಹೋಗುತ್ತವೆ. ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ ಮತ್ತು ಜಲಚರಗಳು ಮೊದಲು ಮಾಡಿ ಈ ಪೃಥ್ವಿಯಲ್ಲಿ ಜನಿಸಿದ ಮರಗಿಡಗಳು ಕೂಡ ನಮ್ಮ ಕುಟುಂಬಕ್ಕೇ ಸೇರಿದವುಗಳಾಗುತ್ತವೆ. "ವಸುಧೈವ ಕುಟುಂಬಕಂ" (ಇಡೀ ಪೃಥ್ವಿ ಒಂದು ಕುಟುಂಬ) ಎಂದು ಮಾತನಾಡುತ್ತ ಸರ್ವಭೇದಗಳನ್ನು ಪಾಲಿಸುವವರಿಗೆ ಬಸವಾದ್ವೈತ ದೊಡ್ಡ ಸವಾಲಾಗಿದೆ. ಏಕೆಂದರೆ ಬಸವಾದ್ವೈತ ಎಂಬುದು 'ಇಡೀ ಪೃಥ್ವಿಯಲ್ಲಿನ ಜೀವಿಗಳೆಲ್ಲ ಒಂದೇ ಕುಟುಂಬ' ಎಂದು ಕ್ರಿಯಾಶೀಲವಾಗಿ ಹೇಳುವ ತತ್ತ್ವ ಎಂಬುದನ್ನು 12ನೇ ಶತಮಾನದ ಶರಣಸಂಕುಲ ಸಾಧಿಸಿ ತೋರಿಸಿದೆ. ಶರಣಸಂಕುಲದಲ್ಲಿ ಯಾವುದೇ ತೆರನಾದ ಭೇದಭಾವ ಇರಲಿಲ್ಲ.

ಧರ್ಮಸಂದೇಶ: 'ಒಬ್ಬನೇ ದೇವರು, ಒಂದೇ ವಿಶ್ವ ಒಂದೇ ಮಾನವ ಕುಲ. ಸಕಲಜೀವಾತ್ಮರ ಲೇಸನ್ನೇ ಬಯಸುತ್ತ ಸಮಾನತೆಗಾಗಿ ಕ್ರಿಯಾಶೀಲರಾಗುವುದು ಮಾನವರ ಕರ್ತವ್ಯ' ಎಂಬುದು ಲಿಂಗವಂತ ಧರ್ಮದ ಸಂದೇಶವಾಗಿದೆ. ಕಾಯಕವು 'ಧಾರ್ಮಿಕ ಕರ್ತವ್ಯ' ಎಂಬುದು ಪ್ರಮುಖವಾಗಿದೆ. ಇಲ್ಲಿ ಎಲ್ಲದಕ್ಕೂ ಮೂಲವಾದ ಕಾಯಕದಲ್ಲಿ ನಿರತರಾಗುವ ಮಾನವರಿಗೆ ಇಡೀ ಪ್ರಕೃತಿ ಮತ್ತು ಸಕಲಜೀವರಾಶಿಯ ಜೊತೆ ಒಂದಾಗುವ ದಾರಿ ಕಾಣತೊಡಗುವುದು. ಸೃಷ್ಟಿಕರ್ತನ ಸೃಷ್ಟಿಯಲ್ಲಿ ಇರುವವರೆಲ್ಲರೂ ಸಮಾನರು ಎಂಬ ಭಾವ ಮೂಡುವುದು. ದುಡಿದು ಪಡೆದದ್ದನ್ನು ದೇವರ ಪ್ರಸಾದವೆಂದು ಭಾವಿಸಿ ಎಲ್ಲರೊಡನೆ ಹಂಚಿಕೊಂಡು ತಿನ್ನುವ ಜೀವಕಾರುಣ್ಯದ ಧರ್ಮವಿದು.



■ ರಂಜಾನ್ ದರ್ಗಾ

ನಾನು ಕೊಂದಿದ್ದು ನರಭಕ್ಷಕನೇ





ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಆಗ ಸಂಜೆ ಐದು ಗಂಟೆಯಾಗಿತ್ತು, ಕೆಳಗಿದ್ದ ಪ್ರಾಣಿಯ ಕುತ್ತಿಗೆಯನ್ನು ಮುರಿದು ಹುಲಿ ಅರ್ಧ ತಿಂದಿತ್ತು. ಆದರೂ ರಾತ್ರಿಯ ಹೊತ್ತಿನ ಊಟಕ್ಕೆ ಸಾಕಾಗುವಷ್ಟು ಇನ್ನೂ ಉಳಿದಿತ್ತು. ಹುಲಿ ಮತ್ತೆ ಬರಬಹುದೇ ಅಥವಾ ನಾನು ಹುಸಿ ಭರವಸೆಯನ್ನಿಟ್ಟುಕೊಂಡಿದ್ದೆನೆ?

ಸುಮಾರು ಎಂಟುಗಂಟೆಯ ಹೊತ್ತಿಗೆ ಹುಲಿಯ ಆಗಮನದ ಸೂಚನೆಗಳು ಸಿಗತೊಡಗಿದವು. ಚುಕ್ಕಿಜಿಂಕೆಗಳು ತಮ್ಮ ಕೀರಲು ಧ್ವನಿಯಿಂದ ಮತ್ತು ಸಾರಂಗಗಳು ತಮ್ಮ ಒರಟುಧ್ವನಿಯಲ್ಲಿ ಕೂಗಿ ಹುಲಿ ಹತ್ತಿರದಲ್ಲಿದೆ ಎಂದು ಸಾರಿದವು. ನೆಲದಲ್ಲಿ ಹಾಸಿಹೋಗಿದ್ದ ಒಣಗಿದ ದಪ್ಪ ತೇಗದ ಎಲೆಗಳ ಮೇಲಿನ ಭಾರದ ಹೆಜ್ಜೆಯ ಸದ್ದು ಹುಲಿ ತನ್ನ ಬಲಿಯನ್ನು ಸಮೀಪಿಸಿದ್ದಕ್ಕೆ ಸಾಕ್ಷಿಯಾಗಿತ್ತು.

ನಾನು ನನ್ನ ಫ್ಲಾಶ್‌ಲೈಟಿನ ಬೆಳಕನ್ನು ಹುಲಿಯ ಮುಖಕ್ಕೆ ಬೀಳಿಸಿದೆ. ಹುಲಿ ನನ್ನತ್ತ ತಿರುಗಿತು. ಸುಮಾರು ಮೂರು ಸೆಕೆಂಡುಗಳು ಅದನ್ನೇ ನೋಡಿದ ಮೇಲೆ ನನಗೆ ಅದರ ಕುತ್ತಿಗೆಯಲ್ಲಿ ಉದ್ದ ಕೂದಲಿರುವ ಯಾವುದೇ ಗುರುತುಗಳು ಕಾಣಲಿಲ್ಲ. ಆದರೂ ಆಗ ನಾನು ಗುಂಡು ಹಾರಿಸಿದೆ ಸುಮ್ಮನಿರುವುದು ಸಾಧ್ಯವಿರಲಿಲ್ಲ. ಹಾರಿಸಿದ ಗುಂಡು ಹುಲಿಯ ಹೃದಯವನ್ನು ಹೊಕ್ಕು ಅದನ್ನು ಕೆಳಗೆ ಬೀಳಿಸಿತು.

ಹದಿನೈದು ನಿಮಿಷಗಳವರೆಗೆ ಕಾದು ಹುಲಿ ಸತ್ತಿರುವುದನ್ನು ಖಾತ್ರಿಪಡಿಸಿಕೊಂಡು ಮಚಾನಿನಿಂದ ಕೆಳಗೆ ಇಳಿದೆ. ಮತ್ತೊಮ್ಮೆ ಹುಲಿಯನ್ನು ಪರೀಕ್ಷಿಸಿ ನನ್ನಲ್ಲೇ ಗೊಣಗಿಕೊಂಡೆ. ಇದು ಕುತ್ತಿಗೆಯ ಸುತ್ತ ಉದ್ದ ಕೂದಲಿದ್ದ ನರಭಕ್ಷಕನಾಗಿರಲಿಲ್ಲ. ಛೇ, ಮತ್ತೊಮ್ಮೆ ನರಭಕ್ಷಕ ತಪ್ಪಿಸಿಕೊಂಡು ನಿರುಪಾಯಕಾರಿಯಾದ ಮತ್ತೊಂದು ಹುಲಿ ತನ್ನ ತಲೆದಂಡ ನೀಡಿತ್ತು. ಅದೂಅಲ್ಲದೆ ನರಭಕ್ಷಕನನ್ನು ಕೊಲ್ಲಲು ಮಾತ್ರ ನನಗೆ ಪರವಾನಗಿ ನೀಡಲಾಗಿತ್ತು. ಹಾಗಾಗಿ ನಾನು ಅರಣ್ಯ ಇಲಾಖೆಗೆ ಸಾಕಷ್ಟು ವಿವರಣೆ ನೀಡಬೇಕಾಗುತ್ತಿತ್ತು.

ಎಲ್ಲವನ್ನೂ ಯೋಚಿಸುತ್ತಾ ನಾನು ಚೋರಡಿಗೆ ಹೋಗುವ ದಾರಿಯಲ್ಲಿ ನನ್ನ ಕಾರನ್ನು ನಿರೀಕ್ಷಿಸುತ್ತಾ ಹೊರಟೆ. ಆದರೆ ಕಾರು ಸಿಗಲೇ ಇಲ್ಲ. ಪಾಪದ ಜನ, ನಾನು ಅರ್ಧ ಮೈಲು ತಳ್ಳಲು ಹೇಳಿದ್ದರೂ ಅವರು ಎರಡು ಮೈಲು ದೂರದ ಚೋರಡಿಯವರೆಗೂ ತಳ್ಳಿಕೊಂಡು ಹೋಗಿರಬೇಕು ಎನ್ನಿಸಿತು. ನಾನು ಅರಣ್ಯಾಧಿಕಾರಿಯ ಮನೆಗೆ ಬಂದು ವಿಷಯವನ್ನು ತಿಳಿಸಿದೆ. ಕೊಂದ ಹುಲಿ ನರಭಕ್ಷಕನಲ್ಲವೆಂದೂ ಹೇಳಿದೆ. ಆದರೆ ಅವರು ಒಪ್ಪಲಿಲ್ಲ. ಇದೇ ಏಕೆ ನರಭಕ್ಷಕನಾಗಿರಬಾರದು? ಇತ್ತೀಚಿನ ಎರಡು ವರ್ಷಗಳಲ್ಲಿ ಅದರ ಕುತ್ತಿಗೆಯ ಉದ್ದ ಕೂದಲು ಏಕೆ ಉದುರಿ ಹೋಗಿರಬಾರದು? ಅಥವಾ ಅದಕ್ಕೆ ಆ ರೀತಿಯ ಕೂದಲು ಮೊದಲಿನಿಂದಲೂ ಇರದೆ ಜನರಲ್ಲಿ ಸುಳ್ಳು ನಂಬಿಕೆ ಇದ್ದಿರಲು ಏಕೆ ಸಾಧ್ಯವಿಲ್ಲ?-ಎಂದೆಲ್ಲಾ ಅರಣ್ಯಾಧಿಕಾರಿ ವಾದಿಸಿದರು. ನನಗೆ ಇವು ಪೂರ್ಣ ಸಮ್ಮತವಾಗಲಿಲ್ಲ.

ನಾನು ನನ್ನ ಕಾರು ಎಲ್ಲಿದೆ ಎಂದು ಕೇಳಿದೆ. "ಸಾರ್ ನೀವು ಅರ್ಧ ಮೈಲು ದೂರ ತಳ್ಳಲು ಹೇಳಿದ್ದಿರಲ್ಲವೇ. ನಮಗೆ ಕಾರನ್ನು ಚೋರಡಿಯ ಕಡೆ ತಿರುಗಿಸಲು ಗೊತ್ತಿರಲಿಲ್ಲ. ಹಾಗಾಗಿ ಅದರ ವಿರುದ್ಧ ದಿಕ್ಕಿನಲ್ಲಿ ಅರ್ಧ ಮೈಲು ತಳ್ಳಿಕೊಂಡು ಹೋಗಿ ನಿಲ್ಲಿಸಿದ್ದೇವೆ!" ಅರಣ್ಯಾಧಿಕಾರಿ ಹೇಳಿದ.

ಸರಿ ಜೀವನವೇ ಹೀಗೆ, ಏರಿಳಿತಗಳಿದ್ದೇ ಇರುತ್ತವೆ ಎಂದುಕೊಂಡೆ. ಆದರೆ ಇವತ್ತು ಮಾತ್ರ ಇಳಿತಗಳೇ ಜಾಸ್ತಿಯಾಗಿತ್ತು.

ನಾವು ಜನರನ್ನು ಮತ್ತು ಸಲಕರಣೆಗಳನ್ನು ಸೇರಿಸಿಕೊಂಡು ಹುಲಿಯ ಶವವನ್ನು ಹೊತ್ತು ತರಲು ವ್ಯವಸ್ಥೆ ಮಾಡಿದೆವು. ನಾನು ಕಾರನ್ನು ಹುಡುಕಿಕೊಂಡು ಹೊರಟೆ. ಅದು ಮತ್ತೊಂದು ದಿಕ್ಕಿನಲ್ಲಿ ಸರಿಯಾಗಿ ಅರ್ಧಮೈಲು ದೂರದಲ್ಲಿ ಸಿಕ್ಕಿತು!

ಮರುದಿನ ನಾನು ಹುಲಿಯ ಚರ್ಮವನ್ನು ಬಿಡಿಸುವಷ್ಟರಲ್ಲಿ, ಅರಣ್ಯಾಧಿಕಾರಿಗಳು ತಮ್ಮ ವರದಿಯನ್ನು ತಯಾರಿಸಿದರು. ನಾನು ಕೊಂದ ಹುಲಿಗೆ ಉದ್ದಕೂದಲು ಇರಲಿಲ್ಲ, ಹಾಗಾಗಿ ಅದು ನರಭಕ್ಷಕನಲ್ಲದೇ ಇರಬಹುದೆಂದು ಅವರು ವರದಿ ಮಾಡಿದರು. ಜೊತೆಗೆ ಅಗತ್ಯವಿರುವ ಮುಂದಿನ ಕ್ರಮವನ್ನು ಕೈಗೊಳ್ಳುವ ತೀರ್ಮಾನವನ್ನು ಮೇಲಧಿಕಾರಿಗಳಿಗೆ ಬಿಟ್ಟಿದ್ದರು. ತಾವು ಈ ರೀತಿಯ ವರದಿ ಕಳಿಸಬೇಕಾದ ಅನಿವಾರ್ಯತೆಗಾಗಿ ನನ್ನ ಕ್ಷಮೆ ಕೇಳಿದರು.

ನಾನು ನನ್ನ ರಜ ಮುಗಿಯುವವರೆಗೆ ಅಲ್ಲಿಯೇ ಉಳಿದೆ. ಆದರೆ ಬೇರೆ ಯಾವ ಬಲಿಪಶುಗಳ ಮೇಲೆ ಹುಲಿ ಆಕ್ರಮಣ ಮಾಡಲಿಲ್ಲ; ಈ ಮಧ್ಯೆ ನನಗೆ ಜಿಲ್ಲಾ ಅರಣ್ಯಾಧಿಕಾರಿಯಿಂದ ವಿವರಣೆಯನ್ನು ಕೇಳಿ ನೋಟಿಸ್‌ನ್ನು ನೀಡಲಾಯಿತು. ಸುರಕ್ಷಿತ ಅರಣ್ಯದಲ್ಲಿ ನಾನು ಪರವಾನಗಿ ಇಲ್ಲದೆ ನರಭಕ್ಷಕನಲ್ಲದ ಹುಲಿಯನ್ನು ಕೊಂದ ಬಗೆಗೆ ನನ್ನ ಉತ್ತರವನ್ನು ಕೇಳಿದ್ದರು.


ಜೀವಮಾನವಿಡೀ ಭಾರತದಲ್ಲೇ ಬದುಕನ್ನು ಕಳೆದ ನನಗೆ ಇಲ್ಲಿನ ಸರ್ಕಾರೀ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರದ ಬಗೆಗೆ ಪೂರ್ಣ ಅರಿವಿತ್ತು. ಹಾಗಾಗಿ ನೋಟಿಸಿನಿಂದ ನಾನೇನು ಭಯಪಡಲಿಲ್ಲ. ನಾನು ಕೊಂದ ಹುಲಿ ನರಭಕ್ಷಕನೇ, ಆದರೆ ಇದರ ಬಗೆಗೆ ತಪ್ಪು ವರದಿಯನ್ನು ಮಾಡಲಾಗಿದೆ-ಎಂದು ನಾನು ಅವರಿಗೆ ಉತ್ತರಿಸಿದೆ. ಇದರಿಂದ ಅಧಿಕಾರಶಾಹಿಯ ಎಲ್ಲಾ ನೀತಿ ನಿಯಮಗಳನ್ನೂ ಪಾಲಿಸಿದಂತಾಯಿತು ಮತ್ತು ಎಲ್ಲರು ತಮ್ಮತಮ್ಮ ಕರ್ತವ್ಯವನ್ನು ನಿಭಾಯಿಸಿದಂತಾಯಿತು. ಹಾಗಾಗಿ ಕೊನೆಗೆ ಎಲ್ಲರೂ ತೃಪ್ತರಾದರು!

ನಾನು ಹಿಂತಿರುಗುವ ಸಮಯ ಬಂದಿತು. ಮಾರ್ಗಮಧ್ಯದಲ್ಲಿ ಜಿಲ್ಲಾ ಅರಣ್ಯಾಧಿಕಾರಿಯನ್ನು ಭೇಟಿಯಾದೆ. ಅವನೂ ಕೂಡ ತಾನು ನೋಟಿಸ್ ಕಳಿಸಬೇಕಾದ ಅನಿವಾರ್ಯತೆಗಾಗಿ ಕ್ಷಮೆ ಯಾಚಿಸಿದ. ಇದೆಲ್ಲದಕ್ಕೆ ನಾನು ಒಗ್ಗಿಹೋಗಿದ್ದೇನೆ, ಹಾಗಾಗಿ ನೀವು ಚಿಂತಿಸಿಬೇಕಿಲ್ಲ ಎಂದು ಅವರಿಗೆ ನಾನು ಭರವಸೆ ನೀಡಿದೆ. ಇಬ್ಬರೂ ಉತ್ತಮ ಸ್ನೇಹಿತರಾಗಿ ವಿದಾಯ ಹೇಳಿದೆವು.

ನಂತರ ಸುಮಾರು ಒಂದು ವರ್ಷದವರೆಗೆ ಇನ್ನಾವುದೇ ನರಬಲಿಯಾದ ವರದಿಗಳು ಬರಲಿಲ್ಲ, ಹಾಗಾಗಿ ಎಲ್ಲರೂ ಉದ್ದ ಕೂದಲಿನ ಹುಲಿ ಬರಿಯ ಕಟ್ಟುಕತೆ, ನಾನು ಕೊಂದಿದ್ದು ನಿಜವಾದ ನರಭಕ್ಷಕನೇ ಅಂದುಕೊಂಡರು. ನಾನೂ ಹಾಗೆಯೇ ನಂಬಿಕೊಂಡೆ. ಆದರೆ ನನ್ನ ನಂಬಿಕೆ ಸುಳ್ಳು ಎಂದು ಕೊನೆಗೂ ಗೊತ್ತಾಯಿತು.

ಕೊನೆಗೂ ನರಭಕ್ಷಕನ ಅಂತ್ಯವಾಯಿತೇ?

ಸಾಗರದ ಹೊರವಲಯದಲ್ಲಿ ಯಾವುದೋ ಹುಲಿ ವ್ಯಕ್ತಿಯೊಬ್ಬನನ್ನು ಕೊಂದಿತ್ತು, ಎರಡು ವಾರದ ನಂತರ ಆನಂದಪುರಂನ ಬಳಿ ಇನ್ನೊಬ್ಬ ವ್ಯಕ್ತಿ ಹುಲಿಗೆ ಬಲಿಯಾಗಿದ್ದ. ಮುಂದಿನ ಒಂದು ತಿಂಗಳಲ್ಲಿ ಅಲ್ಲಿಂದ ಹತ್ತು ಮೈಲಿನ ಸುತ್ತಳತೆಯಲ್ಲಿದ್ದ ತಾಗರ್ತಿ ಮತ್ತು ಗೌಜ ಎಂಬ ಹಳ್ಳಿಗಳಲ್ಲಿ ಇಬ್ಬರು ಹುಲಿಗೆ ಶಿಕಾರಿಯಾಗಿದ್ದರು. ನಂತರ ಕುಂಸಿಯ ಬಳಿ ಇನ್ನೊಬ್ಬ ದನಗಾಹಿ ಬಾಲಕನೂ ಹುಲಿಗೆ ನರಬಲಿಯಾದ. ಉದ್ದಕೂದಲಿನ ನರಭಕ್ಷಕ ಬಹಳ ದಿನಗಳು ಎಲ್ಲೋ ಕಾಣೆಯಾಗಿದ್ದು ಮತ್ತೆ ಹಿಂತಿರುಗಿ ತನ್ನ ನರಬಲಿಯ ಸರಣಿಯನ್ನು ಮುಂದುವರೆಸಿದೆ ಅಥವಾ ಬೇರಾವುದೋ ಹುಲಿ ನರಭಕ್ಷಕನಾಗಿ ಮನುಷ್ಯರನ್ನು ಇನ್ನೂ ಹೆಚ್ಚಿನ ವೇಗದಲ್ಲಿ ಕೊಲ್ಲುತ್ತಿದೆ.



ನಾನು ಹೇಗೋ ಒಂದು ವಾರದ ರಜವನ್ನು ಹೊಂದಿಸಿಕೊಂಡು ಕುಂಸಿಗೆ ನನ್ನ ಗಾಡಿಯಲ್ಲಿ ಹೋದೆ. ಶಿವಮೊಗ್ಗದ ಜಿಲ್ಲಾ ಅರಣ್ಯಾಧಿಕಾರಿ ಬದಲಾಗಿದ್ದರೂ ಕುಂಸಿ ಮತ್ತು ಚೋರಡಿಯ ಅಧಿಕಾರಿಗಳು ಮಾತ್ರ ಹಿಂದಿನವರೇ ಇದ್ದದ್ದನ್ನು ತಿಳಿದು ನನಗೆ ಖುಷಿಯಾಯಿತು. ಇವರಿಬ್ಬರೂ ಈಗ ಬಂದಿರುವುದು ಬೇರೆಯದೇ ನರಭಕ್ಷಕ ಎಂದು ಹೇಳಿದರು. ಈಗ ಬಂದಿರುವುದು ಉದ್ದಕೂದಲಿನ ಹುಲಿಯೇ ಆಗಿದ್ದರೆ, ಇಷ್ಟು ತಿಂಗಳು ಅದು ಎಲ್ಲಿ ಹೋಗಿತ್ತು? ಒಮ್ಮೆ ನರಭಕ್ಷಕನಾದ ಹುಲಿ ಬದಲಾಗುವುದು ಸಾಧ್ಯವೇ ಇಲ್ಲ ಎನ್ನುವುದು ಅವರ ತರ್ಕವಾಗಿತ್ತು. ಅವರ ಈ ವಾದವನ್ನು ಮನಸ್ಸಿಲ್ಲದಿದ್ದರೂ ನಾನು ಒಪ್ಪಿಕೊಳ್ಳಬೇಕಾಯಿತು!

ನಾನು ಅರಣ್ಯಾಧಿಕಾರಿಗಳೊಂದಿಗೆ ಚರ್ಚೆ ಮಾಡಿದೆ. ಹುಲಿ ಸಾಗರದಿಂದ ಕುಂಸಿವರೆಗಿನ ವಿಸ್ತಾರವಾದ ಜಾಗದಲ್ಲಿ ನರಬಲಿಗಳನ್ನು ತೆಗೆದುಕೊಂಡಿತ್ತು, ಹಾಗಾಗಿ ಎಲ್ಲಿಂದ ನಾನು ಪ್ರಾರಂಭಿಸಬೇಕು ಮತ್ತು ಎಲ್ಲಿ ಬಲಿಪಶುಗಳನ್ನು ಕಟ್ಟಬೇಕು ಎನ್ನುವ ಬಗೆಗೆ ತಕ್ಷಣ ನಿರ್ಧಾರ ತೆಗೆದುಕೊಳ್ಳಲಾಗಲಿಲ್ಲ.

ಆದರೆ ಮುಂದಿನ ದಿನ ತನ್ನಿಂದ ತಾನೇ ಎಲ್ಲಾ ನಿರ್ಧಾರವಾಯಿತು. ದುರಾದೃಷ್ಟದಿಂದ ಹುಲಿ ಕರಡಿಬೆಟ್ಟ ಮೀಸಲು ಆರಣ್ಯದ ಉತ್ತರದ ತುದಿಯಲ್ಲಿದ್ದ ಅಮ್ಮಿಗೊಳ ಎಂಬ ಹಳ್ಳಿಯಲ್ಲಿ ಹಗಲು ಹೊತ್ತಿನಲ್ಲೇ ದನಗಾಹಿ ಹುಡುಗನೊಬ್ಬನನ್ನು ಬಲಿ ತೆಗೆದುಕೊಂಡಿತು. ಮಧ್ಯಾಹ್ನದ ಮೂರು ಗಂಟೆಗೆ ನನಗೆ ವಿಷಯ ತಿಳಿಯಿತು.

ಕೂಡಲೆ ನಾನು ಅರಣ್ಯಾಧಿಕಾರಿಗಳೊಂದಿಗೆ ಕಾರಿನಲ್ಲಿ ಆಮ್ಮಿಗೊಳಕ್ಕೆ ಹೊರಟೆ. ಇದಕ್ಕಾಗಿ ನಾವು ಬಹಳ ಕಠಿಣವಾದ ಕಾರಿನ ಹಾದಿಯನ್ನು ಸವೆಸಬೇಕಿತ್ತು. ಆಮ್ಮಿಗೊಳದ ಒಂದು ಮನಮೋಹಕ ಸ್ಥಳದಲ್ಲಿ ಅರಣ್ಯ ವಸತಿಗೃಹವಿದ್ದು ಅದರ ಹಿಂದೆ ಒಂದು ಸಣ್ಣ ತೊರೆ ಹರಿಯುತ್ತಿತ್ತು, ಇದು ಮುಂದೆ ಒಂದು ಕೆರೆಗೆ ಸೇರುತ್ತಿತ್ತು, ಕೆರೆಯ ಪಕ್ಕದಲ್ಲಿ ಆ ಹುಡುಗ ತನ್ನ ಹಸುಗಳನ್ನು ಮೇಯಿಸುತ್ತಿದ್ದ. ಹಳ್ಳದ ಜಾಡಿನಲ್ಲಿ ನಡೆದುಬಂದ ಹುಲಿ ಬಾಲಕನ ಮೇಲೆ ಆಕ್ರಮಣ ಮಾಡಿ ಅವನನ್ನು ಕಾಡಿಗೆ ಹೊತ್ತುಕೊಂಡು ಹೋಗಿತ್ತು. ಸುತ್ತಲೂ ಮೇಯುತ್ತಿದ್ದ ದನಕರುಗಳಿಗೆ ಅದು ಯಾವ ಹಾನಿಯನ್ನೂ ಮಾಡಿರಲಿಲ್ಲ.

ಹುಲಿಯ ಹೆಜ್ಜೆ ಗುರುತುಗಳನ್ನು ನಾವು ಗುರುತಿಸಿದರೂ ಆಗಲೇ ಕತ್ತಲೆಯಾಗುತ್ತಾ ಬಂದಿದ್ದರಿಂದ ಆ ಪಾಪದ ಹುಡುಗನ ಶವವನ್ನು ಹುಡುಕ... ಸಾಧ್ಯವಾಗಲಿಲ್ಲ. ಅವನ್ನೇ ದೇಹದ ಅವಶೇಷಗಳನ್ನು ಹುಡುಕುವುದು ಸಾಧ್ಯವಿದ್ದ... ರಾತ್ರಿಯೇ ಹುಲಿಯನ್ನು ಬೇಟೆಯಾಡಲು ಅನುಕೂಲವಾಗುತ್ತಿತ್ತು, ... ಮಾಡಲಾಗದ ನನ್ನ ದುರಾದೃಷ್ಟವನ್ನು ನಾನೇ ಹಳಿದುಕೊಂಡೆ. ನಾವೆಲ್ಲಾ ... ಆಮ್ಮಿಗೊಳದ ಅರಣ್ಯ ವಸತಿಗೃಹದಲ್ಲೇ ಉಳಿದುಕೊಂಡೆವು.

ಮಧ್ಯರಾತ್ರಿಯ ನಂತರ ಯಾವುದೋ ಹುಲಿಯ ಕೂಗು ಕೇಳಿಸತೊಡಗಿ... ಅದು ನಮ್ಮಿಂದ ಒಂದು ಮೈಲು ದೂರದಲ್ಲಿರುವಂತೆ ಅನ್ನಿಸಿತು. ಕೂಗು ಕೇಳಿದ ಅರಣ್ಯಾಧಿಕಾರಿಗಳು ನನ್ನ ಕೋಣೆಯ ಬಾಗಿಲನ್ನು ತಟ್ಟಿದರು. ಬಾಗಿ... ತೆಗೆಯುತ್ತಾ, ನಾನೂ ಕೂಡ ಹುಲಿಯ ಕೂಗಿನ ಸದ್ದನ್ನು ಕೇಳುತ್ತಿದ್ದೇನೆಂ... ಅವರಿಗೆ ತಿಳಿಸಿದೆ.

ನಾನು ವಸತಿಗೃಹದ ಬಾಗಿಲನ್ನು ತೆಗೆದು ಹೊರಗೆ ಬಂದೆ. ನ... ಸುತ್ತಲಿನ ಕಾಡಿನ ಮೇಲೆ ಚಂದ್ರನ ಬೆಳಕಿನ ಮಳೆ ಸುರಿಯುತ್ತಿತ್ತು, ... ಸೌಂದರ್ಯವನ್ನು ಸವಿಯುತ್ತಾ ನಾನು ಹೊರಗೆ ನೋಡುತ್ತಿರುವಾಗ ಹು... ಮತ್ತೆ ಕೂಗಿತು. ಈ ಬಾರಿ ಅದು ಇನ್ನೂ ಹತ್ತಿರ ಬಂದಿದೆ ಅನ್ನಿಸಿತು. ಕ್ರೂರಪ್ರಾಣಿ ವಸತಿಗೃಹದ ಹಿಂದೆ ಹರಿಯುತ್ತಿದ್ದ ಸಣ್ಣ ತೊರೆಯ ದಂಡೆಯ... ನಡೆದುಕೊಂಡು ಬರುತ್ತಿದೆ ಮತ್ತು ಇನ್ನು ಸುಮಾರು ಹತ್ತು ನಿಮಿಷದ... ವಸತಿಗೃಹವನ್ನು ಹಾದುಹೋಗುತ್ತದೆ ಎಂದು ತಕ್ಷಣ ನನಗೆ ಹೊಳೆಯಿತು... ಇದು ನರಭಕ್ಷಕನಿರಬಹುದೇ? ನಾನು ನನ್ನ ಅದೃಷ್ಟವನ್ನು ಪರೀಕ್ಷಿಸಲು ನಿರ್ಧರಿಸಿ...

ನಾನು ಕೆಲವೇ ನಿಮಿಷದಲ್ಲಿ ನನ್ನ ಗನ್ನಿಗೆ ಫ್ಲಾಶ್ ಲೈಟ್‌ನ್ನು ಅಳವಡಿಸಿಕೊಂ... ತಕ್ಷಣ ವಸತಿಗೃಹದ ಹಿಂದಿನ ಬಾಗಿಲಿನಿಂದ ಹೊರಬಂದು ತೊರೆಯ ... ಹೋಗಲು ಇಳಿಜಾರಿನಲ್ಲಿ ಓಡತೊಡಗಿದೆ.

ತೊರೆಯ ದಂಡೆಯಲ್ಲಿ ಮರದ ನೆರಳಿದ್ದುದರಿಂದ ಕತ್ತಲಾಗಿತ್ತು. ಮುಂ... ಹೋದಂತೆ ಹುಣ್ಣಿಮೆಯ ಬೆಳಕಿನಲ್ಲಿ ಫಳಫಳನೆ ಹೊಳೆಯುತ್ತಿದ್ದ ನೀ... ಕಾಣಿಸಿತು. ನಾನಿದ್ದ ವಿರುದ್ಧ ದಿಕ್ಕಿನ ದಂಡೆ ಕರಡಿಬೆಟ್ಟ ಮೀಸಲು ಅರ... ಪ್ರದೇಶದ ವ್ಯಾಪ್ತಿಯಲ್ಲಿ ಬರುತ್ತಿತ್ತು.

ಹುಲಿಯ ಘರ್ಜನೆ ಮತ್ತೆ ಕೇಳಿಸಿತು. ವೇಗವಾಗಿ ಬರುತ್ತಿದ್ದ ಅ... ಕಾಲು ಮೈಲುಗಿಂತ ಹತ್ತಿರದಲ್ಲಿತ್ತು. ನಾನು ಹುಲಿಯನ್ನು ಬೇಟೆಯಾಡಬೇಕಿ... ಈಗ ತ್ವರಿತವಾಗಿ ಏನಾದರೂ ಮಾಡಲೇಬೇಕಿತ್ತು.

ನನ್ನೆದುರಿಗಿದ್ದ ಪ್ರಮುಖ ಪ್ರಶ್ನೆಯೆಂದರೆ ಹುಲಿ ತೊರೆಯ ಯಾವ ಕಡೆ... ದಂಡೆಯಲ್ಲಿ ಬರುತ್ತಿದೆ, ಎನ್ನುವುದಾಗಿತ್ತು. ಅದು ನಾನಿದ್ದ ದಂಡೆಯ ಎದು... ದಂಡೆಯಲ್ಲಿ ಬರುತ್ತಿದ್ದರೆ ನಾನು ನೀರಿನ ಹರಿವಿಗೆ ಹತ್ತಿರವಾಗಿ... ಮಾತ್ರ ಅದನ್ನು ಚಂದ್ರನ ಬೆಳಕಿನಲ್ಲಿ ನೋಡಿ ಗುರಿ ಹಿಡಿಯಬಹುದಿ... ಆದರೆ ಹಾಗೆ ಮಾಡುವುದು ಮತ್ತೊಂದು ದೃಷ್ಟಿಯಿಂ... ಅಪಾಯಕಾರಿಯಾಗಿತ್ತು. ನೀರಿನ ಹತ್ತಿರ ಬೆಳಕಿನಲ್ಲಿ ಅದು ನನ್ನ... ಸುಲಭವಾಗಿ ನೋಡಬಹುದಿತ್ತು. ಅದೂಅಲ್ಲದೆ ಹುಲಿ ನನಗಿಂ... ಎತ್ತರದ ಪ್ರದೇಶದಲ್ಲಿ ಇರುತ್ತಿದ್ದು ಅದರ ಆಕ್ರಮಣ ನನ್ನನ್ನು ಇಕ್ಕ... ಸಿಕ್ಕಿಸುತ್ತಿತ್ತು.

ಹುಲಿ ಮತ್ತೊಮ್ಮೆ ಕೂಗು ಹಾಕಿತು. ಈ ಬಾರಿ ಅದು ಕೇ... ಒಂದು ಫರ್ಲಾಂಗ್ ದೂರದಲ್ಲಿತ್ತು. ನಾನು ಯೋಚಿಸುತ್ತಾ ಹ... ಸಮಯ ಹಾಳು ಕಳೆಯುವಂತಿರಲಿಲ್ಲ. ಬಹುಶಃ ಹುಲಿ ಎದು... ಅರಣ್ಯ ಪ್ರದೇಶದ ದಡದಲ್ಲಿ ಬರುತ್ತಿದೆ ಎಂದು ಯೋಚಿಸಿ ನಾ... ಏನು ಮಾಡಬಹುದು ಎಂದು ಲೆಕ್ಕಹಾಕುತ್ತಿದ್ದೆ.

ಹೀಗೆ ಯೋಚಿಸುತ್ತಿರುವಾಗಲೇ ನಾನು ಅಡಗಿಕೊಳ್ಳಬಹುದ... ಜಾಗವೊಂದಕ್ಕಾಗಿ ಎಲ್ಲಾ ಕಡೆ ಕಣ್ಣಾಡಿಸುತ್ತಿದ್ದೆ. ನಾನಿದ್ದ ದಂಡೆಯಿ... ಎರಡು ಅಡಿ ದೂರದಲ್ಲಿ ತೊರೆಯ ಒಳಗೆ ಸ್ವಲ್ಪ ಎತ್ತರದ... ಹುಲ್ಲಿನ ಪೊದೆಯೊಂದು ಬೆಳೆದಿತ್ತು. ತೊರೆ ಹೆಚ್ಚು ಆಳವಿಲ್ಲ ಎನ್ನುವ... ನನಗೆ ತಿಳಿದಿತ್ತು. ಹಾಗಾಗಿ ನಾನು ಓಡಿಹೋಗಿ ನೀರಿನಲ್ಲಿ ಇಳಿದು ಸದ್ದಾಗದ... ನಡೆದು ಹುಲ್ಲಿನ ಹಿಂದೆ ಮುದುರಿ ಕುಳಿತೆ. ಎರಡು ಮೂರು ನಿಮಿಷ... ಹಾಗೆಯೇ ಕಳೆದವು. ತೊರೆಯ ಎರಡು ದಂಡೆಯಲ್ಲಿ ಮರದ ನೆರಳಿನ... ಆಗುಹೋಗುಗಳನ್ನು ನನಗೆ ನೋಡಲಾಗುತ್ತಿರಲಿಲ್ಲ.

ಆಗ ಹುಲಿ ಮತ್ತೆ ನನ್ನೆದುರಿನಲ್ಲೇ ಕೂಗಿತು. ಅದು ನಾನು ಈಗ... ನಿಂತಿದ್ದ ವಸತಿಗೃಹದ ಕಡೆಯ ದಂಡೆಯಲ್ಲಿಯೇ ಬರುತ್ತಿತ್ತು! ಅದು ನನ್ನ... ಯಾವುದೇ ಕ್ಷಣದಲ್ಲಿಯೂ ಹಾದುಹೋಗಬಹುದಿತ್ತು.

ನಾನು ಕ್ಷಣಗಣನೆ ಮಾಡತೊಡಗಿದೆ. ಹುಲಿ ನೇರವಾಗಿ ನನ್ನೆದು... ಎತ್ತರದ ಪ್ರದೇಶದಲ್ಲಿ ಇರದಂತೆ ನಾನು ಎಚ್ಚರವಹಿಸಿದೆ. ತಕ್ಷಣ ಫ... ಲೈಟ್‌ನ ಗುಂಡಿಯನ್ನು ಒತ್ತಿದೆ. ಚೆಲ್ಲಿದ ಬೆಳಕಿನಲ್ಲಿ ನನ್ನಿಂದ ಹದಿನ... ಗಜಕ್ಕಿಂತ ಕಡಿಮೆ ದೂರದಲ್ಲಿ ಹುಲಿಯ ಪಟ್ಟೆಪಟ್ಟೆಯ ಆಕಾರ ನಿಂತಿತ...

ಹುಲಿ ತಾನು ಹೋಗುತ್ತಿದ್ದ ದಾರಿಯಲ್ಲಿ ನಿಂತು ನನ್ನ ಕಡೆ ಮ... ತಿರುಗಿಸಿತು. ಅದರ ಬಲಭಾಗ ನನ್ನ ಕಡೆಗೆ ಇದ್ದುದರಿಂದ ನಾನು ಅ... ಬಲಭುಜದ ಹಿಂಭಾಗಕ್ಕೆ ಗುರಿಯಿಡಬೇಕಿತ್ತು. ತಕ್ಷಣ ಗುಂಡು ಹಾರಿ... ಗುಂಡು ತಗಲಿದೊಡನೆ ಅದು ಮೇಲಕ್ಕೆ ಹಾರಿ ಹಿಂದೆ ಬಿತ್ತು. ನ... ಎರಡನೇ, ಮೂರನೇ ಗುಂಡನ್ನು ಹಾರಿಸಿದೆ.

ಆಗ ಹುಲಿಗೆ ನಾನು ಎಲ್ಲಿ ಅಡಗಿದ್ದೆ ಎನ್ನುವುದರ ಅರಿವಾಯಿ... ಕೂಡಲೆ ಅದು ದಂಡೆಯ ಇಳಿಜಾರಿನಲ್ಲಿ ಜಾರುತ್ತಾ ಏಳುತ್ತಾ ಬೀಳುತ್ತಾ... ಕಡೆ ನುಗ್ಗಿತು. ಕೇವಲ ಹದಿನೈದು ಅಡಿ ದೂರವಿದ್ದಾಗ ನನ್ನ ನಾ... ಗುಂಡು ಅದರ ತಲೆಚಿಪ್ಪಿನ ಒಳಹೊಕ್ಕಿತು.

ನಂತರ ಅದನ್ನು ಪರೀಕ್ಷೆ ಮಾಡಿದೆ. ಹುಲಿಯ ಕುತ್ತಿಗೆಯ ಸುತ್ತ ವಿಚಿತ್ರ... ಬೆಳೆದಿದ್ದ ಉದ್ದದ ಕೂದಲುಗಳನ್ನು ನೋಡಿ ನನಗೆ ಆಶ್ಚರ್ಯವಾಯಿ... ಕಾಡಿನ ಕೆಲವು ರಹಸ್ಯಗಳನ್ನು ಭೇದಿಸಲಾಗುವುದೇ ಇಲ್ಲ, ಅಂತಹ ಬ... ರಹಸ್ಯವೆಂದರೆ ಈ ಹುಲಿಗೆ ಕುತ್ತಿಗೆಯಲ್ಲಿ ಏಕೆ ಅಷ್ಟೊಂದು ಉ... ಕೂದಲುಗಳಿದ್ದವು ಎನ್ನುವುದು.

(ಮುಗಿ...



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಓಂ ನಮಃ ಶಿವಾಯ'ವನ್ನೇ ಕೇಳುತ್ತಾ ಹುಟ್ಟಿ ...ನು ನಾನು. ನನ್ನ ಅಜ್ಜ ನನಗೆ ಮಂತ್ರವೆಂದು ...ಟ್ಟಿದ್ದು ಅದು ಒಂದೇ. ಧರ್ಮಗ್ರಂಥವೆಂದೇನೂ ...ದ್ದ ನಮ್ಮ ಮನೆಯಲ್ಲಿ ಸಂಸ್ಕೃತಿಯೆಂದರೆ ಅದು ... ಸಂಸ್ಕೃತಿ. ಧಾರ್ಮಿಕ ಶ್ರದ್ಧೆಯೆಂಬಂತೇನೂ ...ದ್ದರೂ ಶ್ರದ್ಧೆಯಿಂದ ಮೊಳಗುತ್ತಿದ್ದದ್ದು ಶರಣರ ...ಕು. ನನಗಂತೂ ಲಿಂಗ ಬಂಧನವಿಲ್ಲದೇ ಇದ್ದರೂ ... ಹಿರಿಯರು ಅವರವರ ಇಷ್ಟಲಿಂಗಕ್ಕೆ ನೀರು, ...ಸುತ್ತಿದ್ದದ್ದು ಅವರಿಗೆ ಇಷ್ಟ ಬಂದಾಗ. ಲಿಂಗವ್ರೋ, ...ೋ ಮುಖ್ಯವಾಗಿ ಎಂದೂ ಕಂಡಿರದ ಅವರು ...ಮಾನ್ಯತೆ ಕೊಡುತ್ತಿದ್ದದ್ದು ಶರಣ ಸಾಹಿತ್ಯಕ್ಕೆ, ವಚನ ...ಕ್ಕೆ. ಆದರೂ ನುಣುಪಾದ, ಹೊಳೆಹೊಳೆಯುವ ...ನ್ನು ಬೆಳ್ಳಿಯ ಕರಡಿಗೆಗಳಿಂದ ಹೊರ ತೆಗೆದಾಗ ...ಪ್ರೀತಿ. ನಾನೂ ಪೂಜಿಸುತ್ತೇನೆ ಎಂದು ಶಿಶು ...ಹಲದಿಂದ ಕೇಳಿದಾಗ, ಹಿರಿಯರ ಇಷ್ಟಲಿಂಗಗಳು ...ಷ್ಟಕ್ಕೆ ಬಂದು ಬಿಡುತ್ತಿದ್ದವು. ನಾನೋ ಅದಕ್ಕೆ ... ಅಭಿಷೇಕ ಮತ್ತು ಪೂಜೆಗಳನ್ನು ಮಾಡುತ್ತಾ ...ಮುತ್ತಿದ್ದೆ. ಭಕ್ತ ಮಾರ್ಕಂಡೇಯನಿಗೆ ಒಲಿದಂತೆ ಒಂದು ...ವನು ತಾಂಡವ ನೃತ್ಯವನ್ನಾಡುತ್ತಾ ನನ್ನ ಮುಂದೆ ...ಕೋಳೂರು ಕೊಡಗೂಸಿನ ಜೊತೆ ಲೋಕಾಭಿರಾಮ ...ಂತೆ ನನ್ನೊಡನೆಯೂ ಬಂದು ಸಲ್ಲಾಪದಲ್ಲಿ ...ಗುತ್ತಾನೆಂದ ಮಹದಾಸೆ. ಅದಕ್ಕಾಗಿಯೇ ಆ ಶಿವನ ... ಸೆಳೆಯಲು ಇನ್ನಿಲ್ಲದಂತೆ ಸರ್ಕಸ್ ಮಾಡುತ್ತಿದ್ದೆ. ...ಮಃಶಿವಾಯ ಸಾವಿರಾರು ಬಾರಿ ಜಪ ಮಾಡುತ್ತಿದ್ದೆ.



ಲಕುಲೀಶನ ವಿಗ್ರಹ







ಲಕುಲೀಶನ ವಿಗ್ರಹ

...ವೇಷಭೂಷಣ, ಅವನ ಧೋರಣೆ, ನಡವಳಿಕೆಗಳು, ... ಮನೋಧರ್ಮ, ಜಂಗ್ಲಿ ಅಪಿಯರೆನ್ಸ್ ಇತ್ಯಾದಿಗಳ ... ಜೊತೆಗೆ ಆವೇಶಪೂರಿತ ಡಮರು, ಢಕ್ಕೆ, ಶಂಖಗಳ ..., ಗಟ್ಟಿ ಸ್ತುತಿಗಳು.

...ಪೊಮ್ಮೆ ಬೋರಿಕ್ ಪೌಡರ್‌ನ ಮುಚ್ಚಳವು ಕಪ್ಪಗೆ ...ಕಾರವಾಗಿದ್ದು ಅದು ನನ್ನ ಆಟದಲ್ಲಿಯೂ ...ಗವಾಗಿ ನುಸುಳಿರುತ್ತಿತ್ತು.

...ಲಿ, ನಮ್ಮ ಮನೆಗೆ ಆಗಾಗ್ಗೆ ಲೋಕಾಭಿರಾಮವಾಗಿ ... ಜಂಗಮರು ಬರುತ್ತಿದ್ದರು. ರಾಜ್ಯದ ವಿವಿಧ ...ಂದ ಬರುತ್ತಿದ್ದ ಅವರು ನಮ್ಮ ಮನೆಗೆ ಬಂದು ...ಪೂಜಾದಿಗಳನ್ನು ಮುಗಿಸಿಕೊಂಡು ಶರಣರ ಜೀವನದ ...ೋ ಅಥವಾ ಪ್ರಸ್ತುತ ಮಠಗಳ ಕುರಿತೋ ಒಂದಿಷ್ಟು ...ಚರ್ಚೆಯಾಡುತ್ತಿದ್ದರು. ಆಗ ನಾನು ಮೂರು ಅಥವಾ ...ಯ ತರಗತಿಯ ಹುಡುಗ. ನಾನು ಕೇಳುತ್ತಿದ್ದ ...ಧರ ಕಥೆಯಲ್ಲಿ ಬಾಲಕ ಸಿದ್ಧ ತನಗೆ ಎದುರಾದ ...ಲ್ಲಿ ತನ್ನ ಪ್ರಶ್ನೆಗಳನ್ನು ಕೇಳುತ್ತಿದ್ದ ಪ್ರಭಾವದಿಂದಲೋ ..., ಹಾಗೆ ಬಂದಿದ್ದ ಒಬ್ಬ ಜಂಗಮರಿಗೆ "ಲಿಂಗ" ... ಏನು ಎಂದು ಕೇಳಿದೆ.

...ವರೋ "ನಿನಗಿಲ್ಲವೇ ತರಡುಬೀಜ, ಅದೇ ಲಿಂಗ" .... ಪುಲ್ಲಿಂಗ ಸ್ತ್ರೀಲಿಂಗಗಳ ಪಾಠವಾಗಿದ್ದ ನಾನು ... ಕೇಳಿದೆ, "ಅದಲ್ಲ, ನಾನು ಕೇಳಿದ್ದು ಶಿವಲಿಂಗ" ... ಭಯಭಕ್ತಿಯಿಂದ ಕೇಳಿದೆ.

...ಶಿವಲಿಂಗ ಅಂದರೆ ಶಿವನ ತರಡುಬೀಜ" ...ಬಿಡೋದೇ ಆ ಜಂಗಮರು?

...ಗೆ ನಾನು ಸುಮ್ಮನಾದರೂ ಅವರು ತಮಾಷೆ ...ನ್ನೊಡೇ ನೀಡಿದ್ದೆ ಮತ್ತು ಅಂತಾ ಮಹಿಮಾಮಹಿಮ ... ಬಗ್ಗೆ ಅಷ್ಟು ಪೋಲಿ ಮಾತಾಡಿದ್ದು ಆಶ್ಚರ್ಯವೂ ... ಒಂದು ವೇಳೆ ಈ ಜಂಗಮ ಡೂಪ್ಲಿಕೇಟ್ ...ನು ಎಂದೂ ಅಂದುಕೊಂಡೆ.

ನಂತರ ಪರಿಚಯವಾಗಿದ್ದು ಶ್ರೀಶ್ರೀನಿವಾಸ ಕಲ್ಯಾಣದ ಕಥೆ.

ಭೃಗುವಿನ ಶಾಪ

ಅದರಲ್ಲಿ ಭೃಗುವು ಕೈಲಾಸಕ್ಕೆ ಬಂದಾಗ ಶಿವ ಮತ್ತು ಪಾರ್ವತಿಯು ಸರಸ ಸಲ್ಲಾಪದಲ್ಲಿ ತೊಡಗಿರುತ್ತಾರೆ. ಹಾಗಾಗಿ ಈ ಮಹರ್ಷಿಯು ಬಂದಿದ್ದನ್ನು ಗಮನಿಸುವುದಿಲ್ಲ. ಕೋಪಗೊಂಡ ಭೃಗುವು ಇನ್ನು ಮುಂದೆ ನಿನ್ನನ್ನು ಲಿಂಗರೂಪದಲ್ಲಿ ಪೂಜಿಸಲಿ ಎಂದು ಶಪಿಸುತ್ತಾನೆ.


ನನಗಾಗ ಬಂದ ಪ್ರಶ್ನೆಗಳೋ, "ಎಲ್ಲಾ ಬಿಟ್ಟು ಲಿಂಗರೂಪವನ್ನೇ ಈ ಋಷಿ ಏಕೆ ಆಯ್ದುಕೊಂಡ? ಶಿಶ್ನದ ಆಕೃತಿಯಲ್ಲಿ ನಿನ್ನನ್ನು ಪೂಜಿಸಲಿ ಎಂದು ಶಾಪ ಕೊಡುವುದು ಯಾವ ಸೀಮೆಯ ಶಿಕ್ಷೆ? ಅದಕ್ಕೂ ಮಿಗಿಲಾಗಿ ದೇವಾದಿದೇವನೆಂದಿರುವ ಶಿವನಿಗೆ ಇವನ್ಯಾರು ಋಷಿ ಶಾಪ ಕೊಡುವುದಕ್ಕೆ? ದೇವತೆಗಳಿಗಿಂತಲೂ ಋಷಿಯೊಬ್ಬನು ಮಿಗಿಲೇ? ಅಷ್ಟೊಂದು ಷಾರ್ಟ್ ಟೆಂಪರ್ಡ್ ಋಷಿ ಯಾವ ರೀತಿಯಲ್ಲಿ ಶ್ರೇಷ್ಠ? ಸಾಮಾನ್ಯ ಮನುಷ್ಯರಿಗೂ ಇರಬೇಕಾದ ಸಹನೆ, ಅರ್ಥ ಮಾಡಿಕೊಳ್ಳುವಷ್ಟು ವಿವೇಚನೆ, ಕ್ಷಮಾಭಾವ ಇಲ್ಲದ ಅವನೆಂತಹ ಋಷಿ? ಅವನಿಗೆ ಅವನೆಂದಂತೇ ಆಗಿ ಬಿಡುವ ಶಕ್ತಿ ಕೊಟ್ಟವರು ಯಾರು?" ಹೀಗೆ ಒಂದೆರಡಲ್ಲ!

ದಾರುಕಾವನದಲ್ಲಿ ಶಿವನ ಲಿಂಗ

ಇನ್ನೂ ಮುಂದೆ ಪ್ರೌಢಶಾಲೆ ಮುಟ್ಟಿದಾಗ ನನಗೆ ಸಿಕ್ಕದ್ದು ತಾಪಿ ಧರ್ಮರಾವ್‌ರವರ 'ದೇವಾಲಯ ಮತ್ತು ಲೈಂಗಿಕ ಶಿಲ್ಪ'. ಅದರಲ್ಲಿ ಪಾಲಾಕ್ಷ ಪಂಡಿತನಿಂದ ರಚಿಸಲ್ಪಟ್ಟ ಪುರಾಣದಲ್ಲಿ ಹೇಳಿರುವಂತಹ ಶಿವಲಿಂಗದ ಉಗಮದ ಕಥೆ ಹೇಳುತ್ತಾರೆ.

ಶಿವನು ಪಾರ್ವತಿಯನ್ನು ಮದುವೆಯಾದ ಹೊಸತರಲ್ಲಿ ತನ್ನ ಮಾವನಾದ ಹಿಮವಂತನ ಆದರಾತಿಥ್ಯವನ್ನು ಸ್ವೀಕರಿಸುತ್ತಾ ಆನಂದದಿಂದ ದಾರುಕಾವನದಲ್ಲಿ ವಿಹರಿಸುತ್ತಿರುತ್ತಾನೆ. ಆಗ ಅಲ್ಲಿ ನದಿಯಲ್ಲಿ ಸ್ನಾನ ಮಾಡಿ ಬಂದಿದ್ದ ಶಿವನನ್ನು ಅಲ್ಲಿದ್ದ ಋಷಿಪತ್ನಿಯರು ನೋಡುತ್ತಾರೆ. ಆ ಹೆಂಗಸರನ್ನು ಕಂಡ ಶಿವನು ಕಾಮಾತುರನಾಗಿ ಕಿಲಕಿಲ ನಗುತ್ತಾ ನಿಂತುಕೊಂಡಿರುತ್ತಾನೆ. ಕೌಪಿನದಿಂದ ಹೊರಗಿಣುಕಿದ್ದ ಅವನ ಶಿಶ್ನವನ್ನು ನೋಡುತ್ತಾ ಆ ಋಷಿಪತ್ನಿಯರು ತಮ್ಮಲ್ಲೇ ಮಾತಾಡಿಕೊಂಡು ಸಮ್ಮೋಹಿತರಾಗಿ ನಿಂತಿರುತ್ತಾರೆ. ಆಗ ಅಲ್ಲಿಗೆ ಬಂದ ಋಷಿಗಳು ತಮ್ಮ ಪತ್ನಿಯರು ಹೀಗೆ ಶಿವನ ಲಿಂಗವನ್ನು ನೋಡುತ್ತಾ ನಿಂತಿರುವುದನ್ನು ಕಂಡು ಕ್ರೋಧಗೊಂಡು ತಮ್ಮಲ್ಲಿರುವ ದಂಡದಿಂದ ಅವನ ಲಿಂಗಕ್ಕೆ ಹೊಡೆಯುತ್ತಾರೆ. ತನ್ನ ಲಿಂಗಕ್ಕೆ ಹೊಡೆದ ಋಷಿಗಳ ಮೇಲೆ ಕುಪಿತನಾದ ಶಿವನು ತನ್ನ ಲಿಂಗವನ್ನು ಬೆಳೆಸಲು ಪ್ರಾರಂಭಿಸುತ್ತಾನೆ. ಆ ಲಿಂಗವೋ ಬೆಳೆಬೆಳೆಯುತ್ತಾ ಭೂಲೋಕ, ಮಹರ್ಲೋಕ, ಸತ್ಯಲೋಕ ಹೀಗೆ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿಕೊಂಡು ಬೆಳೆಯುತ್ತಾ ಹೋದಂತೆ ಲೋಕವೆಲ್ಲಾ ಅಲ್ಲೋಲಕಲ್ಲೋಲವಾಗುತ್ತದೆ. ಆಗ ದೇವತೆಗಳು ಮತ್ತು ಋಷಿಗಳೆಲ್ಲರೂ ಬ್ರಹ್ಮನ ಬಳಿ ಮೊರೆ ಹೋಗುತ್ತಾರೆ.

ಆಗ ಬ್ರಹ್ಮನು ಬೆಳೆಯುತ್ತಿದ್ದ ಶಿವನ ಲಿಂಗದ ಊರ್ಧ್ವಭಾಗಕ್ಕೆ ಹೋಗಿ ಅದರ ಮೇಲೆ ಅಭಿಷೇಕಾದಿಗಳನ್ನು ಮಾಡಿ ದೇವತೆಗಳೊಂದಿಗೆ ಪ್ರಾರ್ಥಿಸುತ್ತಾನೆ. "ಶಿವನೇ ತಗ್ಗಿಸು, ಭವನೇ ಬಗ್ಗಿಸು" ಎಂದು ನಾನಾರೀತಿಯಲ್ಲಿ ಶಿವನ ನಾಮಗಳಿಂದ ಲಿಂಗವನ್ನು ಹಿಂದಕ್ಕೆ ತೆಗೆದುಕೊಳ್ಳಲು ಪ್ರಾರ್ಥಿಸುತ್ತಾರೆ. ಆಗ ಶಿವನು ಮೂಜಗವು ಕೇಳುವಂತೆ ಕಿಲಕಿಲ ನಗುತ್ತಾ "ನೀವು ದಂಡದಿಂದ ಹೊಡೆದು ಅಪಮಾನಿಸಲು ಯತ್ನಿಸಿದ, ತುಚ್ಛವಾಗಿ ಪರಿಗಣಿಸಿದ ಈ



ಶಿವಲಿಂಗ

ಲಿಂಗವನ್ನೇ ನೀವು ಇನ್ನು ಮುಂದೆ ಪೂಜಿಸಿ" ಎಂದು ಹೇಳುತ್ತಾನೆ. ಅಂದಿನಿಂದ ದೇವತೆಗಳು ಮತ್ತು ಋಷಿಗಳು ಲಿಂಗಪೂಜೆಯನ್ನು ಮಾಡಲು ತೊಡಗುವರು.

ಈ ಕಥೆಯನ್ನು ಓದಿದ ಮೇಲೆ ನನಗೆ ಆ ಜಂಗಮರು ನನಗೆ ಲಿಂಗ ಶಿವನ ತರಡುಬೀಜ ಎಂದು ಹೇಳಿದ್ದು ಇಂಥಾ ಕಥೆಯೊಂದರ ಆಧಾರಿತ ಎಂದು ಅರಿವಾಯಿತು.

ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ದೊರಕಿರುವಂತಹ ಗುಡಿಮಲ್ಲಂ ಲಿಂಗದ ಶಿಲ್ಪವನ್ನು ಗಮನಿಸಿದರೆ ನಾವು ಪೂಜಿಸುವ ಲಿಂಗವೆಂಬುದು ಶಿವನ ನಿಮಿರಿದ ಶಿಶ್ನ ಎಂಬ ಸೂಚನೆಗಳನ್ನು ನೇರವಾಗಿ ನೀಡುತ್ತದೆ.

ಲಕುಲೀಶ

ಉದ್ರಿಕ್ತ ಶಿಶ್ನಕ್ಕೂ ಮತ್ತು ಶಿವಲಿಂಗಕ್ಕೂ ಸಂಬಂಧ ಕಲ್ಪಿಸಲು ನೆರವಾಗುವಂತೆ ಪಾಶುಪತವೆಂಬ ಶೈವಪಂಥದ ಸಂಸ್ಥಾಪಕನಾಗಿರಬಹುದಾದ ಲಕುಲೀಶನ ವಿಗ್ರಹವು ಗಮನಾರ್ಹವಾಗಿದೆ. ಕರ್ನಾಟಕದ ಮಹಾಕೂಟದ ಸಂಗಮೇಶ್ವರ ದೇವಸ್ಥಾನದಲ್ಲಿ, ಕ್ರಿಸ್ತಶಕ 7ನೇ ಶತಮಾನದ ಚಾಲುಕ್ಯರ ಅವಧಿಯಲ್ಲಿ ಕಡೆದಿರುವಂತಹ ಲಕುಲೀಶನ ವಿಗ್ರಹವು ಊರ್ಧ್ವಲಿಂಗ ಅಥವಾ ಊರ್ಧ್ವರೇತ ಅಂದರೆ ಮೇಲಕ್ಕೆ ನಿಲ್ಲಿಸಿಕೊಂಡ ಶಿಶ್ನವನ್ನು ಹೊಂದಿದೆ. ಈ ಲಕುಲೀಶನು ಪಾಶುಪತ ಸಿದ್ಧಾಂತವನ್ನು ಪ್ರಚಾರ ಮಾಡುತ್ತಿದ್ದು, ಈತನ ಉಲ್ಲೇಖವು ಲಿಂಗಪುರಾಣ, ಸ್ಕಂದಪುರಾಣ, ವಾಯುಪುರಾಣ ಮತ್ತು ಕೂರ್ಮಪುರಾಣಗಳಲ್ಲಿದೆ. ಈತನು ವೇದವ್ಯಾಸ ಮತ್ತು ಕೃಷ್ಣನ ಸಮಕಾಲೀನನಾಗಿದ್ದು ರುದ್ರನ 28ನೆಯ ಮತ್ತು ಕೊನೆಯ ಅವತಾರವೆಂದು ನಂಬುತ್ತಾರೆ. ಈತ ಗುಜರಾತಿನಲ್ಲಿ ಹುಟ್ಟಿದ್ದು ಪಾಶುಪತ ಶೈವ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ವೇದಗಳನ್ನು, ಜೈನ ಮತ್ತು ಬೌದ್ಧ ಸಿದ್ಧಾಂತಗಳನ್ನು ನಿರಾಕರಿಸಿದ್ದ.

ಕ್ರಿಸ್ತಶಕ ಮೊದಲನೆಯ ಶತಮಾನದಲ್ಲಿ ಲಕುಲೀಶನು ಶೈವಾಗಮದಲ್ಲಿ ಬೆರೆತರೂ, ಸುಮಾರು ಇನ್ನೂರು ವರ್ಷಗಳ ನಂತರ ಅವನು ಶಿವನ ಅವತಾರವೆಂದು ಮಾನ್ಯ ಮಾಡಲಾಯಿತು.

ಶಿಶ್ನಾರಾಧಕರು

ಭಾರತದಲ್ಲಿ ಮಾತ್ರವಲ್ಲದೇ ವಿಯಟ್ನಾಂ, ಜಾವಾ, ಇಂಡೋನೇಶಿಯಾ, ಕಾಂಬೋಡಿಯಾ, ಈಜಿಪ್ಟ್, ಜಪಾನ್ ಮತ್ತು ಇನ್ನೂ ಪ್ರಾಚೀನ ಪಾಶ್ಚಿಮಾತ್ಯ ಸಂಸ್ಕೃತಿಗಳಲ್ಲೂ ನಾವು ಶಿಶ್ನ ಸಂಕೇತಗಳನ್ನು ಒಳಗೊಂಡ ಅನೇಕ ಕುರುಹುಗಳನ್ನು ಕಾಣುತ್ತೇವೆ.

ಪ್ರಾಚೀನ ಭಾರತದ ಪೂರ್ವ ನಿವಾಸಿಗಳಾದ ದಸ್ಯುಗಳನ್ನು ಆರ್ಯರು ಶಿಶ್ನಾರಾಧಕರು ಎಂದು ಅಸಡ್ಡೆಯಿಂದ ಕಾಣುತ್ತಿದ್ದದ್ದು ಉಂಟು.

ಜಪಾನಿನಲ್ಲಿ ಮಾರ್ಚ್ 15ರಂದು ಶಿಶ್ನದ ಹಬ್ಬವನ್ನು ಆಚರಿಸುತ್ತಾರೆ. ಅಂದು ಶಿಶ್ನದ ಬೃಹದಾಕಾರದ ಮರದಿಂದ ನಿರ್ಮಿಸಲಾದ ಮಾದರಿಯ ಮೆರವಣಿಗೆಯನ್ನು ಬೀದಿಬೀದಿಗಳಲ್ಲಿ ಮಾಡುತ್ತಾರೆ. ಫಲವತ್ತಾದ ಬೆಳೆಯ, ಪುಂಸತ್ವದ ವೃದ್ಧಿಯ, ಪ್ರತಿಯೊಬ್ಬರಿಗೂ ಚೈತನ್ಯವನ್ನು ಪುನಶ್ಚೇತನಗೊಳಿಸುವ ಹರಕೆಯನ್ನು ಇದು ಹೊಂದಿರುತ್ತದೆ. ಇಡೀ ಕುಟುಂಬವು ಸಂತೋಷದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಸಾರ್ವಜನಿಕವಾಗಿ ನಡೆಯುವ ಜಾತ್ರೆಯಲ್ಲಿ ಒಬ್ಬೊಬ್ಬರು ಮರದ ಶಿಶ್ನಗಳನ್ನು ಜೊತೆಗೆ ತಂದಿದ್ದು ಒಬ್ಬರದೊಬ್ಬರ ಮಾದರಿಗಳನ್ನು ಚುಂಬಿಸುತ್ತಾರೆ. "ನೀನು ನಿನ್ನ ಶಿಶ್ನವನ್ನು ತಂದಿರುವೆಯಾ" ಎಂದು ಹಾಸ್ಯ ಚಟಾಕಿ ಹಾರಿಸುವಂತೆ, "ನಿನ್ನ ಶಿಶ್ನವು ಬಲವಾಗಿ ಚೈತನ್ಯ ಪೂರ್ಣವಾಗಿರಲಿ" ಎಂದು ಗಂಭೀರ ಹಾರೈಕೆಯನ್ನು ನೀಡುವುದೂ ಮತ್ತು "ಧನ್ಯವಾದಗಳು, ನಿನ್ನದೂ ಕೂಡ ಹಾಗೆಯೇ ಇರಲಿ" ಎಂದು ಪ್ರತಿ ಹಾರೈಸುವುದೂ ನಡೆಯುತ್ತದೆ.

ಈ ಬಗೆಯ ಶಿಶ್ನಾರಾಧನೆಗಳು ನಡೆಯಲು ಕಾರಣವನ್ನು ಹುಡುಕಲು ನಾವು ಆದಿಮ ಕಾಲಕ್ಕೇ ಹೋಗಬೇಕು.

ಜಗತ್ತಿನ ಬೇರೆ ಬೇರೆ ಸಂಸ್ಕೃತಿಗಳಲ್ಲಿ ಶಿಶ್ನಗಳ ಸಂಕೇತಗಳು ಗೌರವಕ್ಕೆ ಪಾತ್ರವಾಗಲು ಕಾರಣ ಮಾತೃಪ್ರಧಾನ ಕುಟುಂಬದಿಂದ ಪಿತೃಪ್ರಧಾನ ಕುಟುಂಬಕ್ಕೆ ಬದಲಾಗುವ ಸನ್ನಿವೇಶಗಳೆಂದುಕೊಂಡರೆ; ಅದು ಇದ್ದರೂ ಇರಬಹುದು. ಆದರೆ ಸೃಷ್ಟಿಯ ಕಾರಣಕ್ಕೆ ಶಿಶ್ನವೂ ಕೂಡ ಒಂದು ಮುಖ್ಯ ಕಾರಣ ಎಂದು ಮನುಷ್ಯನಿಗೆ ಮೂಡಿದ ಅರಿವು ಮುಖ್ಯ ಎನಿಸುತ್ತದೆ.

ಜೀವ ಸೃಷ್ಟಿಯ ಪ್ರಕ್ರಿಯೆಯಲ್ಲಿ ಸ್ತ್ರೀಯೊಬ್ಬಳೇ ಮುಖ್ಯ ಎಂದು ಮನುಷ್ಯ ಭಾವಿಸಿದ್ದನು. ನೈಸರ್ಗಿಕವಾಗಿ ಲೈಂಗಿಕ ಕ್ರಿಯೆಗಳನ್ನು ನಡೆಸುತ್ತಿದ್ದರೂ, ಅದಕ್ಕೂ ಮತ್ತು ಶಿಶುವಿನ ಜನನಕ್ಕೂ ಅವನು ಸಂಬಂಧವನ್ನು ಕಲ್ಪಿಸಿಕೊಂಡಿರಲಿಲ್ಲ. ಸ್ತ್ರೀಯಲ್ಲಿ ಹೆರುವ ಪ್ರಕ್ರಿಯೆ ತಂತಾನೆ ಆಗುವುದು ಎಂದು ತಿಳಿದಿದ್ದು, ಅವಳನ್ನೇ ಬಹು ಮುಖ್ಯವಾಗಿ ಪರಿಗಣಿಸಿದ್ದನು. ಯೋನಿಯನ್ನು ಆರಾಧಿಸುತ್ತಿದ್ದನು. ಆದರೆ, ಸಂತಾನೋತ್ಪತ್ತಿಯಲ್ಲಿ ಶಿಶ್ನದ ಪಾತ್ರವೂ ಇದೆ ತಿಳಿದ ಮೇಲೆ ಅಥವಾ ಪುರುಷನ ಪಾತ್ರವು ಪ್ರಧಾನ ಎಂದು ಎನಿಸಿದಾಗ ಅವರ ಗಮನ ಮತ್ತು ಮಾನ್ಯತೆ ಶಿಶ್ನದ ಕಡೆಗೆ ಹರಿಯಿತು. ಮಿಶ್ರ ಅಭಿಪ್ರಾಯಗಳು ಮತ್ತು ಅವುಗಳಿಂದ ಹುಟ್ಟಿದಂತಹ ವಿವಿಧ ಸಿದ್ಧಾಂತಗಳು ಹುಟ್ಟಿದಂತೆ, ಇಷ್ಟಾದರೂ ಮಾತೃ ಪ್ರಾತಿನಿಧ್ಯವನ್ನು ಮಾನ್ಯ ಮಾಡುವವರು ಇದ್ದರು. ಹಾಗೆಯೇ ಪಿತೃ ಪ್ರಾಧಾನ್ಯತೆಯನ್ನು ಒಪ್ಪುವವರು ಶಿಶ್ನ ಸಂಕೇತಗಳನ್ನು ರೂಪಿಸಲಾರಂಭಿಸಿರಬೇಕು. ಆದರೆ, ಸ್ತ್ರೀ ಮತ್ತು ಪುರುಷ ಅಥವಾ ಪ್ರಕೃತಿ ಮತ್ತು ಪುರುಷ ಇಬ್ಬರನ್ನೂ ಪರಿಗಣಿಸಿದವರು ಇಬ್ಬರ ಸಂಕೇತಗಳನ್ನೂ ಕ್ರೋಢೀಕರಿಸಿದರು. ಲಿಂಗ ಮತ್ತು ಪಾಣಿವಟ್ಟ(ಪಾಣಿಪೀಠ)ವನ್ನು ಜೊತೆಯಾಗಿ ಕಂಡರು. ಲಿಂಗವು ಶಿಶ್ನದ ಸಂಕೇತವಾದರೆ, ಪಾಣಿವಟ್ಟವು ಯೋನಿಯ ಸಂಕೇತವಾಯಿತು. ತಂತ್ರ ಸಾಧನೆಯಲ್ಲಿ ಈ ಎರಡರ ಐಕ್ಯತೆ ಬಹು ಮುಖ್ಯವಾದ ಅಂಶವಾಗಿರುತ್ತದೆ. ಶಿಶ್ನವು ಶಿವ-ಆದರೆ, ಯೋನಿಯು ಶಕ್ತಿಯಾಯಿತು.

ನಾನಾಬಗೆಯ ಯಂತ್ರಮಂತ್ರ ಮತ್ತು ತಂತ್ರಗಳಲ್ಲಿ ಈ ಭಾಗ ಬಹು ಮುಖ್ಯವಾಗಿ ಪರಿಗಣಿತವಾಗುತ್ತದೆ.

ಭಾರತದ ತಂತ್ರ ಸಾಧನೆಯಲ್ಲಿ ಯೋನಿ ಮತ್ತು ಲಿಂಗದ ಮಹತ್ವವು ವಿಶಿಷ್ಟವಾದುದು. ಅದನ್ನು ಮುಂದೆ ತಿಳಿಯೋಣ.



ಜಪಾನಿನಲ್ಲಿ ಶಿಶ್ನದ ಹಬ್ಬ


ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಸಂಘ ಪರಿವಾರಿಗಳ ಬೂಟಾಟಿಕೆ

ರೇಪ್ ವಿರುದ್ಧ ಬೆಂಗಳೂರಿನ ಬೀದಿಬೀದಿಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಸಂಘ ಪರಿವಾರಿಗರಂತೂ ಗಂಟಲು ಹರಿಯುವಂತೆ ಕಿರಚುತ್ತಿದ್ದಾರೆ. ವಾಸ್ತವದಲ್ಲಿ ಮಹಿಳೆಯರ ವಿರುದ್ಧ ಹೆಚ್ಚಿರುವ ದೌರ್ಜನ್ಯ ಪ್ರಕರಣಗಳು ಒಂದು ಅಖಿಲ ಭಾರತ ಮಟ್ಟದ ವಿದ್ಯಮಾನವಾಗಿದೆ. ಭಾರತದಲ್ಲಿ ಇಂದು ಮಹಿಳೆಯರ ವಿರುದ್ಧ ಬರೀ ಅತ್ಯಾಚಾರ (ರೇಪ್) ಒಂದೇ ಅಲ್ಲ, ವರದಕ್ಷಿಣೆ ಕಿರುಕುಳ, ಕೌಟುಂಬಿಕ ಹಿಂಸೆ, ದೈಹಿಕ ಹಲ್ಲೆ ಮಾನಸಿಕ ಯಾತನೆ ಮುಂತಾದ ಹಲವಾರು ಬಗೆಯ ದೌರ್ಜನ್ಯಗಳೂ ನಡೆಯುತ್ತವೆ. ಕೆಲವು ಪ್ರಕರಣಗಳು ದಾಖಲಾಗುತ್ತವೆ, ಕೆಲವು ದಾಖಲಾಗುವುದೇ ಇಲ್ಲ. ದಾಖಲಾದ ಪ್ರಕರಣಗಳಲ್ಲಿಯೂ ಶಿಕ್ಷೆಯ ಪ್ರಮಾಣ ತೀರಾ ಕಡಮೆ ಇದೆ. ಉದಾಹರಣೆಗೆ ರಾಷ್ಟ್ರೀಯ ಮಟ್ಟದಲ್ಲಿ ಮಹಿಳಾ ಅತ್ಯಾಚಾರ ಪ್ರಕರಣಗಳನ್ನು ಪರಿಗಣಿಸಿದಾಗ ಪ್ರತಿ ನೂರು ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತಿರುವುದು ಕೇವಲ 24ರಲ್ಲಿ ಮಾತ್ರ. 'ಮಾದರಿ' ರಾಜ್ಯ ಎನ್ನಲಾದ ಗುಜರಾತಿನ 2012ರ ದಾಖಲೆಗಳನ್ನು (ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆ) ನೋಡಿದರೆ ಯಾರಾದರೂ ಚಕಿತರಾಗಬೇಕು:


ಅಪರಾಧ	ಶಿಕ್ಷೆ ಆಗಿರುವ ಪ್ರಕರಣಗಳು	ರಾಷ್ಟ್ರೀಯ ಸರಾಸರಿ
ವರದಕ್ಷಿಣೆ ಸಾವು	0	31.9
ಮಾನಭಂಗ ಉದ್ದೇಶದಿಂದ ಹಲ್ಲೆ	1.6	23.5
ಅತ್ಯಾಚಾರ	15.3	23.1
ಪತಿ ಯಾ ಆತನ ಸಂಬಂಧಿಗಳಿಂದ ಕಿರುಕುಳ	3.5	14.8
ಅಪಹರಣ	6.5	20.4
ಮಾನಾಪಮಾನ	20.0	36.9
ಅಪರಾಧ	ಒಟ್ಟು ಪ್ರಕರಣಗಳು	ರಾಜ್ಯಗಳ ಪಟ್ಟಿಯಲ್ಲಿ ಸ್ಥಾನ
ಪತಿ ಯಾ ಆತನ ಸಂಬಂಧಿಗಳಿಂದ ಕಿರುಕುಳ	6658	28ರಲ್ಲಿ 6ನೆ
ಅಪಹರಣ	1527	8/28
ಮಾನಾಪಮಾನ	93	13/28
ಮಾನಭಂಗ ಉದ್ದೇಶದಿಂದ ಹಲ್ಲೆ	745	14/28
ವರದಕ್ಷಿಣೆ ಸಾವು	21	20/28
ಅತ್ಯಾಚಾರ	473	19/28






ಬೂಸಿ ಬಸ್ಯ... ಮೋಡಿ!

32



ಸಂಘ ಪರಿವಾರಿಗರು ಎಂದಾದರೂ ಗುಜರಾ[illegible] ಈ ಕೆಟ್ಟ ದಾಖಲೆ ವಿರುದ್ಧ ಪ್ರತಿಭಟನೆ ಬಿಡಿ, ಸೊ[illegible] ಕೂಡಾ ಎತ್ತಿದ್ದಿದೆಯೇ? ಇವರು ನಮ್ಮದೇ ರಾಜ್ಯದ[illegible] ಪಬ್ ದಾಳಿ, ಹೋ ಸ್ಟೇ ದಾಳಿಗಳಲ್ಲಿ ಮಹಿಳೆಯರ[illegible] ಹಲ್ಲೆ ಸದನದಲ್ಲಿ ಬ್ಲೂಫಿಲಂ ವೀಕ್ಷಣೆ, ಸಚಿವನಿಂದ ಸ್ನೇಹಿ[illegible] ಹೆಂಡತಿಯ ಅತ್ಯಾಚಾರ ನಡೆದಾಗಲೂ ಖಂಡಿಸ[illegible] ಗಪ್‌ಚುಪ್ ಆಗಿದ್ದವರು. ಇಂತಹ ಸಂಘ ಪರಿವಾರಿಗ[illegible] ಇವತ್ತು ಕರ್ನಾಟಕ ಸರ್ಕಾರವನ್ನು ವಜಾಗೊಳಿಸಬೇ[illegible] ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದೆಲ್ಲ ಕೂಗಾಡು[illegible] ರಣರಂಪ ಮಾಡುತ್ತಿರುವುದು ಶುದ್ಧ ಬೂಟಾಟಿಕೆಯಲ್ಲ[illegible] ಇನ್ನೇನು.

(ಆಧಾರ: www.truthofgujarat.co



ಕಲ್ಯಾಣ ಕ್ರಾಂತಿಯ ಹರಿಕಾರ ಬಸವಣ್ಣ



ಭಾರತದ ಚರಿತ್ರೆಯಲ್ಲಿ 12 ನೆಯ ಶತಮಾನವು ಬಹಳ ಮಹತ್ವದ್ದು. ಬಸವಣ್ಣನೆಂಬ ಮಹಾಮಾನವ ಬುದ್ಧನ ನಂತರ ಬಹುದೊಡ್ಡ ಕ್ರಾಂತಿ ಎಸಗಿದನು. ಜಾತಿ, ವೈದಿಕರ ಶೋಷಣೆ, ಪೂಜೆ, ಯಜ್ಞ ಹವನ ಹೋಮ, ಕಂದಾಚಾರ, ಪ್ರಾಣಿಬಲಿ, ಸ್ತ್ರೀ ಹತ್ಯೆ, ಹೀಗೆ ಉಸಿರುಗಟ್ಟಿಸುವ ಕೆಟ್ಟ ವಾತಾವರಣ ಇತ್ತು.

ಎಳೆತನದಲ್ಲಿಯೇ ಜನಿವಾರ ಕಿತ್ತೆಸೆದು, ಹೊಸ ಧರ್ಮದ ಕನಸು ಕಂಡ ಬಸವಣ್ಣ ದೇಶದ ಎಲ್ಲ ಜನರಿಗೂ ಆದರ್ಶಪ್ರಾಯನಾದ. ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಬಸವಣ್ಣನ ಕೊಡುಗೆ ಅಪಾರವಾಗಿದೆ.

1) ವಚನ ಕ್ರಾಂತಿ -ಅಕ್ಷರ ಕ್ರಾಂತಿ ಬಸವಣ್ಣನ ಮೊದಲ ಆದ್ಯತೆ ಆಯಿತು. ಪುರೋಹಿತರ, ಸಂಸ್ಕೃತ ಪಂಡಿತರ ಬೇಧಭಾವಕ್ಕೆ, ಶಿಕ್ಷಣ ವಂಚಿತರಾಗಿದ್ದ ಮಹಿಳೆಯರು, ದಲಿತರು, ಶ್ರಮಿಕ ವರ್ಗಕ್ಕೆ ಬಸವಣ್ಣನ ನೇತೃತ್ವದಲ್ಲಿ ಅಕ್ಷರಾಭ್ಯಾಸ ಮಾಡಿದರು. ಅಫ್ಘಾನಿಸ್ತಾನದ ಶರಣ ಮರುಳುಸಿದ್ಧದೇವರು, ಓಡಿಸ್ಸಾದ ಮಹಾರಾಣಿ ಬೋನ್ತದೇವಿ, ಕಾಶ್ಮೀರದ ಅರಸು ಮಹಾದೇವ ಭೂಪಾಲ, ಮಹಾರಾಷ್ಟ್ರದ ಉರುಲಿಂಗಪೆದ್ದಿ, ತೆಲುಗು ಮಸನೇಶ, ಆಂದಾಳರು, ನಯನಾರರು, ಗುರ್ಜರರು ಮುಂತಾದ ಅನೇಕ



ಭಾಷಿಕರು ಕಲ್ಯಾಣದಲ್ಲಿ ಓದಿ ಕನ್ನಡ ಕಲಿತು ವಚನ ರಚಿಸಿದರು. ಹೊಸ ವಿಚಾರ, ಹೊಸ ಸಿದ್ಧಾಂತ, ಸಮಾಜವಾದ ಸಮಾನತೆ, ವಿಶ್ವಪ್ರೇಮ ಹೀಗೆ ಎಲ್ಲರ ಮನದಲ್ಲಿ ವೈಚಾರಿಕ ಕ್ರಾಂತಿಯ ಹೊಳಹು ಮೂಡಿತು.

2) ಕಾಯಕ ಮತ್ತು ದಾಸೋಹ-ಜಗತ್ತಿಗೆ ಮೊಟ್ಟಮೊದಲು ದುಡಿದು ತಿನ್ನುವ ಮತ್ತು ಉದ್ಯೋಗ ಮಾಡುವುದನ್ನು ಕಲಿಸುವ ಧರ್ಮವೊಂದಿದ್ದರೆ ಅದು ಶರಣ ಧರ್ಮ. ಬಸವಣ್ಣ ಕಾಯಕಕ್ಕೆ ಆದ್ಯಪ್ರಾಶಸ್ತ್ಯ ನೀಡಿದರು. ಪ್ರತಿಯೊಬ್ಬ ದುಡಿಯಲೇ ಬೇಕು, ಇದರಿಂದ ಕಲ್ಯಾಣದ ಸಂಪತ್ತು ಇಮ್ಮಡಿ ಆಯಿತು, ಬಡತನ ದೂರವಾಯಿತು; ಹಸಿವು ಇಲ್ಲವಾಯಿತು. ಕಾರ್ಲ್‌ಮಾರ್ಕ್ಸ್ ದುಡಿಮೆಯ ಘನತೆ ಬಗ್ಗೆ ಹೇಳಿದ್ದಾರೆ, ಆದರೆ ಬಸವಣ್ಣ ಕಾಯಕವೇ ಕೈಲಾಸ ಎಂದು ತೋರಿಸಿದ್ದಾರೆ.

3) ಕೇವಲ ಬ್ರಾಹ್ಮಣರಿಗೆ ಶಿಕ್ಷಣ, ಸಂಸ್ಕಾರ, ಇತ್ಯಾದಿ. ಶೂದ್ರರು, ದಲಿತರು ಕೇವಲ ಸೇವೆಗೆ ಮೀಸಲು. ಅವರಿಗೆ ಗುಡಿಯಲ್ಲಿ ಪ್ರವೇಶವಿಲ್ಲ, ಇಂತಹ ಸಂದಿಗ್ಧ ಸಮಯದಲ್ಲಿ ಬಸವಣ್ಣ ಶೋಷಿತರ ದಾರಿದೀಪವಾಗಿ ಬಂದರು. ಎಲ್ಲರಿಗೂ ಇಷ್ಟಲಿಂಗವನ್ನು ಕೊಟ್ಟು ಉಚ್ಚ ನೀಚ ಎಂಬ ಭೇದಭಾವವನ್ನು ಅಳಿಸಿ ಹಾಕಿದರು.

4) ಬಸವಣ್ಣ ನೈತಿಕ ಕ್ರಾಂತಿ ಮಾಡಿತೋರಿಸಿದರು. 'ನಡೆಯಲ್ಲಿ ಎಚ್ಚತ್ತು, ನುಡಿಯಲ್ಲಿ ತಪ್ಪಿದರೆ ಹಿಡಿದಿರ್ಪ ಲಿಂಗವು ಘಟಸರ್ಪ ನೋಡಾ' ಎಂದು ಬಸವಣ್ಣ ಹೇಳಿದರು. ಆತ್ಮಾವಲೋಕನ ಶರಣರ ಇನ್ನೊಂದು ದೊಡ್ಡ ಮಾರ್ಗ. ಹೆಜ್ಜೆಹೆಜ್ಜೆಗೂ ತಮ್ಮನ್ನು ವಿಮರ್ಶಿಸಿ ಮುಂದೆ ನಡೆಯುವ ದಿಟ್ಟ ಗುಣದವರಾಗಿದ್ದರು.

5) ಸ್ತ್ರೀ ಸಮಾನತೆ - ಇಡೀ ಜಗತ್ತಿನಲ್ಲಿ ಸ್ತ್ರೀಗೆ ಪೂಜ್ಯ ಸ್ಥಾನ ಕೊಟ್ಟವರೆಂದರೆ ಶರಣರು. ಮಹಿಳೆಗೆ ಯಾವುದೇ ಸ್ವಾತಂತ್ರವಿಲ್ಲ, ಅವಳು ಅಪ್ಪನ, ಗಂಡನ, ಮಗನ ಆಶ್ರಯದಲ್ಲಿ ಬದುಕಬೇಕಾಗಿತ್ತು, ಅವಳು ಭೋಗದ ವಸ್ತು ಎಂದು ನಂಬಿದ್ದ ಸಮಾಜದಲ್ಲಿ ಮಹಿಳೆಗೆ ಹೆಚ್ಚಿನ ಸ್ಥಾನಮಾನ ನೀಡಿ ಗೌರವಿಸಿದ ಕೀರ್ತಿ ಶರಣರಿಗೆ ಸಲ್ಲಬೇಕು. ಹೆಣ್ಣು ರಾಕ್ಷಸಿ ಅಲ್ಲ, ಹೆಣ್ಣು ಸ್ವತಃ ಕಪಿಲ ಮಲ್ಲಿಕಾರ್ಜುನ ಎಂದು ಸಿದ್ಧರಾಮರು ಹೇಳಿದ್ದಾರೆ. ಇಂದಿನ ಯುಗದಲ್ಲಿಯೂ ಹೆಣ್ಣಿನ ಮೇಲೆ ಅತ್ಯಾಚಾರ, ಕೊಲೆ, ದೌರ್ಜನ್ಯ ನಡೆಯುತ್ತಿರುವಾಗ ಅಂದಿನ ದಿನಗಳಲ್ಲೇ ಮಹಿಳೆ ಒಬ್ಬಂಟಿಗಳಾಗಿ ಓಡಾಡುತ್ತಿದ್ದಳು.


6) ಅರಿವೇ ಗುರು-ಆಚಾರವೆ ಲಿಂಗ-ಅನುಭಾವವೇ ಜಂಗಮ-ಇದು ಶರಣರ ಆಶಯ. ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೆ ಪ್ರಾಣವಾಗಿ, ಷಟಸ್ಥಲವೇ ಆತ್ಮವಾಗಿ ಬದುಕಿದ ಶರಣರಿಗೆ ಬಸವಣ್ಣನೆ ನಾಯಕ.

ಭಾರತದ ಪ್ರಥಮ ಕ್ರಾಂತಿಕಾರ ಮತ್ತು ಮುಕ್ತ ಚಿಂತಕ ಬಸವಣ್ಣ ಎಂದರೆ ತಪ್ಪಾಗಲಾರದು.

-ಡಾ.ಶಶಿಕಾಂತ ಪಟ್ಟಣ, ಪೂನಾ

ಗೋವಾ ಕನ್ನಡಿಗರು ಬೀದಿ ಪಾಲಾದದ್ದು ಯಾಕೆ ಗೊತ್ತಾ?

ಕರ್ನಾಟಕದಿಂದ ಗೋವಾಕ್ಕೆ ವಲಸೆ ಹೋದ ಕನ್ನಡಿಗರು ಗೋವಾದವರಿಗೆ ಬೇಡವಾದರೆ ಅಡ್ಡಿಯಿಲ್ಲ, ಕನ್ನಡಿಗರಿಗೂ ಗೋವಾದ ವಲಸಿಗರು ಬೇಡ ಎಂದರೆ ಹೇಗಿರುತ್ತದೆ? ಕನ್ನಡಿಗರು ಗೋವಾಕ್ಕೆ 40-50 ವರ್ಷಗಳ ಹಿಂದೆ ವಲಸೆ ಹೋದರೆ ಗೋವಾದವರು 400-500 ವರ್ಷಗಳ ಹಿಂದೆ ಗೋವಾದಿಂದ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಹಾಗೆ ನೋಡಿದರೆ ಇಂದು ಕರ್ನಾಟಕದ ಕರಾವಳಿ ಜಿಲ್ಲೆಗಳು ಹಾಗೂ ಗೋವಾ ಗಡಿಯ ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿರುವ ಕೊಂಕಣಿ ಹಾಗೂ ಮರಾಠಿ ಭಾಷಿಕರೆಲ್ಲ ಪೋರ್ಚುಗೀಸರ ಸಮಯದಲ್ಲಿ ಗೋವಾದಿಂದ ಓಡಿ ಬಂದವರು ತಾನೇ.



ಕರ್ನಾಟಕದಲ್ಲಿ ಗೋವಾಕ್ಕಿಂತ ಹೆಚ್ಚು ಕೊಂ[illegible] ಭಾಷಿಕರಿದ್ದಾರೆ. ಗೋವಾದ ಈಗಿನ ಜನಸಂಖ್ಯೆ ಇರುವ[illegible] ಕೇವಲ 15 ಲಕ್ಷ. ಇದರಲ್ಲಿ ಕೊಂಕಣಿ ಭಾಷಿ[illegible] ಇರುವುದು ಕೇವಲ 10 ಲಕ್ಷ. ಆದರೆ ಕರ್ನಾಟಕ[illegible] ಕೊಂಕಣಿ ಭಾಷಿಕರು ಇಪ್ಪತ್ತು ಲಕ್ಷಕ್ಕೂ ಮಿಕ್ಕಿ ಇದ[illegible] ಇವರೆಲ್ಲ ಆಗ ಕರ್ನಾಟಕಕ್ಕೆ ವಲಸೆ ಬಾರದೇ ಗೋವಾ[illegible] ಉಳಿದಿದ್ದರೆ ಮೊದಲನೆಯದಾಗಿ ಅವರಲ್ಲಿ ಹಲವರು [illegible] ಮೂಲ ಧರ್ಮ ಕಳೆದುಕೊಳ್ಳುತ್ತಿದ್ದರು. ಎರಡನೆಯ[illegible] ಇಂದು ಗೋವಾದ ಜನಸಂಖ್ಯೆ 35 ಲಕ್ಷವಾಗಿ ಇಷ್ಟೊ[illegible] ಬೃಹತ್ ಜನಸಂಖ್ಯೆಯ ಒತ್ತಡದಿಂದ ಗೋವಾದ [illegible] ಬೀಚುಗಳೂ ಅಲ್ಲಿಯ ಜನರ ದಾಸ್ತವ್ಯಕ್ಕೆ ಆಕ್ರಮಿಸಲ[illegible] ಇಡೀ ರಾಜ್ಯ ಕೊಳಗೇರಿಯಾಗಿ ಅವರ ಪ್ರವಾಸೋದ್ಯ[illegible] ಸ್ಥಳವೇ ಇರುತ್ತಿರಲಿಲ್ಲ.

ನಮ್ಮ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಗಳಲ್ಲಿನ ಕೊ[illegible] ಭಾಷಿಕ ಹಿಂದೂಗಳು ಬಿಜೆಪಿ ಪಕ್ಷದ ಕಟ್ಟಾ ಬೆಂಬಲಿ[illegible] ಮಾತ್ರವಲ್ಲ ಅವರಲ್ಲಿ 90% ಜನರು ಆರ್‌ಎಸ್‌[illegible] ಅತಿ ನಿಷ್ಠ ಸದಸ್ಯರೂ ಹೌದು. ಇವರು ಬ[illegible] ಮಾತಿಗಾದರೂ ಗೋವಾದಲ್ಲಿಯ ತಮ್ಮದೇ ಬಿಜೆಪಿ ಸ[illegible] ಅಲ್ಲಿಯ ಕನ್ನಡಿಗರಿಗೆ ಮಾಡಿದ ಘೋರ ಅನ್ಯಾಯ[illegible] ಖಂಡಿಸಲಿಲ್ಲ. ಕರಾವಳಿಯ ಎಲ್ಲಾ ಕ್ಯಾಥೊಲಿಕ್ ಕ್ರೈ[illegible] ಗೋವಾದಿಂದ ವಲಸೆ ಬಂದ ಕೊಂಕಣಿ ಭಾಷಿ[illegible] ಆಗಿದ್ದಾರೆ. ಕರಾವಳಿಯ ಮುಸ್ಲಿಮರಲ್ಲೂ ಗೋವಾ[illegible] ವಲಸೆ ಬಂದ ಕೆಲವು ಕೊಂಕಣಿ ಭಾಷಿಕ ಪಂಗಡಗ[illegible] ಇವರ ಸಂಘಟನೆಗಳೂ ಗೋವಾದ ಕನ್ನಡಿ[illegible] ಸಹಾನುಭೂತಿ ವ್ಯಕ್ತಪಡಿಸದಿರುವುದು ಖೇದಕರ.

ನಾನು ಬೆಳಗಾವಿಯಲ್ಲಿ ಹುಟ್ಟಿ ಬೆಳೆದವನಾದುದ[illegible] ನನಗೆ ಗೊತ್ತಿರುವಂತೆ ಗೋವಾಕ್ಕೆ ಸಂಪೂರ್ಣ ತ[illegible] ಹಾಗೂ ಆಹಾರಧಾನ್ಯ ಪೂರೈಕೆಯಾಗುವುದು ಫಲ[illegible] ನಮ್ಮ ಬೆಳಗಾವಿ ಜಿಲ್ಲೆಯಿಂದ. ಇದನ್ನೇನಾದರೂ ಕನ್ನ[illegible] ನಿಲ್ಲಿಸಿದರೆ ಗೋವಾದವರು ಉಪವಾಸ ಬೀಳಬೇಕಾಗ[illegible] ಸೋಮಾರಿ ಗೋವಾದವರಿಗೆ ಶ್ರಮದಾಯಕ ಕೃಷಿ [illegible] ಒಗ್ಗುವುದಿಲ್ಲ.

ಹಿಂದಿನ 25 ವರ್ಷದಿಂದ ನಾನು ಗಮನಿಸುತ್ತಿರ[illegible] ಗೋವಾದಲ್ಲಿ ಕನ್ನಡಿಗರ ಮೇಲೆ ಯಾವಾಗಲೂ [illegible] ಆಗುವುದು ಮಳೆಗಾಲದಲ್ಲಿಯೇ. ಇದು ಗೋವ[illegible] ಕನ್ನಡಿಗರ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಪಿತ[illegible] ಸಾಕ್ಷಿ. ಮಹಾದಾಯಿ ಕುಡಿಯುವ ನೀರಿನ ಯೋಜ[illegible] ವಿಷಯದಲ್ಲೂ ಗೋವಾ ವಿನಾಕಾರಣ ಕರ್ನಾ[illegible] ಅಡ್ಡಗಾಲು ಹಾಕುತ್ತಿದೆ. ಇದು ಗೋವಾದ ಇನ್ನ[illegible] ದೊಡ್ಡ ಅನ್ಯಾಯ. ವಿಪರೀತ ಕಾರ್ಮಿಕರ [illegible] ಎದುರಿಸುತ್ತಿರುವ ಗೋವಾಕ್ಕೆ ಒಂದು ವೇಳೆ ಕರ್ನಾ[illegible] ಕಾರ್ಮಿಕರು ಹೋಗದಿದ್ದರೆ ಉತ್ತರ ಪ್ರದೇಶ [illegible]


ಪ್ರತಿಭೆ, ದಿಟ್ಟತನ, ಹೃದಯವಂತಿಕೆಯ ಮಿಶ್ರಣ ಎಮ್ಮಾ ಥಾಂಪ್ಸನ್

ಮಗಳು ಎಮ್ಮಾ ಥಾಂಪ್ಸನ್‌ಳನ್ನು ಚಿತ್ರ ನಟಿ ...ವುದು ಎರಿಕ್ ಥಾಂಪ್ಸನ್-ಫಿಲಿಡಾ ಲಾ ದಂಪತಿಗಳಿಗೆ ...ವಾಗಿತ್ತು. ಆದರೆ ನಡೆದದ್ದೇ ಬೇರೆ. ಹೆತ್ತವರ ಹಾಗೆ ...ಕಾರೆಯಾಗಬಯಸದ ಎಮ್ಮಾ ಥಾಂಪ್ಸನ್ ಇಂಗ್ಲಿಷ್ ...ತ್ಯ ಓದಲು ಕೇಂಬ್ರಿಡ್ಜ್ ವಿಶ್ವವಿದ್ಯಾಲಯವನ್ನು ...ಕೊಂಡಳು. ಆಕಸ್ಮಾತ್ತಾಗಿ ಕೇಂಬ್ರಿಡ್ಜ್ ಫುಟ್‌ಲೈಟ್ಸ್ ...ಟರ್ ಕ್ಲಬ್ ಮಾಯೆಗೆ ಮರುಳಾಗಿ ಈಕೆಗೆ ನಟನೆಯ ...ಶುರುವಾಯಿತು. ಅಲ್ಲಿ ನಟನೆಯ ಸೂಕ್ಷ್ಮಗಳನ್ನು ...ಕೊಳ್ಳುವ ಮನಸ್ಸಾಯಿತು. ಪರದೆಯ ಮೇಲೆ ಸಿನಿಮಾ ...ಣ ಮಾಡುವ ಎಷ್ಟೋ ಮಂದಿಗೆ ಒಬ್ಬ ನಟ ಅಥವಾ ... ಎದುರಿಸುವ ಸವಾಲುಗಳು ಗೊತ್ತಿರುವುದಿಲ್ಲ. ...ಯದಲ್ಲಿನ ಸಹಜತೆ, ಸಂಭಾಷಣೆ ಹೇಳುವಲ್ಲಿನ ...ಗಾರಿಕೆ, ಧ್ವನಿಯ ಏರಿಳಿತ, ಮುಖದ ಎಕ್ಸ್‌ಪ್ರೆಶನ್, ...ಂಗ್, ಹಾವ ಭಾವ, ನಿಲ್ಲುವ, ಕೂರುವ, ...ಮುವಲ್ಲಿನ ಸ್ವಭಾವಿಕತೆ, ಕಣ್ಣುಗಳಲ್ಲಿನ ಮಾಂತ್ರಿಕತೆ- ...ದೊಂದೂ ಪ್ರಮುಖವೇ.

...ಗೆ ಎಮ್ಮಾ ಥಾಂಪ್ಸನ್ ತರುಣಿ. ರಕ್ತಗತವಾಗಿ ...ಯನ್ನು ಪಡೆದುಕೊಂಡಿದ್ದವಳು. ಕಲೆಯ ...ವರಣದಲ್ಲಿಯೇ ಬೆಳೆದವಳು. ಜೊತೆಗೆ ಸಿನಿಮಾರಂಗದ ...ವಾಸ್ತವ ಎರಡನ್ನೂ ಅರಿತವಳು. ಸ್ಟೀಫನ್ ಫ್ರೈನಂತಹ ...ಲೇಖಕ, ಪತ್ರಕರ್ತ ಹಾಗೂ ಹ್ಯೂ ಲೌರಿ ತರಹದ ಬರಹಗಾರ, ಸಂಗೀತಗಾರರೊಂದಿಗೆ ನಟನಾ ...ರೀತಿಯ ಕ್ಲಾಸ್‌ರೂಮು ಹಂಚಿಕೊಂಡವಳು. ...ವುಗಳಿಂದ ಎಮ್ಮಾ ಥಾಂಪ್ಸನ್ ರಂಗ ಪ್ರವೇಶಿಸಲು ...ರಾದಳು. "ಮಕ್ಕಳು ನಿಜಕ್ಕೂ ಅದ್ಭುತ ಪ್ರೇಕ್ಷಕರು. ...ು ಚಿತ್ರದ ಕೊನೆಯವರೆಗೂ ತಣ್ಣಗೆ ಕೂತು ನೋಡುತ್ತಾ ... ಬೊಬ್ಬೆ ಹೊಡೆದು ಚಪ್ಪಾಳೆ ತಟ್ಟುವುದು ನನಗೆ ಅಚ್ಚರಿಯ ಸಂಗತಿ" ಎಂದು ಹೇಳುವ ಎಮ್ಮಾ ಥಾಂಪ್ಸನ್‌ಳ ಗ್ರಹಿಕೆ ಕೂಡ ಆಕೆಯ ಈ ಬಗೆಯ ಕಲಿಕೆ ಹಾಗೂ ಅನುಭವದಿಂದ ದಕ್ಕಿದ್ದು.

ಅಚ್ಚರಿ ಎನ್ನಿಸುವುದು ಸಿನಿಮಾ ತಾರೆಯರ ಮಕ್ಕಳಾಗಿ ಹುಟ್ಟಿದ ಎಮ್ಮಾ ತರಹದವರು ಪ್ರಾಥಮಿಕವಾಗಿ ಎಲ್ಲರಂತೆ ನಟನೆಯನ್ನು ಕಲಿಯುವುದು; ಕ್ಯಾಮೆರಾ ಮುಂದೆ ನಿಲ್ಲುವ ಮುನ್ನ ತಮ್ಮನ್ನು ತಾವು ಹದಗೊಳಿಸಿಕೊಳ್ಳಲು ತುಡಿಯುವುದು. ಪರಿಪಕ್ವತೆಯೆಡೆಗೆ ಶ್ರದ್ಧೆ, ಏಕಾಗ್ರತೆ ಅಣಿಗೊಳಿಸುವುದು. ಹಾಸ್ಯನಟಿಯಾಗಿ ತನ್ನ ಕೆರಿಯರ್ ಆರಂಭಿಸಿದ ಈಕೆ ಮೊದಮೊದಲಿಗೆ ಸೋಲನುಭವಿಸಿದರೂ ನಂತರದ ದಿನಗಳಲ್ಲಿ ರಂಗಭೂಮಿ, ಬ್ರಿಟಿಷ್ ಟೆಲಿವಿಷನ್‌ಗಾಗಿ ನಟಿಸಿ ಹೆಸರು ಮಾಡಿ 1992ರಲ್ಲಿ ತೆರೆಕಂಡ 'ಹೊವರ್ಡ್ಸ್ ಎಂಡ್' ಚಿತ್ರದ ಮೂಲಕ ತಾನೊಬ್ಬ ವರನಟಿ ಎಂಬುದನ್ನು ಜಗತ್ತಿಗೆ ಸಾರಿದಳು.

ಜೇಮ್ಸ್ ಐವೊರಿ ನಿರ್ದೇಶನದ ಈ ಚಿತ್ರದಲ್ಲಿ ಆಂಟನಿ ಹಾಪ್‌ಕಿನ್ಸ್ ಎದುರು ನಟಿಸಿ ಆಸ್ಕರ್‌ಗಳಿಸಿ ತನ್ನದೇ ಅಭಿಮಾನಿ ವರ್ಗ ಗಿಟ್ಟಿಸಿಕೊಂಡಳು. ಆಕರ್ಷಕ ಹೆಣ್ಣಾಗಿದ್ದ ಎಮ್ಮಾ ಥಾಂಪ್ಸನ್‌ಳ ಗುಂಗು ಜನರಲ್ಲಿ ಆವರಿಸತೊಡಗಿತು. ನೀಲಿ ಕಣ್ಣು, ಸ್ವರ್ಣ ಕೇಶ, ಸಪೂರ ಸೊಂಟ, ಮೋಹಕ ಕೆನ್ನೆ ಮತ್ತು ಚುಂಬಕ ನೋಟ ಎಮ್ಮಾ ಥಾಂಪ್ಸನ್‌ಳ ಮುಖಾಂತರ ಯುವಮನಸುಗಳ ಮೇಲೆ ಸವಾರಿ ಮಾಡತೊಡಗಿದವು. ಆಮೇಲೆ ನೈಜಕಥೆಯಾಧರಿಸಿದ 'ಇನ್ ದಿ ನೇಮ್ ಆಫ್ ದಿ ಫಾದರ್', ಆಂಟನಿ ಹಾಪ್‌ಕಿನ್ಸ್ ಜೊತೆಗಿನ 'ದಿ ರಿಮೇಯ್ನ್ಸ್ ಆಫ್ ದಿ ಡೇ' ತರಹದ ಚಿತ್ರಗಳಲ್ಲಿ ಅಭಿನಯಿಸಿ ತನ್ನ ಅಪ್ಪಟ ಕಲೆ ಮತ್ತು ಸ್ವಂತ ಶೈಲಿಯಿಂದಲೇ ಮತ್ತಷ್ಟು ಜನಪ್ರಿಯಳಾದಳು. ಆಕೆಯ ಮಾಯಾವಿಗುಣ, ಅವಳ ಮುದ್ದುಮುಖ ಹೊಸ ಅಲೆಯನ್ನೇ



ಉಂಟುಮಾಡಿದವು. ರಸಿಕ ಎದೆಗಳಲ್ಲಿ ಸ್ವಪ್ನಸುಂದರಿಯನ್ನಾಗಿಸಿದವು. ಆ ಮೂಲಕ ಹಾಲಿವುಡ್ ಎಂಬ ಮಹಾವೃಕ್ಷದಲ್ಲಿ ಎಮ್ಮಾ ಥಾಂಪ್ಸನ್ ಎಂಬ ಸುಂದರ, ಕೋಮಲ, ಪುಷ್ಪವೊಂದು ಅರಳತೊಡಗಿತು.

ಎಮ್ಮಾ ಥಾಂಪ್ಸನ್ ತರಹದವರು ಎಂತಹ ವೃತ್ತಿಪ್ರೇಮಿಗಳು ಎಂದರೆ, ಈಕೆ ಚಿತ್ರೀಕರಣದ ವೇಳೆ ಒಬ್ಬ ನಟನನ್ನು ನೋಡುತ್ತಾಳೆ. ಹುಡುಗ ಇಷ್ಟವೆನ್ನಿಸಿ ಆತನೊಂದಿಗೆ ಬೆರೆಯುತ್ತಾಳೆ. ಒಟ್ಟಿಗೇ ನಟಿಸುವುದು, ಒಟ್ಟಿಗೇ ಸಮಯ ಕಳೆಯುವುದು, ಆತನ ನಿರ್ಮಾಣದ ಚಿತ್ರಗಳಲ್ಲಿ ನಟಿಸುವುದು- ಇವೆಲ್ಲಕ್ಕಿಂತ ಮಿಗಿಲಾಗಿ ಆತನನ್ನೇ ಮದುವೆಯಾಗುತ್ತಾಳೆ. ಈಕೆಯ ನೆರಳಿನಂತೆ ಜೊತೆಗಿದ್ದ, ಉಸಿರಿನಂತೆ ಬೆರೆತಿದ್ದ ಆ ವ್ಯಕ್ತಿಯೇ ಕೆನ್ನೆತ್ ಬ್ರನಾಗ್. ದುರಂತವೆಂದರೆ, ಪರಸ್ಪರ ಪ್ರೀತಿಸುವ ಈ ಜೋಡಿ ಒಂದು ದಿನ ವಿವಾಹ ವಿಚ್ಛೇದನ ಪಡೆದು ವಿಚಿತ್ರ ವಿಸ್ಮಯವೆಂಬಂತೆ ಬೇರೆಬೇರೆಯಾಗುತ್ತದೆ.

ಎಮ್ಮಾ ಥಾಂಪ್ಸನ್ ಬಗ್ಗೆ ಕೆದಕುತ್ತಾ ಹೋದಂತೆಲ್ಲಾ ನಮ್ಮನ್ನು ಬೆಚ್ಚಿ ಬೀಳಿಸುವುದು ಆಕೆಯ ಹೊಸತಿನೆಡೆಗಿನ ತುಡಿತ ಮತ್ತು ದಿಟ್ಟತನ. ಕ್ರಿಯಾಶೀಲಜೀವಗಳ ಪಾಡೇ ಇಂಥದ್ದು. ವಿವಾಹ ವಿಚ್ಛೇದನದ ನಂತರ ತುಸು ಅಶಾಂತಿ, ತಳಮಳ ಅನುಭವಿಸಿದ್ದ ಎಮ್ಮಾ ಥಾಂಪ್ಸನ್ ಕೀರ್ತಿಯ ಸವಿ, ತಾರಾಬೆರಗು ಎಲ್ಲವನ್ನೂ ಕಂಡಿದ್ದಳು; ವೃತ್ತಿಬದುಕಿನ ಭ್ರಮೆ, ವೈಯಕ್ತಿಕ ಬದುಕಿನ ವಾಸ್ತವವನ್ನು ಗ್ರಹಿಸಿದ್ದಳು. ಅವಳ ಬದುಕೇ ಎಲ್ಲವನ್ನು ಹೇಳಿಕೊಟ್ಟಿತ್ತು. ಆದ್ದರಿಂದ ಆಕೆ 1995ರಲ್ಲಿ ಪೆನ್ನು, ಹಾಳೆ ಕೈಗೆತ್ತಿಕೊಂಡು 'ಸೆನ್ಸ್ ಅಂಡ್ ಸೆನ್ಸಿಬಿಲಿಟಿ' ಚಿತ್ರಕ್ಕೆ ಚಿತ್ರಕಥೆ ಬರೆದು ನಟಿಸಿದಳು. ಜೇನ್ ಆಸ್ಟನ್ ಬರೆದ ಕಾದಂಬರಿ ಆಧಾರಿತ ಈ ಚಿತ್ರದಲ್ಲಿನ ತನ್ನ ನಟನೆ ಹಾಗೂ ಬರವಣಿಗೆಗೆ ಮತ್ತೊಂದು ಆಸ್ಕರ್ ಪಡೆದು ಲೋಕ ತನ್ನೆಡೆಗೆ ಇನ್ನೊಮ್ಮೆ ತಿರುಗಿ ನೋಡುವಂತೆ ಮಾಡಿದಳು. ಎಮ್ಮಾ ಥಾಂಪ್ಸನ್‌ಗೆ ಅಪಾರ ಜನಪ್ರಿಯತೆ, ಗೌರವ ತಂದು ನೀಡಿದ 'ಸೆನ್ಸ್ ಅಂಡ್ ಸೆನ್ಸಿಬಿಲಿಟಿ' ಚಿತ್ರವು ಗ್ರೆಗ್‌ವೈಸ್ ಎಂಬ ಸಂಗಾತಿಯನ್ನೂ ನೀಡಿತ್ತು. ಈ ಚಿತ್ರದಲ್ಲಿ ಪುಟ್ಟದೊಂದು ಪಾತ್ರ ಮಾಡಿದ್ದ ಗ್ರೆಗ್ ವೈಸ್‌ನ ಜೊತೆ ರೊಮ್ಯಾಂಟಿಕ್ಕಾಗಿ ಮುಂದುವರಿದ ಎಮ್ಮಾ ಥಾಂಪ್ಸನ್ ಒಂದು ಮಗು ಪಡೆದು, ಆಮೇಲೆ ನಾಲ್ಕು ವರ್ಷಗಳ ನಂತರ ಗ್ರೆಗ್‌ನನ್ನೇ ಮದುವೆಯಾದಳು.

ಯಾವುದೇ ಪಾತ್ರವಿದ್ದರೂ ಜೀವ ತುಂಬಬಲ್ಲ ಈ ಮೇಧಾವಿ ಹೆಣ್ಣು ಮುಂದಿನ ದಿನಗಳಲ್ಲಿ ತನ್ನ ತಾಯಿಯೊಡಗೂಡಿ 'ದಿ ವಿಂಟರ್ ಗೆಸ್ಟ್', ಮೈಕ್ ನಿಕೋಲ್ಸ್ ನಿರ್ದೇಶನದಲ್ಲಿ 'ವಿಟ್', ಡಸ್ಟಿನ್ ಹಾಫ್‌ಮನ್ ಜೊತೆಗಿನ 'ಲಾಸ್ಟ್ ಚಾನ್ಸ್ ಹಾರ್ವೆ', 'ಹ್ಯಾರಿ ಪೋಟರ್ ಸೀರೀಸ್', 'ಲವ್ ಆಕ್ಚುಯಲಿ', 'ಸೇವಿಂಗ್ ಮಿ.ಬ್ಯಾಂಕ್ಸ್' ತರಹದ ಅಪರೂಪದ ಸಿನಿಮಾಗಳಲ್ಲಿ ತನ್ನ ಛಾಪು ಮೂಡಿಸುವ ಮೂಲಕ ವಿಚ್ಛೇದನದ ಖಿನ್ನತೆಯಿಂದ ಹೊರಬಂದು ಹೊಸ ಹುರುಪು ಪಡೆಯಲೆತ್ನಿಸಿದ್ದು ಗ್ರೇಟ್.

ಯಾರೋ ರೂಪಿಸಿದ ಪಾತ್ರಕ್ಕೆ ಜೀವ ತುಂಬಬಲ್ಲ, ಯಾರೋ ಬಯಸಿದಂತೆ ಅಭಿವ್ಯಕ್ತಿಸಬಲ್ಲ ನಟ ಅಥವಾ ನಟಿಯೊಬ್ಬಳಿಗೆ ತನ್ನದೇ ಆದ ವ್ಯಕ್ತಿತ್ವ, ಅಭಿರುಚಿ, ಸಿದ್ಧಾಂತ, ಧೋರಣೆ, ನಿಲುವುಗಳನ್ನು ವ್ಯಕ್ತಪಡಿಸಲು ಕವಿ, ಬರಹಗಾರ, ನಾಟಕಕಾರ, ಪತ್ರಕರ್ತನಿಗಿರುವಷ್ಟು ಅವಕಾಶಗಳಿಲ್ಲ ಎಂದೇ ಹೇಳಬಹುದು. ತಾವು ಎಂತಹ ಪಾತ್ರದಲ್ಲಿ, ಎಷ್ಟೇ ಅದ್ಭುತವಾಗಿ ನಟಿಸಿದ್ದರೂ, ತಮ್ಮ ನಟನೆಯ ಮೂಲಕ ಎಷ್ಟೇ ಜನಪ್ರೀತಿ ಗಳಿಸಿದ್ದರೂ ಆ ಪಾತ್ರದ ಮಿತಿ, ಆ ಚಿತ್ರದ ಬೌಂಡರಿಯೊಳಗೇ ತಾವು ಗಿರಕಿ ಹೊಡೆಯಬೇಕಾಗುತ್ತದೆ. 'ನಾನಿರುವುದೆ ನಿಮಗಾಗಿ' ಎಂಬ ರಾಜಕುಮಾರ್ ನೀಡುವ ಆಶ್ವಾಸನೆಯಾಗಲೀ... 'ಈ ಕೈ ಕರ್ನಾಟಕದ ಆಸ್ತಿ' ಎಂಬ ವಿಷ್ಣುವರ್ಧನ್ ಡೈಲಾಗಾಗಲೀ... 'ಉಪ್ಪಿಟ್ಟ ತಮಿಳ್ ಮಗ್ನೆ ನಾನ್ ಮರಕಮಾಟ್ಟೇನ್' ತರಹದ ಶಿಳ್ಳೆ ಉತ್ಪಾದಿಸಬಲ್ಲ ರಜನಿಕಾಂತ್ ಸಿನಿಮಾವೊಂದರ ಹಾಡಿನ ಸಾಲಾಗಲೀ... ಇವನ್ನು ಚಿತ್ರಮಂದಿರದಲ್ಲಿ ನೋಡಿ ಆನಂದಿಸಲಷ್ಟೇ ಚಂದ. ಅಂತಹ ಭರವಸೆ ಹೇಳಿಕೆಗಳು, ಅಭಿಮಾನಪೂರ್ಣ ಸಾಲುಗಳು, ಡೈಲಾಗ್‌ಗಳು ಇಷ್ಟಕ್ಕೂ ಒಬ್ಬ ಬರಹಗಾರನಿಂದ ಸೃಷ್ಟಿಯಾಗಿರುತ್ತವೆ. ಹೀರೋಗಳು ಅಂಥವನ್ನು ಕ್ಯಾಮೆರಾ ಮುಂದೆ ಪ್ರಸ್ತುತಪಡಿಸುವ ಮಾಧ್ಯಮವಷ್ಟೇ ಎಂಬುದನ್ನು ಮರೆಯಬಾರದು.

ಇದನ್ನೆಲ್ಲಾ ಯಾಕೆ ಬರೆಯಬೇಕಾಯಿತು ಎಂದರೆ, ನಟನೊಬ್ಬ ಅಥವಾ ನಟಿಯೊಬ್ಬಳು ಪಾತ್ರಗಳಲ್ಲಿ ಮಿಂಚುವುದರ ಜೊತೆಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ತಮ್ಮ ಸ್ವಂತ ನಿಲುವುಗಳೇನು? ಪರದೆಯಾಚೆಗಿನ ತಮ್ಮ ಐಡಿಯಾಲಜಿ ಏನು? ಎಂಬುದನ್ನು ಜಗತ್ತಿನೆದುರು ಆಗಾಗ ಪ್ರಸ್ತುತಪಡಿಸಬೇಕಾಗುತ್ತದೆ. ನಿರ್ದೇಶಕನೊಬ್ಬನ ಆಲೋಚನೆ, ಸಂಭಾಷಣಾಕಾರನೊಬ್ಬನ ಆಶಯವನ್ನು ಹೊತ್ತು ಮೆರೆಯುವುದರ ಜೊತೆಗೆ ಪಾತ್ರದಾಚೆಗಿನ ತಮ್ಮನ್ನು ಲೋಕದೆದುರು ತೆರೆದುಕೊಳ್ಳಬೇಕಾಗುತ್ತದೆ; ಬದುಕಿನ ಜೊತೆಜೊತೆಗೆ ತಮ್ಮ ಸುತ್ತಮುತ್ತಲಿನ ಆಗುಹೋಗುಗಳಿಗೆ ಪ್ರಾಮಾಣಿಕವಾಗಿ, ಕೃತಕವೆನ್ನಿಸದ ಹಾಗೆ ಸ್ಪಂದಿಸಬೇಕಾಗುತ್ತದೆ. ಆದ್ದರಿಂದ ವ್ಯಕ್ತಿಯಾಗಿ ಎಮ್ಮಾ ಥಾಂಪ್ಸನ್ ಒಂದು ಗಾಜಿನಮನೆ. ಈಕೆ ರಂಗದ ಮೇಲೆ, ಕ್ಯಾಮೆರಾ ಮುಂದೆ ವ್ಯಕ್ತಪಡಿಸುವುದು ತನ್ನದಲ್ಲದ ಕಥೆಗೆ, ತಾನಲ್ಲದ ಪಾತ್ರಗಳಿಗೆ ಒಗ್ಗಿಕೊಂಡು. ಇಂಗ್ಲೆಂಡಿನಂತಹ ವಾತಾವರಣದಲ್ಲಿ ಡಾಂಬಿಕತೆ, ಸಿದ್ಧಸೂತ್ರಗಳಿಗೆ ಕಟ್ಟುಬಿದ್ದ ರೆಡಿಮೇಡ್ ಜನರ ನಡುವೆ ಈಕೆ ತನ್ನ ಆತ್ಮಸಾಕ್ಷಿಗೆ ಪೂರಕವಾಗಿ ನಡೆದುಕೊಳ್ಳುವ ಹೆಣ್ಣು.

"ನಾನು ನಾಸ್ತಿಕಳು. ನನ್ನನ್ನು ಸ್ವತಂತ್ರವಾದಿ ಅರಾಜಕವಾದಿ ಎಂದು ಬಣ್ಣಿಸಬಹುದು. ಧರ್ಮವನ್ನು ನಾನು ಭಯ ಮತ್ತು ಸಂಶಯದಿಂದ ನೋಡುತ್ತೇನೆ. ನಾನು ದೇವರನ್ನು ನಂಬುವುದಿಲ್ಲ ಮಾತ್ರವಲ್ಲ, ಧಾರ್ಮಿಕ ವ್ಯವಸ್ಥೆಯೇ ದಾರುಣ ಎಂದು ನಂಬಿದ್ದೇನೆ. ಬೈಬಲ್ ಮತ್ತು ಕುರ್‌ಆನ್‌ನಲ್ಲಿರುವ ಕೆಲವು ಅಂಶಗಳು ನನ್ನಲ್ಲಿ ವ್ಯಥೆ ಮೂಡಿಸುವುದರಿಂದ ನಾನು ಅವುಗಳನ್ನು ವಿರೋಧಿಸುತ್ತೇನೆ. ಆದರೂ ಧರ್ಮಗಳಲ್ಲಿರುವ ನೀತಿ ಶಾಸ್ತ್ರಗಳು ಮತ್ತು ನೈತಿಕ ನಿಲುವುಗಳು ಚೆನ್ನಾಗಿವೆ ಎಂದು ಭಾವಿಸುತ್ತೇನೆ" ಎಂದು ಎಮ್ಮಾ ದೇವರು ಮತ್ತು ಧರ್ಮಗಳ ಬಗ್ಗೆ ನೇರವಾಗಿ, ನಿಷ್ಠುರವಾಗಿ ಮಾತನಾಡುತ್ತಾಳೆ.

ಹಾಗೆಯೇ ಹೋರಾಟ ಮನೋಭಾವದ ಈ ಅಸಾಧಾರಣ ಸ್ತ್ರೀ ಬ್ರಿಟನ್ನಿನ 'ಲೇಬರ್ ಪಾರ್ಟಿ'ಯನ್ನು ಬೆಂಬಲಿಸುತ್ತಲೇ "ಸ್ಕಾಟ್ಲೆಂಡ್ ಸ್ವಾಟ್ಲಾಂಡ್ ವಿಚಾರದಲ್ಲಿ ಇಂಗ್ಲೆಂಡ್ ಕೆಟ್ಟದಾಗಿ ನಡೆದುಕೊಂಡಿದೆ" ಎನ್ನುತ್ತಲೇ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಸ್ಕಾಟ್ಲೆಂಡ್‌ಅನ್ನು ವಿರೋಧಿಸುತ್ತಾಳೆ.

ಪ್ರಪಂಚದ ಎಲ್ಲಾ ಮಹಿಳೆಯರೂ ಸ್ವಾಭಿಮಾನದಿಂದ ಬಾಳಬೇಕು, ಎಲ್ಲ ಬಡವರಿಗೂ ಅನ್ನ ಸಿಕ್ಕಬೇಕು ಎಂದು ಬಯಸುವ ಎಮ್ಮಾ ಮಾನವಹಕ್ಕುಗಳಿಗಾಗಿ ಹೋರಾಡುವ ಆಕ್ಷನ್ ಏಡ್ ಎಂಬ ಸಂಸ್ಥೆಯ ಸಕ್ರಿಯ ಕಾರ್ಯಕರ್ತೆ. ಪ್ಯಾಲೆಸ್ಟೀನಿನ ಜನರ ಪರ ದನಿಯೆತ್ತುವ ಎಮ್ಮಾ ಇಸ್ರೇಲ್ ಎಸಗುವ ದೌರ್ಜನ್ಯ, ಆಕ್ರಮಣವನ್ನು ದಿಟ್ಟತನದಿಂದ ಖಂಡಿಸುವ ಜನಪರಳು.

ಮೇಲ್ನೋಟಕ್ಕೆ ಮುಗುಳ್ನಗುತ್ತಲೇ ಒಳಗೊಳಗೇ ಶೋಷಿತರ, ದಮನಿತರ, ಅಸಹಾಯಕರ ಪರ ಕಾಳಜಿ ಹೊಂದಿರುವ ಎಮ್ಮಾ ಥಾಂಪ್ಸನ್ ಸ್ವಭಾವತಃ ಭಾವಜೀವಿ. ಹದಿನಾಲ್ಕು ವರ್ಷದ ಮಗಳನ್ನು ಹೊಂದಿರುವ ಈಕೆಗೆ "ತಾಯ್ತನವೆಂಬುದು ಒಂದು ಫುಲ್ ಟೈಮ್ ಕಾಯಕ" ಎನ್ನುವ ನಂಬಿಕೆ. ಒಬ್ಬ ದತ್ತುಪುತ್ರನನ್ನೂ ಹೊಂದಿರುವ ಎಮ್ಮಾ ಮಕ್ಕಳ ಪ್ರೀತಿಗಾಗಿ, ಬದುಕಿನುದ್ದಕ್ಕೂ ತನ್ನ ಒಡನಾಡಿಯಾಗಿ ಇರಬಲ್ಲ ಪತಿ ಗ್ರೆಗ್‌ವೈಸ್‌ನ ಸಾಂಗತ್ಯಕ್ಕಾಗಿ ಹಂಬಲಿಸುವ ಕೌಟುಂಬಿಕ ಜೀವ. ಅಡುಗೆ ಮಾಡಬಲ್ಲ, ಮಕ್ಕಳನ್ನು ರಂಜಿಸಬಲ್ಲ, ಗಣಿತ ಅರ್ಥಮಾಡಿಕೊಂಡು ಹೋಂವರ್ಕ್ ಮಾಡಿಸಬಲ್ಲ, ಕೈತೋಟದ ಮೇಲೆ ನಿಗಾ ಇಡಬಲ್ಲ, ಎಚ್ಚರದಿಂದ ಕಾರು ಚಲಾಯಿಸಬಲ್ಲ ಗಂಡ ಗ್ರೆಗ್‌ನನ್ನು ಬಿಟ್ಟಿರಲಾರಳು. ವಿಶ್ವದ ಪ್ರೀತಿಯ ಸಂಕೇತದಂತಿರುವ, ಅಪರೂಪದ ಪುಸ್ತಕದಂತಿರುವ ಎಮ್ಮಾ ತನ್ನ ಬರಹವನ್ನು ಸಿನಿಮಾಗಳಿಗೆ ಮಾತ್ರ ಸೀಮಿತಗೊಳಿಸದೆ 2012ರಲ್ಲಿ 'ದಿ ಫರ್ದರ್ ಟೇಲ್ ಆಫ್ ಪೀಟರ್ ರ್‍ಯಾಬಿಟ್' ಎಂಬ ಪುಸ್ತಕವನ್ನು ಹೊರತಂದಿದ್ದಲ್ಲದೇ 'ದಿ ಕ್ರಿಸ್ಮಸ್ ಟೇಲ್ ಆಫ್ ಪೀಟರ್ ರ್‍ಯಾಬಿಟ್' ಎಂಬ ತನ್ನ ಎರಡನೇ ಕೃತಿಯನ್ನೂ ಬರೆದಿರುವುದು ಐವತ್ತೈದು ವರ್ಷದ ಈ ಚೇತನಶೀಲೆಯಲ್ಲಿರುವ ಸಾಹಿತ್ಯದೆಡೆಗಿನ ಪ್ರೀತಿ, ಆಸಕ್ತಿಯ ಪ್ರತೀಕ.

■ ಹೃದಯಶಿವ

...ರದ ಕಾರ್ಮಿಕರು ಅಲ್ಲಿ ಬಂದು ಸೇರಿಕೊಳ್ಳುತ್ತಿದ್ದರು. ...ದನ್ನು ಗೋವಾ ಸರಕಾರ ನೆನಪಿಟ್ಟುಕೊಳ್ಳಲಿ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

...ಗೋವಾದ ಸರಕಾರ ಅಲ್ಲಿಯ ಬೈನಾ ಬೀಚಿನಲ್ಲಿ ...ೀ ಮಳೆಯ ನಡುವೆ ಕನ್ನಡಿಗರ 75 ಮನೆಗಳನ್ನು ... ನೂರಾರು ಅಸಹಾಯಕ ಬಡ ಕನ್ನಡಿಗರನ್ನು ...ಪಾಲು ಮಾಡಲು ಗುಪ್ತ ಕಾರಣವಿದೆ. ಅದೇನೆಂದರೆ ...ವಾದ ಕನ್ನಡಿಗರು 2012 ಗೋವಾ ವಿಧಾನಸಭೆಯ ...ವಣೆಯಲ್ಲಿ ಮತ್ತು ಇತ್ತೀಚೆಗೆ ನಡೆದ ಲೋಕಸಭೆ ...ವಣೆಯಲ್ಲಿ ಬಿಜೆಪಿಯ ವಿರುದ್ಧ ಮತ ಚಲಾಯಿಸಿದರು ... ಗುಮಾನಿ ಅಲ್ಲಿಯ ಬಿಜೆಪಿ ಪಕ್ಷದವರಿಗೆ ಇದೆ. ...ಂದ ಅಲ್ಲಿಯ ಬಿಜೆಪಿ ಸರಕಾರ ಈಗ ಕನ್ನಡಿಗರ ...ದ್ಧ ಹೀಗೆ ಸೇಡು ತೀರಿಸಿಕೊಳ್ಳುತ್ತಿದೆಯಂತೆ. ...ಅಂದರೆ ಬಿಜೆಪಿಯವರಿಗೆ ಮಾನವತೆಗಿಂತ ರಾಜಕೀಯ ... ಮುಖ್ಯ. ನಾವೆಲ್ಲ ಹಿಂದೂ ನಾವೆಲ್ಲ ಒಂದು. ... ಮುಖ್ಯವಲ್ಲ - ಎಂಬ ಬಿಜೆಪಿ ನೀತಿ ಕೇವಲ ...ಷಣೆಗೆ ಮಾತ್ರ ಸೀಮಿತವೇ?!

-ಅಭಿಷೇಕ್ ಎ. ಪಡಿವಾಳ್, ಸುಳ್ಯ

'ಕರಿಯ ಕಣ್‌ಬಿಟ್ಟ' ದಲಿತರ ದಮನದ ಕತೆ

...2014 ಜುಲೈ 23 ರ ಸಂಚಿಕೆ ಬಲು ...ದಾಯಕವಾಗಿ ಮೂಡಿಬಂದಿದೆ. ಅಭಿನಂದನೆಗಳು. ...ನಾನು ಗಮನಿಸಿದಂತೆ ಪಿ.ಲಂಕೇಶ್‌ರವರ ನಂತರವೂ ...ೀ ಸಶಕ್ತ ಮತ್ತು ಸ್ಪಷ್ಟ ವೈಚಾರಿಕ ವಿಚಾರಧಾರೆ ಹೊಂದಿ ...ತ್ರ, ಅಸಹಾಯಕರ, ಅಪಮಾನಿತರ, ಅವಕಾಶವಂಚಿತರ, ...ಷಿತರ ಧ್ವನಿಯಾಗಿ ಪತ್ರಿಕೆ ಮೂಡಿಬರುತ್ತಿದೆ. ...ಮುಖ್ಯವಾಗಿ ಈ ಸಂದರ್ಭದಲ್ಲಿ ಈ ಸಲದ ...ಯಲ್ಲಿ ಕವಿತಾ ಲಂಕೇಶ್‌ರವರ ನಿರ್ದೇಶನದ 'ಕರಿಯ ...ಬಿಟ್ಟ' ಸಿನಿಮಾದ ಬಗ್ಗೆ ಎಸ್.ಎಫ್.ಯೋಗಪ್ಪನವರ ...ಕವಾಗಿ ವಿಶ್ಲೇಷಿಸಿದ್ದಾರೆ. ಚಿತ್ರದ ವಿಮರ್ಶೆ ಅದ್ಭುತವಾಗಿ ಮೂಡಿಬಂದಿದೆ.

ನಾನು ಮತ್ತು ನನ್ನಂಥ ತಳಸಮುದಾಯದ ಮನಸ್ಸುಗಳಿಗೆ ಆ ಸಿನಿಮಾದ ನಿರೂಪಣೆ ಮುದ ನೀಡಿತು ಮತ್ತು ಯೋಚನೆಗೆ ತೊಡಗುವಂತೆ ಪ್ರೇರೇಪಿಸಿತು. ಈ ಲೇಖನ ಸಿನಿಮಾದಲ್ಲಿನ ವಸ್ತು, ಅಂಶಗಳು ತೆರೆದಿಟ್ಟಿದು. ಆ ಕತೆ ಒಬ್ಬಿಬ್ಬರ ಕಥೆಯಲ್ಲ, ಈ ಭೂಮಿಯ ಕೋಟಿಕೋಟಿ ದಮನಿತರ ಬದುಕಿನ ಕಥೆಯೂ ಹೌದು.

ಹೇಳದಿರಲು, ಸುಮ್ಮನಿರಲು ಆಗದೇ ತವಕಿಸುವ, ಒದ್ದಾಡುವ ಮನಸ್ಸು ಕನಸ್ಸುಗಳಿಗೆ ಅರಳಲು ಆಸರೆಯಾಗಲಿ ಪತ್ರಿಕೆ.

-ಹನುಮಂತಪ್ಪ ನಾಂಗೋಲಿ, ಗದಗ

ಮಂಡ್ಯ ನಾಗೇಶ್‌ಗೆ ಧನ್ಯವಾದಗಳು

ಮಂಡ್ಯದಲ್ಲಿನ ಹೆಗ್ಗಣಗಳನ್ನೆಲ್ಲಾ ಬಿಲಗಳಿಂದ ಎಬ್ಬಿಸಿ, ಬಯಲಿಗೆಳೆತಂದು, ಅವುಗಳ ಭ್ರಷ್ಟಾಚಾರವನ್ನು ಬೆತ್ತಲೆಗೊಳಿಸಿದ ಮಂಡ್ಯ ನಾಗೇಶ್‌ರವರಿಗೆ ಕೋಟಿ ಕೋಟಿ ಧನ್ಯವಾದಗಳು. ತಾನು ಕಲಿಯುಗದ ಕರ್ಣ ಎಂದು ಪೋಸ್ ಕೊಡುವ ಅಂಬಿಯನ್ನು ನೆನಸಿಕೊಂಡರೆ ವಾಕರಿಗೆ ಬರುತ್ತದೆ. ಈತನಿಗೆ ಮಂತ್ರಿಗಿರಿ ಬೇರೆ; ಅದರಲ್ಲೂ ವಸತಿ ಮಂತ್ರಿ ಮಾಡಿದ್ದಾರೆ ಸಿದ್ದರಾಮಯ್ಯ!! ಮುಡಾ ಸೈಟುಗಳನ್ನು ಲಪಟಾಯಿಸಲು ಮಂತ್ರಿಗಿರಿಯನ್ನು ಚೆನ್ನಾಗಿಯೇ ಬಳಸಿಕೊಂಡಂತಿದೆ. ಇಂತಹವರನ್ನು ಮಂತ್ರಿಮಂಡಲದಿಂದ ಮೊದಲು ಕಿತ್ತು ಹಾಕಬೇಕು.


ಅಂಬಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಿದರೆ, ಮಂಡ್ಯದ ಜನ ಒಂದೇ ಒಂದು ಮತವನ್ನು ಹಾಕಬಾರದು.

- ವೀರಖ್ಯಾತಯ್ಯ, ಬೆಂಗಳೂರು

16.7.2014 ರ ಪತ್ರಿಕೆಯಲ್ಲಿ ಪ್ರಕಟವಾದ "ಕಣ್ಣೀರಿಟ್ಟ ಶೃತಿ, ಚಂದ್ರಚೂಡನ ಕಳ್ಳಾಟ" ಶಿರೋನಾಮೆಯ ಲೇಖನ ಓದಿ ತೀರಾ ನೋವಾಯಿತು. ಅಷ್ಟೆ ಸಿಟ್ಟು ಬಂತು ಚಂದ್ರಪೀಡನ ಮೇಲೆ. ಶೃತಿಯವರು ಅಭಿನಯಿಸಿದ ಅನೇಕ ಸಿನಿಮಾಗಳನ್ನು ನೋಡಿದ್ದೇನೆ. ಅವರಲ್ಲಿ ನನ್ನ ತಂಗಿಯನ್ನು ಮಗಳನ್ನು ಕಲ್ಪಿಸಿಕೊಂಡಿದ್ದೇನೆ. ಸಿನಿಮಾಗಳಲ್ಲಿ ಅವರದು ದುರಂತ ಜೀವನ. ಅವರ ನೈಜ ಜೀವನದಲ್ಲಿ ಅದನ್ನೇ ಅನುಭವಿಸುತ್ತಿದ್ದಾರೆ. ಇದನ್ನು ನೋಡಿ ಸಿನಿಮಾ ದಿಗ್ಗಜರು, ನಾಗರಿಕ ಸಮಾಜ, ಪೊಲೀಸ್ ವ್ಯವಸ್ಥೆ ಏನು ಮಾಡುತ್ತಿದೆ? ತಿಳಿಯುತ್ತಿಲ್ಲ.

ಎಲ್ಲಿ ಸ್ತ್ರೀಯರನ್ನು ಗೌರವಿಸುತ್ತೇವೆಯೋ ಅಲ್ಲಿ ದೇವರು ಇರುತ್ತಾನೆ. ಇದು ಧರ್ಮಗ್ರಂಥದಲ್ಲಿ ಕಂಡುಬರುವ ಸತ್ಯ. ಈಗಲಾದರೂ ಸಂಬಂಧಪಟ್ಟವರು ಸರಿಯಾದ ಕ್ರಮ ಜರುಗಿಸಿ ಶೃತಿಯನ್ನು ಬಾಳಗೊಡಲು ಬಿಡಬೇಕು.

-ಕೆ. ಸಿದ್ದನಗೌಡ, ಉಜ್ಜಿನಿ



ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 06-08-2014 RNI No. KARKAN2005/1464

ರಮೇಶ್ ಮತ್ತೆ ಕಿರುತೆರೆಗೆ




ಒಂದು ಕಾಲದಲ್ಲಿ 'ಅಮೃತ ವರ್ಷಿಣಿ', 'ಚಂದ್ರಮುಖಿ ಪ್ರಾಣಸಖಿ', 'ನಮ್ಮೂರ ಮಂದಾರ ಹೂವೇ', 'ಅಮೆರಿಕಾ ಅಮೆರಿಕಾ', 'ಓ ಮಲ್ಲಿಗೆ' ತರಹದ ಲವ್ ಸ್ಟೋರಿಗಳಿಗೆ ಹೇಳಿಮಾಡಿಸಿದಂತಿದ್ದ ಮುಖ, ಮೀಸೆ, ನಗು, ಕಣ್ಣು ಇತ್ಯಾದಿಗಳನ್ನು ಹೊಂದಿದ್ದ ರಮೇಶ್ ಅರವಿಂದ್ ಬರಬರುತ್ತಾ ಒಂದೇ ಬಗೆಯ ಭಾವಪ್ರಧಾನ ಪಾತ್ರಗಳಿಗೆ ಬ್ರಾಂಡ್ ಆಗಿ ನೆಲಕಚ್ಚಿ ಮಾರ್ಕೆಟ್ ಇಲ್ಲವಾಗಿಸಿಕೊಂಡರು. ಆಮೇಲೆ 'ಉಲ್ಟಾ ಪಲ್ಟಾ', 'ಕುರಿಗಳು ಸಾರ್ ಕುರಿಗಳು', 'ಕತ್ತೆಗಳು ಸಾರ್ ಕತ್ತೆಗಳು', 'ಕೋತಿಗಳು ಸಾರ್ ಕೋತಿಗಳು' ತರಹದ ಕಾಮಿಡಿ ಸಿನಿಮಾಗಳ ಮೂಲಕ ಮತ್ತೆ ಮೇಲೇಳಲು ಪ್ರಯತ್ನಿಸಿ ಕಡೆಗೆ 'ಆಪ್ತ ಮಿತ್ರ'ದಲ್ಲಿ ವಿಶಿಷ್ಟ ಪಾತ್ರ ಮಾಡಿ ಉಫ್ ಅಂದರು. ಗೆದ್ದ 'ಆಪ್ತ ಮಿತ್ರ' ಒಂದಿಷ್ಟು ಸಿನಿಮಾಗಳನ್ನು ತಂದುಕೊಟ್ಟರೂ ರಮೇಶ್ ತೃಪ್ತರಾಗಲಿಲ್ಲ, ತಾವೇ ನಿರ್ದೇಶನಕ್ಕೆ ಕೈಹಾಕಿ ಕಮಲ್ ಹಾಸನ್ ಜೊತೆ 'ರಾಮಾ ಶಾಮಾ ಭಾಮಾ' ಎಂಬ ಕಾಮಿಡಿ ಚಿತ್ರ ಮಾಡಿ ಹಿಟ್ ಕೊಟ್ಟರು. ಅದೇ ಗುಂಗಿನಲ್ಲಿ 'ಸತ್ಯವಾನ್ ಸಾವಿತ್ರಿ' ಮಾಡಿದರಾದರೂ ಅಷ್ಟಾಗಿ ಸಕ್ಸಸ್ ಕಾಣಲಿಲ್ಲ, ಈ ಮಧ್ಯೆ ಅದೇಕೋ ಒಂದಿಷ್ಟು ಕೆಟ್ಟ ಚಿತ್ರಗಳಲ್ಲಿ ನಟಿಸಿ ಕಂಗಾಲಾದರು. ಅಭಿನಯವನ್ನೇ ಮರೆತವರಂತೆ ಬೋರು ಹೊಡೆಸಿದರು.

ಇಂತಹ ರಮೇಶ್ ಎರಡು ವರ್ಷಗಳ ಹಿಂದೆ ಕಸ್ತೂರಿ ಚಾನಲ್ಲಿಗಾಗಿ 'ಪ್ರೀತಿಯಿಂದ ರಮೇಶ್' ಎಂಬ ಕಾರ್ಯಕ್ರಮದ ನಿರೂಪಣೆಯ ಹೊಣೆ ಹೊತ್ತು ಚಿತ್ರರಂಗದ ಒಂದಿಷ್ಟು ಜನರನ್ನು ಕರೆದು ಮಾತಾಡಿಸಿದ್ದು ನಿಮಗೆಲ್ಲ ಗೊತ್ತಿದೆ. ಈಗ ಅಂಥದ್ದೇ ಒಂದು ವಿಶಿಷ್ಟ ಟಾಕ್ ಶೋ ನಡೆಸಿಕೊಡಲು ರಮೇಶ್ ಮುಂದಾಗಿದ್ದಾರೆ. ಈಗಾಗಲೇ ಅದರ ಪ್ರೊಮೋ, ಫೋಟೋ ಶೂಟ್ ಎಲ್ಲವೂ ಮುಗಿದಿದ್ದು ಸದ್ಯದಲ್ಲೇ ಶೋ ಶುರುವಾಗಲಿದೆ. ಸುಮ್ಮನೆ ಕೂರಲಾಗದ ರಮೇಶ್ ಏನಾದರೊಂದು ಮಾಡುತ್ತಿರಲಿ ಅಲ್ಲವೇ?

ಅಮರ್ ನಾಥ್ ಎಂಬ ಡೈರೆಕ್ಟರ್

'ದಿಲ್ದಾರ' ಎನ್ನುವ ಚಿತ್ರದ ಮೂಲಕ ತಮ್ಮೊಳಗಿನ ಪ್ರತಿಭಾವಂತ ತಂತ್ರಜ್ಞ ಅರ್ಥಾತ್ ನಿರ್ದೇಶಕ ಅರ್ಥಾತ್ ಬರಹಗಾರನನ್ನು ಕನ್ನಡ ಪ್ರೇಕ್ಷಕರೆದುರು ತೆರೆದಿಟ್ಟ ಅಮರ್ ನಾಥ್ ಎಸ್.ವಿ. ಅನಂತರದ ದಿನಗಳಲ್ಲಿ 'ನಾನು ನಮ್ ಹುಡುಗಿ' ಎಂಬ ಚಿತ್ರವನ್ನು ಶುರು ಮಾಡಿದ್ದು ನಿಮಗೆಲ್ಲ ಗೊತ್ತು. 'ಪ್ಯಾಟೆ ಮಂದಿ ಕಾಡಿಗ್ ಬಂದ್ರು' ಮೂಲಕ ಹೆಸರು ಮಾಡಿದ್ದ ಅರು ಗೌಡ ಆ ಚಿತ್ರದ ಮೂಲಕ ಹೀರೋ ಆಗಿದ್ದೂ ನಿಮಗೆ ಗೊತ್ತು. ಆ ಚಿತ್ರ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.



ಇಂತಹ ಅಮರ್ ನಾಥ್ ಈಗ ಒಂದು ಸಂಶೋಧನಾತ್ಮಕ ಕಥಾವಸ್ತುವನ್ನು ಕೈಗೆತ್ತಿಕೊಂಡು ಸ್ಕ್ರಿಪ್ಟ್ ರೆಡಿ ಮಾಡಿದ್ದಾರೆ. ಈಗಾಗಲೇ ಒಂದಿಬ್ಬರು ನಿರ್ಮಾಪಕರು ಈ ಕಾನ್ಸೆಪ್ಟ್ ಅನ್ನು ಇಷ್ಟಪಟ್ಟು ಹಣ ಹಾಕುವ ಆಸಕ್ತಿ ತೋರಿದ್ದಾರೆ. ಎಲ್ಲ ಅಂದುಕೊಂಡ ಹಾಗೆ ನಡೆದರೆ ಶಿವರಾಜಕುಮಾರ್, ಯೋಗಿ ಈ ಚಿತ್ರದಲ್ಲಿ ನಟಿಸಬಹುದು. ಇಷ್ಟಕ್ಕೂ ಮೂಲತಃ ಬರಹಗಾರರಾಗಿದ್ದ ಅಮರ್ "ಒಬ್ಬ ನಿರ್ದೇಶಕನಿಗೆ ಸಾಹಿತ್ಯ ಜ್ಞಾನ, ಸಂಗೀತ ಜ್ಞಾನ, ಸಾಮಾನ್ಯ ಜ್ಞಾನ, ತಾಂತ್ರಿಕ ಜ್ಞಾನ ಇರಬೇಕಾಗುತ್ತದೆ. ಎಷ್ಟೇ ವಿಭಿನ್ನ, ವಿನೂತನ ಸಬ್ಜೆಕ್ಟ್ ಅನ್ನು ಕೈಗೆತ್ತಿಕೊಂಡು ಸಿನಿಮಾ ಮಾಡಿದರೂ ಒಬ್ಬ ನಿರ್ದೇಶಕ ಈ ಜಮಾನದ ಸಿನಿಪ್ರಿಯರ ಅಭಿರುಚಿ, ನಾಡಿಮಿಡಿತ, ನಿರೀಕ್ಷೆಗಳನ್ನು ಅರಿತು ಕೊಂಡಿರಬೇಕಾಗುತ್ತದೆ. ಒಂದು ಚಿತ್ರ ಕಮರ್ಷಿಯಲ್ಲಾಗಿ ಸ್ಟ್ರಾಂಗಾಗಿ ಇರಬೇಕಾದುದರ ಜೊತೆಗೆ, ಕಲಾತ್ಮಕವಾಗಿಯೂ ತನ್ನ ಆಶಯವನ್ನು ಸೂಚ್ಯವಾಗಿ ಪ್ರೇಕ್ಷಕನಿಗೆ ಹೇಳಬೇಕಾಗುತ್ತದೆ" ಎಂದು ಹೇಳುತ್ತಾರೆ.

ಗಿಮಿಕ್ಕುಗಳನ್ನೇ ಸಿನಿಮಾ ಎಂದುಕೊಂಡಿರುವ ನಿರ್ದೇಶಕರು ಈಗಿರುವ ಪರಿಸ್ಥಿತಿಯಲ್ಲಿ, ತಂಗಳು ರಿಮೇಕು ಚಿತ್ರಗಳನ್ನು ನೋಡಿ ನೋಡಿ ಪ್ರೇಕ್ಷಕ ಸಾಕಾಗಿರುವ ದಾರುಣ ಸಂದರ್ಭದಲ್ಲಿ ಅಮರ್ ನಾಥ್ ಕನ್ನಡ ಪ್ರೇಕ್ಷಕನಿಗೆ ಒಳ್ಳೆಯ ಸಿನಿಮಾವನ್ನು ನೀಡಲಿ ಎಂಬ ಹಾರೈಕೆ.

ನಿರುಪಮಾ ಎಂಗೇಜ್‌ಮೆಂಟ್


ಶಿವಣ್ಣ ಇನ್ನೂ ಹರೆಯದ ಹುಡುಗಿಯರೊಂದಿಗೆ ಹೆಜ್ಜೆ ಹಾಕುವಷ್ಟು ಉತ್ಸಾಹದಲ್ಲಿರುವಾಗಲೇ ಅವರ ಮಗಳು ನಿರುಪಮಾ, ಡಾ.ದಿಲೀಪ್ ಎಂಬ ವರನನ್ನು ವರಿಸಲಿದ್ದಾಳೆ. ಆ ನಿಟ್ಟಿನಲ್ಲಿ ಆಗಸ್ಟ್ ಮೂರರಂದು ಶಾಸ್ತ್ರೋಕ್ತವಾಗಿ ಒಂದು ನಿಶ್ಚಿತಾರ್ಥ ನಡೆಯಲಿದೆ. ಹಾಗೆ ನೋಡಿದರೆ ಈ ನಿಶ್ಚಿತಾರ್ಥ ಏಪ್ರಿಲ್ ತಿಂಗಳಿನಲ್ಲಿಯೇ ನಡೆಯಬೇಕಿತ್ತು. ನಿರುಪಮಾಳ ಅಜ್ಜಿ ಅರ್ಥಾತ್ ಬಂಗಾರಪ್ಪ ಅವರ ಮಡದಿ ಶಕುಂತಲಾ ಬಂಗಾರಪ್ಪ ಅನಾರೋಗ್ಯದಿಂದ ಮಡಿದಿದ್ದರಿಂದಲೂ, ನಿರುಪಮಾ ತಾಯಿ ಗೀತಾ ಶಿವರಾಜಕುಮಾರ್ ಅವರು ಶಿವಮೊಗ್ಗ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದಲೂ... ಈ ಎಂಗೇಜ್‌ಮೆಂಟ್ ಕಾರ್ಯಕ್ರಮ ಮುಂದಕ್ಕೆ ಹೋಗಿತ್ತು, ನಿರುಪಮಾ-ದಿಲೀಪ್ ಜೋಡಿ ಒಟ್ಟಿಗೇ ಓದುವಾಗ ಪರಸ್ಪರ ಪ್ರೀತಿಸಿದರೆಂದೂ, ಈ ಯುವಪ್ರೇಮಿಗಳ ಪ್ರೀತಿಗೆ ಎರಡೂ ಕುಟುಂಬದಿಂದ ಒಪ್ಪಿಗೆ ಸಿಕ್ಕಿರುವುದೆಂದೂ, ಅವೆಲ್ಲದರ ಪರಿಣಾಮ ಈ ನಿಶ್ಚಿತಾರ್ಥವೆಂದೂ ಸುದ್ದಿ ಬಯಲಾಗಿದೆ. ಅಂತೂ ಶಿವಣ್ಣ ಮಾವನಾಗುವ ಕಾಲ ಬಂತು, ಮುಂದೆ ಅಜ್ಜನೂ ಆಗಲಿರುವವರು. ಇನ್ನಾದರೂ ಅವರು ಲಾಂಗು, ಮಚ್ಚುಗಳನ್ನು ಪಕ್ಕಕ್ಕಿಟ್ಟು, ನಿರ್ಜೀವ ಗಿಮಿಕ್ ಪಾತ್ರಗಳನ್ನು ಬದಿಗಿಟ್ಟು ತಮ್ಮ ತಂದೆ ಡಾ.ರಾಜಕುಮಾರ್ ಹಾದಿಯಲ್ಲಿ ತೂಕಬದ್ಧ, ಸತ್ವಶೀಲ, ಪ್ರಬುದ್ಧ ಪಾತ್ರಗಳನ್ನು ಮಾಡಲಿ. ಆ ಮ... ಸಮಾಜಕ್ಕೆ ಒಂದಿಷ್ಟು ಹೇಳಬೇಕಾದ್ದು ಹೇಳಲಿ ಎಂದು ಆಶಿಸೋಣ.





ಮೇಲ್ಕೋಟೆ ಮಂಜ
ಜಗ್ಗೇಶ್-ಐಂದ್ರಿತಾ ರೇ

ಮಂಜು ಮುಖಕ್ಕೆ ಬಣ...



ಆಟೋ ಡ್ರೈವರೊಬ್ಬ ಸಿನಿಮಾ ನಿರ್ಮಾಪಕ ಆಗುವುದೆಂದರೆ ನಿಜಕ್ಕೂ ಪವಾಡವೇ ಸರಿ. ಅಂತಹ ಪವಾಡ ಪುರುಷ ನಿರ್ಮಾಪಕ ಕೆ.ಮಂಜು ಅಲ್ಲದೆ ಮತ್ತಾರು? ಆರಂಭದಿಂದಲೂ ಸವಾಲುಗಳನ್ನು ಎದುರಿಸಿ ಕಡೆಗೆ ಒಂದು ಸ್ಟೇಜಿಗೆ ಬಂದು ನಿಂತಿರುವ ಕೆ.ಮಂಜು ಲೆಕ್ಕಾಚಾರದ ನಿರ್ಮಾಪಕರಾರೂ ಸಾಕಷ್ಟು ಹೊಸಬರನ್ನು ಪ್ರೋತ್ಸಾಹಿಸಿರುವ ವ್ಯಕ್ತಿ. ಯೋಗರಾಜ ಭಟ್ಟರ ಪಟಾಲಮ್ಮಿನಲ್ಲಿದ್ದರೂ ನಿರುಪಯುಕ್ತ ಜೀವಿಯಂತೆ ಕಳೆದುಹೋಗಿದ್ದ ಕಾಮಿಡಿ ಪೀಸ್ ನಾಗಶೇಖರ್ ಥರದವರ ಮೇಲೆ ವಿಶ್ವಾಸ... 'ಅರಮನೆ'ಯಂಥ ಸಿನಿಮಾ ಕೊಟ್ಟವರು. ಈ ಮಂಜು ಅಷ್ಟೆ... ವಿದ್ಯಾವಂತರಲ್ಲದಿದ್ದರೂ ಆಸೆಗಣ್ಣುಗಳಿಂದ ಬರುವಂತ ಕ್ರಿಯಾಶೀಲಜೀವ... ಅವಮಾನಿಸದೆಯೇ ಕಥೆ ಕೇಳುವವರು. ಬಂದವರಿಗೆಲ್ಲರಿಗೂ ಸಿನಿ... ಮಾಡುವುದು ಬಿಡುವುದು ಆಮೇಲಿನ ಮಾತು. ಇಂತಹ ಮಂಜು ... ತಮ್ಮ ಬಹುದಿನದ ಕನಸಾಗಿದ್ದ ನಟನಾಗುವ ಬಯಕೆಯನ್ನು ... ತೀರಿಸಿಕೊಳ್ಳುತ್ತಿದ್ದಾರೆ.

ಹೀರೋ ಆಗಲೇಬೇಕೆಂದು ಚಿತ್ರರಂಗಕ್ಕೆ ಬಂದ ಕೆ.ಮಂಜು 'ಆ... ಮಂಜ' ಎನ್ನುವ ಚಿತ್ರದ ಮೂಲಕ ಹೀರೋ ಆಗಲು ತಯಾರಿ ನಡೆಸಿ... ಆದರೆ ಅದೇಕೋ ಕಾರ್ಯರೂಪಕ್ಕೆ ಬರಲಿಲ್ಲ, ಆದರೀಗ ಮ... ದೇವರಾಜ್ ಅವರ 'ನೀನಾದೆ ನಾ' ಚಿತ್ರದಲ್ಲಿ ಒಂದು ಪುಟ್ಟ, ಮ... ಪಾತ್ರ ಮಾಡುವ ಮೂಲಕ ತಾವು ನಟನಾಗುವ ಆಸೆಯ... ಪೂರೈಸಿಕೊಳ್ಳುತ್ತಿದ್ದಾರೆ. ಕೆ.ಮಂಜು ಮುಂದಿನ ದಿನಗಳಲ್ಲಿ ಇ... ಸಿನಿಮಾಗಳಲ್ಲಿ ನಟಿಸುತ್ತಾರಾ ಅಂತ ನೋಡಬೇಕು.

'ಮಿಸ್ ಮಲ್ಲಿಗೆ' ಮುಂದಿನ ವಾ...



"ನಿಮ್ಮ ಚಿತ್ರದಿಂದ ನಾನು ಮಾಡಿದ್ದ ಸದಭಿರುಚಿ ಚಿತ್ರ 'ಮೈಸೂರು ಮಲ್ಲಿಗೆ'ಗೆ ಅವಮಾನವಾಗುತ್ತಿದೆ, ಟೈಟಲ್ ಚೇಂಜ್ ಮಾಡಿಕೊಳ್ಳಿ" ಅಂತ ನಾಗಾಭರಣರು ತಂಟೆ ಮಾಡಿದ್ದರಿಂದ 'ಮೈಸೂರು ಮಲ್ಲಿಗೆ'ಯಿಂದ 'ಮಿಸ್ ಮಲ್ಲಿಗೆ'ಯಾಗಿ ಹೆಸರು ಬದಲಿಸಿಕೊಂಡ ಡಿಂಗಿ ಡಿಂಗಿ ಚಿತ್ರವು ಈ ವಾರ ತೆರೆಗೆ ಬರಬೇಕಿತ್ತು. ಆದರೆ ತಾಂತ್ರಿಕ ಕಾರಣಗಳಿಂದಾಗಿ ಮುಂದಿನ ವಾರಕ್ಕೆ ಹೋಗಿರುವುದಾಗಿ ವಿತರಕರು ಸ್ಪಷ್ಟಪಡಿಸಿದ್ದಾರೆ. ಕಾಸ್ಟ್ಯೂಮ್‌ಗೆ ಅಷ್ಟೇನೂ ಖರ್ಚಾಗಿರದ ರೂಪಾ ನಟರಾಜ್ ಅಭಿನಯದ ಈ ಚಿತ್ರ ಈಗಾಗಲೇ ಕಾಮಣ್ಣರ ಪಾಲಿಗೆ ನಿರೀಕ್ಷಿತ ಚಿತ್ರ. ಇಷ್ಟಕ್ಕೂ ದೇಶಾದ್ಯಂತ ಈ... ಅತ್ಯಾಚಾರ ಪ್ರಕರಣಗಳು ನಡೆಯುತ್ತಿರುವ ಇಂದಿನ ಭೀಕರ ವಾತಾವರ... ಈ ಬಗೆಯ ಚಿತ್ರಗಳಿಂದ ಆಗಬಹುದಾದ ಅನಾಹುತ... ಯೋಚಿಸಬೇಕಾಗುತ್ತದೆ ಅಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com